# ಪ್ರಸಾದ

**ಸಂಪುಟ 24 ಸಂಚಿಕೆ 5** **ಸೆಪ್ಟೆಂಬರ್-ಅಕ್ಟೋಬರ್ 2009**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**
ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾಶೇಖರ್
ಡಾ. ಎನ್. ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಲೇಖಕರವು

# ಪರಿವಿಡಿ


ಸಂಪಾದಕೀಯ 5

ಗುರುವಾಣಿ 7

ಸಮೂಹ ಮಾಧ್ಯಮ ಮತ್ತು ಸತ್ಯ: ಒಂದು ಧಾರ್ಮಿಕ ದೃಷ್ಟಿಕೋನ 9
**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಶರಣರ ವಚನಗಳಲ್ಲಿ ಮನಸ್ಸು 13
**ಎಚ್. ವಿ. ನಾಗರಾಜರಾವ್**

ವಚನ ವಿಚಾರ 18
**ಓ.ಎಲ್. ನಾಗಭೂಷಣಸ್ವಾಮಿ**

ವೀರಶೈವ-ಲಿಂಗಾಯತ ಧರ್ಮ, ಸಾಹಿತ್ಯ :
ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ 20
**ಡಾ. ಎಸ್.ಆರ್. ಗುಂಜಾಳ**

ವಚನ ಸಾಹಿತ್ಯದಲ್ಲಿ ಆರ್ಥಿಕ ಮೌಲ್ಯಗಳು 36
**ಕೊತ್ತಲವಾಡಿ ಶಿವಕುಮಾರ್**

ಕಾಯಕ ಮೀಮಾಂಸೆ - ಒಂದು ಓದು 44
**ನಂದೀಶ್ ಹಂಚೆ**

ವಾರ್ತಾವಿಹಾರ 52


**ಮುಖ ಪುಟ ಚಿತ್ರ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 94ನೆಯ ಜಯಂತಿ ಮಹೋತ್ಸವ ಸಮಾರಂಭ. ಚಿತ್ರದಲ್ಲಿ: ಡಾ. ಶ್ರೀ ಶಿವಕುಮಾರಸ್ವಾಮಿಗಳವರು, ಪರಮಪೂಜ್ಯ ಜಗದ್ಗುರುಗಳವರು, ರಾಜ್ಯಪಾಲರಾದ ಶ್ರೀ ಭಾರದ್ವಾಜ್‌ರವರು, ಶ್ರೀಮತಿ ಭಾರದ್ವಾಜ್‌ರವರು, ಕು. ಶೋಭಾ ಕರಂದ್ಲಾಜೆರವರು ಹಾಗೂ ಮತ್ತಿತರರು.

## ಲೇಖಕರ ವಿಳಾಸ


**ಎಚ್. ವಿ. ನಾಗರಾಜರಾವ್**
90, 9ನೇ ಕ್ರಾಸ್, ನವಿಲು ರಸ್ತೆ,
ಕುವೆಂಪುನಗರ, ಎ ಮತ್ತು ಬಿ ಬ್ಲಾಕ್
ಮೈಸೂರು 570 023

**ಓ.ಎಲ್. ನಾಗಭೂಷಣಸ್ವಾಮಿ**
2883, ಹಿರಿಮಾಳ ರೆಸಿಡೆನ್ಸಿ
2ನೇ ಕ್ರಾಸ್, ಪಂಪಾಪತಿ ರಸ್ತೆ
ಮೈಸೂರು 570 009

**ಡಾ. ಎಸ್.ಆರ್. ಗುಂಜಾಳ**
ನಂ. 11, ಮೂರನೆಯ ಮಹಡಿ
ಸಂತೂಬಾಯಿ ಅಪಾರ್ಟ್‌ಮೆಂಟ್
ಕೋರ್ಟ್ ರಸ್ತೆ
ಧಾರವಾಡ 580 001

**ಕೊತ್ತಲವಾಡಿ ಶಿವಕುಮಾರ್**
2600, ಗಾಂಧಿನಗರ, 2ನೇ ಕ್ರಾಸ್
ಮಂಡ್ಯ

**ನಂದೀಶ್ ಹಂಚೆ**
C/o ಮಂಜುಳಾ
72/ಬಿ, ವಿನಯ ಮಾರ್ಗ
5ನೇ ಕ್ರಾಸ್, ಮುಖ್ಯರಸ್ತೆ, ಸಿದ್ಧಾರ್ಥನಗರ
ಮೈಸೂರು


# ಸಂಪಾದಕೀಯ

## ನೆರೆಸಂತ್ರಸ್ತರ ನೆರವಿಗೆ ಧಾವಿಸಿದ ಪರಮಪೂಜ್ಯ ಶ್ರೀಗಳು

ಮೈಸೂರು ರಾಜ್ಯದ ಅರಸರಾಗಿದ್ದ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ (1684-1704) ಈ ಭಾಗದಲ್ಲಿ ಬಹುದೊಡ್ಡ ರೈತ ದಂಗೆಯೊಂದು ನಡೆಯಿತು. ಮಂತ್ರಿ ವಿಶಾಲಾಕ್ಷ ಪಂಡಿತನ ಚಿತಾವಣೆಯಿಂದ, ರಾಜನು ರೈತರ ಮೇಲೆ ಇಪ್ಪತ್ತೊಂದು ರೀತಿಯ ತೆರಿಗೆಗಳನ್ನು ಹಾಕಿದ. ತೆರಿಗೆಯನ್ನು ಕೊಡಲಾರದ ರೈತರು ದಂಗೆ ಎದ್ದರು. ಭೂಮಿಯನ್ನು ಉಳುವುದನ್ನೇ ನಿಲ್ಲಿಸಿದರು. ಆಗ ಅವರ ಮೇಲೆ ಸೈನಿಕರಿಂದ ಅನೇಕ ರೀತಿಯ ಅತಿರೇಕಗಳು ನಡೆದುವು. ಆಗ ಈ ಪ್ರಾಂತ್ಯದಲ್ಲಿದ್ದ ವೀರಶೈವ ಮಠಗಳು ನೊಂದ ರೈತರ ಪರವಾಗಿ ನಿಂತವು. ಅವುಗಳಲ್ಲಿ ಪ್ರಮುಖವಾದ ಮಠವೆಂದರೆ ಶ್ರೀ ಸುತ್ತೂರು ಮಠ. ಆ ಕಾರಣಕ್ಕಾಗಿ ರಾಜನ ಕೆಂಗಣ್ಣಿಗೆ ಗುರಿಯಾದ ಮಠದ ಮೇಲೆ ಸೈನಿಕರು ಆಕ್ರಮಣ ಮಾಡಿದರು. ಮಠದ ಒಂದು ಭಾಗ ನಾಶವಾಯಿತು. ಅಲ್ಲಿನ ಕಲ್ಲುಗಳನ್ನೆಲ್ಲಾ ಸಾಗಿಸಿದ ಸೈನಿಕರು, ವರಕೋಡಿನಲ್ಲಿನ ಮತ್ತೊಂದು ಕಾಮಗಾರಿಗೆ ಬಳಸಿದರು. ಆದರೂ ಶ್ರೀಮಠ ರೈತಪರವಾದ ತನ್ನ ನಿಲುವನ್ನು ಬದಲಿಸಲಿಲ್ಲ.

ಕೆಲವು ವರ್ಷಗಳ ಹಿಂದೆ ತಮಿಳುನಾಡಿನ ಮೊದಲಿಯಾರ್ ಕುಪ್ಪಂನಲ್ಲಿ ಸುನಾಮಿಯಿಂದ ಉಂಟಾದ ದುರಂತದಲ್ಲಿ ನೊಂದವರ ಸಹಾಯಕ್ಕೆ ಮೈಸೂರು ಜನತೆ ಹೇಗೆ ಸ್ಪಂದಿಸಿದರು ಎನ್ನುವುದು ಇನ್ನೂ ಅಚ್ಚ ಹಸಿರಾಗಿಯೇ ಇದೆ. ಮೈಸೂರು ನಾಗರೀಕ ವೇದಿಕೆ (MCF - Mysore Citizen Forum) ಯ ಮುಖಾಂತರ ಮೊದಲಿಯಾರ್ ಕುಪ್ಪಂನ ಜನತೆ ಹೊಸಬದುಕನ್ನು ಕಂಡುಕೊಂಡರು. ಅದರ ನೇತೃತ್ವ ವಹಿಸಿ ಎಲ್ಲರಿಗೂ ಮಾರ್ಗದರ್ಶನ ನೀಡಿದವರು ಪರಮಪೂಜ್ಯ ಜಗದ್ಗುರುಗಳವರು. ಈ ತೆರನ ಅವಘಡಕ್ಕೆ ಸ್ಪಂದಿಸುವುದಕ್ಕಾಗಿ ಹುಟ್ಟಿಕೊಂಡ ಈ ನಾಗರೀಕ ವೇದಿಕೆ, ಮೈಸೂರಿನ ಇತಿಹಾಸದಲ್ಲಿಯೇ ಮೊತ್ತಮೊದಲನೆಯದು. ಪ್ರತಿಹಂತದಲ್ಲೂ ವ್ಯವಸ್ಥಿತವಾದ ನಿರ್ವಹಣೆ, ಸಂತ್ರಸ್ತ ಸ್ಥಳದಲ್ಲಿ ನಡೆದ ಅಚ್ಚುಕಟ್ಟಾದ ಪರಿಹಾರಕಾರ್ಯ, ಸಮಾಜದ ಕಡುಬಡುವನೂ ಕೊಟ್ಟಂತಹ ಕಿರುಕಾಣಿಕೆಗೂ ಪಾರದರ್ಶಕವಾದ ಲೆಕ್ಕಪತ್ರಗಳು. ನಿಜಕ್ಕೂ ಪೂಜ್ಯರ ನೇತೃತ್ವದಲ್ಲಿ ನಡೆದ ಈ ಪರಿಹಾರಕಾರ್ಯ ಕನ್ನಡಿಗರು ಹೆಮ್ಮೆ ಪಡಬೇಕಾದುದು. ಏಕೆಂದರೆ ತಮಿಳುನಾಡಿಗೂ ನಮಗೂ ಅನೇಕ ಸಂದರ್ಭಗಳಲ್ಲಿ ಉಂಟಾಗುವ ಶೀತಲ ಘರ್ಷಣೆ ಎಲ್ಲರಿಗೂ ತಿಳಿದದ್ದೇ. ಆದರೂ ಅಂತಹ ಯಾವುದೇ ಭಾವವನ್ನು ಸ್ಥಾಯಿಯಾಗಿಸಿಕೊಳ್ಳದೆ ನೊಂದವರ ನೆರವಿಗೆ ನಮ್ಮವರು ಧಾವಿಸಿದ ಪರಿ ಅನನ್ಯವಾದುದು.

ಇತ್ತೀಚಿನ ದಿನಗಳಲ್ಲಿ ನಮ್ಮ ನಾಡಿನ ಉತ್ತರದ ಹದಿನೈದು ಜಿಲ್ಲೆಗಳ ಜನತೆ ಅನುಭವಿಸಿದ ಯಾತನೆಗೆ ಅನಂತ ಮುಖಗಳು. ಬಹುಪಾಲು ಜನ ತಮ್ಮ ಭವಿಷ್ಯದ ಎಲ್ಲ ಮಾರ್ಗಗಳನ್ನು ಏಕಾಏಕಿ ಕಳೆದುಕೊಂಡರು. ಅಂತಹವರ ನೆರವಿಗೆ ಪರಮಪೂಜ್ಯರ ನೇತೃತ್ವದಲ್ಲಿ ಎಂಸಿಎಫ್ ಮುಂದಾಯಿತು. ಸಹಸ್ರಾರು ಜನರೊಡನೆ ಪೂಜ್ಯರು ನಗರದ ಪ್ರಮುಖ ಬೀದಿಗಳಲ್ಲಿ ಪಾದಯಾತ್ರೆ ನಡೆಸಿ ದ್ರವ್ಯಸಂಗ್ರಹ ಮಾಡಿದರು. ರಸ್ತೆಗಳಲ್ಲಿ ಅವರು ಸಂಚರಿಸುವಾಗ, ಕೂಲಿಕಾರ್ಮಿಕರು, ದಿನನಿತ್ಯದ ಅವಶ್ಯಕತೆಗಳಿಗೆ ದಶಾವತಾರ ಎತ್ತುವ ಸ್ಥಿತಿಯ 'ಶ್ರೀಸಾಮಾನ್ಯ'ರು ತಮ್ಮ ಕಾಣಿಕೆಯನ್ನು ನೀಡಿ ಸಾರ್ಥಕ್ಯಭಾವವನ್ನು ಪಡೆಯುತ್ತಿದ್ದ ಪರಿಯಂತೂ ಹೃದಯ ತುಂಬಿ ಬರುವಂತಿತ್ತು. ಸಂತೋಷಕ್ಕೆ ನೂರು ಮುಖಗಳು. ಆದರೆ ದುಃಖಕ್ಕೆ ಒಂದೇ ಮುಖ. ಅದಕ್ಕೆ ಗಡಿ, ಭಾಷೆ, ಧರ್ಮ, ಜಾತಿ, ಪಂಗಡಗಳ ಪರಿವೆಯಿಲ್ಲ. ಆದ್ದರಿಂದಲೇ ಮನುಷ್ಯ ಅದಕ್ಕೆ ಸ್ಪಂದಿಸುವ ಪರಿಯೂ ಒಂದೇ ತೆರನಾಗಿರುತ್ತದೆ. ಅದೇ ತ್ಯಾಗ, ಮತ್ತು ಸೇವೆ.

ಪರಮಪೂಜ್ಯರು ಅನಂತರ ಸಮಾಜದ ಬೇರೆಬೇರೆ ಸ್ತರದ ನೂರಾರು ಜನ ನಾಗರೀಕರೊಡನೆ ರೈಲಿನಲ್ಲಿ ನೆರೆಪೀಡಿತ ಪ್ರದೇಶಕ್ಕೆ ತೆರಳಿದರು. ಅದೊಂದು ವಿಶ್ವಮಾನವತ್ವದ ಪ್ರತೀಕದಂತಿತ್ತು. ಎಲ್ಲಕಡೆ ಭೇಟಿನೀಡಿ, ಖುದ್ದು ಪರಿಶೀಲನೆ ನಡೆಸಿದ ಸದಸ್ಯರು ಅಕ್ಟೋಬರ್ 16ನೇ ತಾರೀಕಿನಂದು ಸೇರಿದ್ದು ಬಿಜಾಪುರದ ಜ್ಞಾನಯೋಗಾಶ್ರಮದಲ್ಲಿ. ಸಭೆಯನ್ನು ಉದ್ದೇಶಿಸಿ ತಮ್ಮ ಎಂದಿನ ಮಂದ್ರಸ್ತರದ ಧ್ವನಿಯಲ್ಲಿ ಮಾತನಾಡಿದವರು ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು.

ಈ ಜಲ ಪ್ರಳಯದಿಂದ ಕರ್ನಾಟಕವನ್ನು ಉತ್ತರ ದಕ್ಷಿಣವೆಂದು ವಿಭಜನೆ ಮಾಡುತ್ತಿದ್ದವರಿಗೆ ಉತ್ತರವಾಗಿ, ನೊಂದಿರುವ ಈ ಭಾಗದ ಸಂತ್ರಸ್ತರಿಗೆ ಸಹಾಯಹಸ್ತ ಚಾಚಲು ದಕ್ಷಿಣದಿಂದ ಬಂದಿರುವ ದಯಾಳುಗಳು ಸುತ್ತೂರು ಶ್ರೀಗಳವರ ನೇತೃತ್ವದಲ್ಲಿ ಧಾವಿಸಿರುವುದು ಕರ್ನಾಟಕ ಒಂದೆ, ನಾವು ನಿಮ್ಮ ಇಂದಿನ ಸಂಕಷ್ಟದ ದಿನಗಳಲ್ಲಿ ಸಹಾಯಹಸ್ತ ಚಾಚಲು ಬಂದಿದ್ದೇವೆಂದು ಸ್ಪಂದಿಸಿದ್ದಕ್ಕೆ ನಾವೆಲ್ಲರು ಕೃತಜ್ಞರು. ಸುತ್ತೂರು ಶ್ರೀಗಳ ಭೇಟಿ ಈ ಭಾಗದ ಜನರಿಗೆ ಒಂದು ವಿದ್ಯುತ್ ಸಂಚಲನವನ್ನುಂಟುಮಾಡಿದೆ – ಹೀಗೆ ಹೇಳುವಾಗ ಪೂಜ್ಯರು ತುಂಬಾ ಭಾವುಕರಾದರಂತೆ. ಉತ್ತರ ಕರ್ನಾಟಕದ ಜನರ ಹೃದಯದ ಧ್ವನಿಗಳೇ ಪೂಜ್ಯರ ಮಾತಿನಲ್ಲಿ ಒಡಮೂಡಿದಂತಿತ್ತು.

ಅನ್ನದಾಸೋಹಿಗಳಾದ ಜಗದ್ಗುರುಗಳಿಗೆ, ಜ್ಞಾನ ದಾಸೋಹಿಗಳಾದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಕೃತಜ್ಞತೆ ಸಲ್ಲಿಸಿದ ಪರಿಯನ್ನು ಕಂಡಾಗ, ನನ್ನಂತಹ ಸಾಮಾನ್ಯನ ಹೃದಯದ ಸಾಸಿವೆಯ ಮೇಲೆ ಸಾಗರವರಿದಂತೆ ಭಾಸವಾಗುತ್ತದೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ನೆಲ ಹತ್ತಿ ಉರಿದಡೆ ನಿಲಲುಬಹುದೆ?
ಏರಿ ನೀರುಂಬಡೆ, ಬೇಲಿ ಕೈಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆಹಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ

ಎಲ್ಲರ ಬದುಕಿನಲ್ಲಿಯೂ ಒಂದಲ್ಲ ಒಂದು ರೀತಿಯ ಕಷ್ಟಗಳು ಬರುತ್ತವೆ. ಆ ಕಷ್ಟಗಳು ಒಂದು ಮಿತಿಯಲ್ಲಿ ಇದ್ದರೆ ಅದನ್ನು ಬೇರೆಯವರ ನೆರವಿನಿಂದಲಾದರೂ ಪರಿಹರಿಸಿಕೊಳ್ಳಲು ಸಾಧ್ಯ. ಅದು ಅಪರಿಹಾರವೆನಿಸಿದರೆ, ತಾನು ನಂಬಿದ ದೈವವನ್ನು ಮೊರೆಹೋಗುವುದು ಮಾನವಸಹಜ ಗುಣ. ಆದರೆ ತನ್ನನ್ನು ಕಾಪಾಡುವ ಶಕ್ತಿಯೇ ತನಗೆ ವಿರುದ್ಧವಾದರೆ ಇನ್ನಾರ ಮೊರೆಹೋಗಿ ತನ್ನ ಬದುಕನ್ನು ನೇರ್ಪುಗೊಳಿಸಿಕೊಳ್ಳುವುದು? ಒಲೆಯ ಬೆಂಕಿಯ ಶಾಖ ಹೆಚ್ಚಾದರೆ ಅದರಿಂದ ದೂರ ಸರಿದು ನಿಂತರೆ ಬಿಸುಪಿನಿಂದ ತಪ್ಪಿಸಿಕೊಳ್ಳಬಹುದು. ಕೆರೆಗೆ ಏರಿ ಹಾಕುವುದು ಅಲ್ಲಿನ ನೀರನ್ನು ರಕ್ಷಿಸಿಕೊಂಡು ಬೇಸಿಗೆಯಲ್ಲಿ ಉಪಯೋಗ ಪಡೆದುಕೊಳ್ಳಲು. ಆದರೆ ನೀರನ್ನು ರಕ್ಷಿಸಬೇಕಾದ ಏರಿಯೇ ನೀರನ್ನೆಲ್ಲಾ ಕುಡಿದುಬಿಟ್ಟರೆ! ಫಸಲು ನಳನಳಿಸುವ ಹೊಲದ ಸುತ್ತ ಬೇಲಿ ಹಾಕುವುದು ಬೆಳೆಯನ್ನು ದನಗಳಿಂದ ರಕ್ಷಿಸುವುದಕ್ಕಾಗಿ, ಆದರೆ ಆ ಬೇಲಿಯೇ ಎದ್ದು ಫಸಲನ್ನು ತಿಂದು ಬರಿದುಮಾಡಿದರೆ? ಕುಟುಂಬವನ್ನು ರಕ್ಷಿಸಬೇಕಾದ ಗೃಹಿಣಿಯೇ ಮನೆಯಲ್ಲಿ ಕಳ್ಳತನ ಮಾಡಿದರೆ? ಹಾಗೆಯೇ ತನ್ನ ಕರುಳಿನ ಕುಡಿಯನ್ನು ಕಾಪಾಡುವ ಅಮೃತಸಮಾನವಾದ ತಾಯಿಯ ಎದೆಹಾಲೇ ವಿಷವಾಗಿ ಮಗುವನ್ನು ಕೊಲ್ಲುವುದಾದರೆ - ಅದನ್ನು ಯಾರಿಗೆ ಹೇಳಿ ಪರಿಹಾರ ಪಡೆಯುವುದು? ಜೀವಾಧಾರಕವಾದ ಶಕ್ತಿಯೇ ಮಾರಕವಾದರೆ ಬದುಕು ಎಷ್ಟು ದುರ್ಭರವಾಗುತ್ತದೆ, ಅಸಹನೀಯವಾಗುತ್ತದೆ ಎನ್ನುವುದನ್ನು ಒಂದು ಗಳಿಗೆ ಯೋಚಿಸಿದರೆ ಸಾಕು, ಮನುಕುಲದ, ಅಷ್ಟೇ ಏಕೆ ಇಡೀ ಜೀವಸಂಕುಲದ ಪೂರ್ವಾಪರಗಳ ಬಗ್ಗೆಯೇ ನಮ್ಮ ಚಿಂತನೆ ಬೇರೊಂದು ಆಯಾಮವನ್ನು ಪಡೆದುಕೊಳ್ಳುತ್ತದೆ.

ಬಸವಣ್ಣನವರ ಈ ವಚನ ರಚನೆಯ ಹಿನ್ನೆಲೆ ಹಾಗೂ ಆಶಯ ಬೇರೆಯೇ ಆಗಿದ್ದರೂ ಅದು ಅನುದಿನವೂ ಹೇಗೆ ಪ್ರಸ್ತುತವಾಗುತ್ತದೆ ಎನ್ನುವುದಕ್ಕೆ ಕೆಲವು ದಿನಗಳ ಹಿಂದಷ್ಟೇ ಉತ್ತರ ಕರ್ನಾಟಕ ಭಾಗದಲ್ಲಿ ಉಂಟಾದ ಪ್ರಕೃತಿವಿಕೋಪದ ಸಂದರ್ಭ ಸಾಕ್ಷಿಯಾಗಿದೆ. ಆ ಭಾಗವಂತೂ ನಿರಂತರ ಬರಪೀಡಿತ ಪ್ರದೇಶವೆಂದೇ ಪರಿಗಣಿತವಾಗಿದೆ. ಎತ್ತ ನೋಡಿದರೂ

ಫಲವತ್ತಾದ ಮಣ್ಣು. ಆದರೆ ಅದನ್ನು ತಣಿಸಿ ಫಲಭರಿತ ಮಾಡುವ ಮಳೆ ಮಾತ್ರ ಗಗನ ಕುಸುಮ. ಆದರೆ ಈ ಬಾರಿ ಅದೇನಾಯಿತೊ ಏನೋ, ಹತ್ತಾರು ದಿನಗಳಿಂದ ಹಸಿದವನಿಗೆ ಕೊಪ್ಪರಿಗೆಗಟ್ಟಲೆ ಭೂರಿಭೋಜನ ಬಡಿಸಿದಂತೆ ಈ ಭಾಗದ ಹದಿನೈದು ಜಿಲ್ಲೆಗಳ ಮೇಲೆ ಇಡೀ ಆಕಾಶವೇ ಕಳಚಿಬಿದ್ದಂತಾಯಿತು. ವರ್ಷಕ್ಕೆ ಸರಾಸರಿ 500 ಮಿಮೀ ಬೀಳುತ್ತಿದ್ದ ಮಳೆ ಐದಾರು ದಿನಗಳಲ್ಲಿಯೇ 860 ಮಿಮೀ ನಷ್ಟು ಕುಂಭದ್ರೋಣವಾಗಿ ಸುರಿಯಿತು! ಮಳೆಯ ಈ ತೆರನ ರೌದ್ರ ನರ್ತನ ಒಂದು ಶತಮಾನದ ಹಿಂದೆ ಒಮ್ಮೆ ನಡೆದಿತ್ತಂತೆ. ಆದರೂ ಅದು ಮಾಡಿದ ಅನಾಹುತ ಈ ಮಟ್ಟದ್ದಾಗಿರಲಿಲ್ಲ. ಈಗ ಜನ ಅಕ್ಷರಶಃ ಬೀದಿಗೆ ಬಿದ್ದಿದ್ದಾರೆ. ಬೀದಿಗೆ ಎನ್ನುವುದು ಕೇವಲ ರೂಪಕಾತ್ಮಕ ಮಾತು. ಏಕೆಂದರೆ ಅಲ್ಲೆಲ್ಲೂ ಇಂದು ಬೀದಿಗಳೂ ಉಳಿದಿಲ್ಲ.

ಹಗಲು ಇರುಳು ಎರಡೂ ಸಂತ್ರಸ್ತರಿಗೆ ಒಂದೇ ಆಯಿತು. ಸತ್ತ ಜಾನುವಾರುಗಳಿಗೆ ಲೆಕ್ಕವಿಟ್ಟವರಿಲ್ಲ. ಅಷ್ಟಿಷ್ಟು ಕೂಡಿಟ್ಟಿದ್ದ ದವಸಧಾನ್ಯ, ಪುಡಿಕಾಸು ಎಲ್ಲಾ ನೀರಿನಲ್ಲಿ ಹೋಮವಾಯಿತು. ಜಾತಿ ಧರ್ಮ, ಬಡವ ಬಲ್ಲಿದ, ಮೇಲು ಕೀಳು – ಈ ಎಲ್ಲ ಮಾನವನಿರ್ಮಿತ ಗೋಡೆಗಳೆಲ್ಲಾ ಅಲ್ಲಿ ಕೊಚ್ಚಿಹೋಗಿವೆ. ರೋಗಪೀಡಿತರ ನರಳುವಿಕೆ, ಮಕ್ಕಳ ಆಕ್ರಂದನ, ಬರಿಗೈಯಾದವರ ಅಸಹಾಯಕತೆ – ಹೀಗೆ ನೋವಿನ ಸ್ವರೂಪ ಒಂದೆರಡು ತೆರನಲ್ಲ. 'ಜಲಪ್ರಳಯ' ಎನ್ನುವ ಮಾತನ್ನು ನಾವು ಪುರಾಣಗಳಲ್ಲಿ, ಕಥೆಗಳಲ್ಲಿ ಕೇಳಿದ್ದೇವೆ. ಅದರ ಆಟಾಟೋಪದ ಕಿಂಚಿತ್‍ದರ್ಶನ ಇಲ್ಲಿ ಕಂಡುಬಂದಿದೆ. ಅಲ್ಲಲ್ಲಿ ತಲೆ ಎತ್ತಿರುವ ಗಂಜಿಕೇಂದ್ರಗಳು ಹಾಗೂ ಆಶ್ರಯ ತಾಣಗಳಲ್ಲಿ ಜನ ಜೀವಚ್ಛವವಾಗಿದ್ದಾರೆ; ಜೀವ ಹಿಡಿದುಕೊಂಡಿದ್ದಾರೆ – ಒಂದು ಸಾಂತ್ವನಕ್ಕಾಗಿ, ಒಂದು ಬೆಳಕಿನ ಕಿರಣಕ್ಕಾಗಿ!

ಸರ್ಕಾರ ಅವರ ಬದುಕನ್ನು ನೇರ್ಪುಗೊಳಿಸಲು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದೆ. ಅವರೂ ನಮ್ಮಂತೆಯೇ ನೆಮ್ಮದಿಯಾಗಿ ಬದುಕಬೇಕಾಗಿದೆ. ಅವರ ಕಣ್ಣುಗಳಲ್ಲಿ ಆನಂದದ ಬೆಳಕು ತುಳುಕಬೇಕಿದೆ. ಅದಕ್ಕಾಗಿ ಎಲ್ಲರ ಸಹಾಯಹಸ್ತಗಳು ಬೇಕಾಗಿದೆ. ಈಗಾಗಲೇ ನಾಡಿನ ಸಹಸ್ರಾರು ಜನ ನೆರವು ನೀಡಿದ್ದಾರೆ. ಸಂಘಸಂಸ್ಥೆಗಳೂ ಉದಾರವಾಗಿ ದೇಣಿಗೆ ನೀಡುತ್ತಿವೆ. ನಿತ್ಯವೂ ನೆರವಿನ ಮಹಾಪೂರವೇ ಹರಿದುಬರುತ್ತಿದೆ. ನಾಡವರ ದಾಸೋಹಗುಣವನ್ನು ಕಂಡು ಮನಸ್ಸು ತುಂಬಿಬಂದಿದೆ. ಈ ಮಹಾಪೂರದ ಒಂದು 'ಹನಿ'ಯಾದರೂ ತಮ್ಮದಾಗಬೇಕು; ನಿಮ್ಮ ಸಂಪತ್ತಿನ ಒಂದಿನಿತು ಭಾಗ ಸತ್ಪಾತ್ರಕ್ಕೆ ಸಲ್ಲುವಂತಾಗಬೇಕು ಎನ್ನುವುದು ನಮ್ಮ ಬಯಕೆ; ಅದು ನಿಮ್ಮ ಬಯಕೆಯೂ ಆಗಲಿ ಎಂದು ಆಶಿಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಮೂಹ ಮಾಧ್ಯಮ ಮತ್ತು ಸತ್ಯ: ಒಂದು ಧಾರ್ಮಿಕ ದೃಷ್ಟಿಕೋನ

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ನಾವಿಂದು ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಇದ್ದೇವೆ. ಕಳೆದ ಹಲವು ದಶಕಗಳಲ್ಲಿ ಮಾಹಿತಿ ಪ್ರಸರಣದಲ್ಲಿ ಅಸಂಖ್ಯಾತ ಬದಲಾವಣೆಗಳನ್ನು ಕಂಡಿದ್ದೇವೆ. ತಂತ್ರಜ್ಞಾನದಲ್ಲಿ ಆಗಿರುವ ಕ್ರಾಂತಿ ಇಡೀ ವಿಶ್ವವನ್ನು ಒಂದು ಜಾಗತಿಕ ಗ್ರಾಮಕ್ಕೆ ಇಳಿಸಿಬಿಟ್ಟಿದೆ. ಮಾಧ್ಯಮದ ವಿಸ್ತರಣೆಯ ಅತ್ಯಂತ  ಇತ್ತೀಚಿನ ಪ್ರಮುಖ ಅವತಾರವಾದ 'ಅಂತರ್ಜಾಲ' (ಇಂಟರ್‌ನೆಟ್) ಬೆರಳತುದಿಯಲ್ಲೇ ಮಾಹಿತಿಗಳನ್ನು ಅಗತ್ಯವೆನಿಸಿದಾಗಲೆಲ್ಲ ಒದಗಿಸುತ್ತದೆ. ಆಧುನಿಕ ಯುಗದಲ್ಲಿ ಮಾಧ್ಯಮವು ಜನರ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನು ಬೀರುತ್ತಿದೆ. ಬೇರೆಲ್ಲಕ್ಕಿಂತಲೂ ಮಿಗಿಲಾಗಿ ಜನರು ಮುದ್ರಿತ ಮತ್ತು ವಿದ್ಯುನ್ಮಾನದಲ್ಲಿ ಪ್ರಕಟವಾದ ವಿಷಯಗಳನ್ನು ನಂಬುತ್ತಾರೆ. ಈ ಮಾಧ್ಯಮವೇ ಕೋಟ್ಯಂತರ ಜನರಿಗೆ ವಾಸ್ತವಾಂಶವನ್ನು ಒದಗಿಸುತ್ತದೆ. ಆದರೆ ಇಲ್ಲಿ ಚರ್ಚಾಸ್ಪದ ಅಂಶವೆಂದರೆ, ಈ ಮಾಧ್ಯಮಗಳು ಎಷ್ಟರಮಟ್ಟಿಗೆ ಸತ್ಯಕ್ಕೆ ನಿಷ್ಠವಾಗಿರುತ್ತವೆ?

> ಹಿಂದಿನಕಾಲದಲ್ಲಿ ಜನರಿಗೆ ಬೋಧಿಸುವ ಸಲುವಾಗಿ ಸಾಧುಸಂತರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾಗೂ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು. ಅವರು ಈಗ ಲಕ್ಷಾಂತರ ಮಂದಿಯನ್ನು ಏಕಕಾಲದಲ್ಲಿ ತಲುಪಬಲ್ಲರು ಮತ್ತು ತಮ್ಮ ಭಾವನೆಗಳನ್ನು ಹಾಗೂ ಆದರ್ಶಗಳನ್ನು ತಲುಪಿಸಬಲ್ಲರು.

ಘಟನೆಗಳ ಬಗ್ಗೆ ಏಕಪಕ್ಷೀಯವಾಗಿ ವರದಿ ಮಾಡುವುದಾಗಲಿ ಇಲ್ಲವೆ ಒಂದೇ ಅಭಿಪ್ರಾಯಕ್ಕೆ ಒತ್ತು ಕೊಡುವುದರಿಂದಾಗಲಿ ಮಾಧ್ಯಮಗಳು ಜನರನ್ನು ಸತ್ಯದ ಕಡೆಗೆ ಕರೆದೊಯ್ಯುವುದಿಲ್ಲ. ಅವು ನಿಷ್ಪಕ್ಷಪಾತವಾಗಿ ಇರಬೇಕು ಮತ್ತು ಅದು ಕೇವಲ ಸಾಕ್ಷೀಪ್ರಜ್ಞೆಯಿಂದ ಕಾರ್ಯ ನಿರ್ವಹಿಸಬೇಕು. ಅದು ಎಂದಿಗೂ ಪಕ್ಷಪಾತ ನಿಲುವನ್ನು ತಳೆಯಬಾರದು.

> ಸತ್ಯವನ್ನು, ಅದರ ಪರಿಶುದ್ಧ ರೂಪದಲ್ಲಿ, ತೋರಿಸಿಕೊಡಲು ಜನರನ್ನು ಮೂಢ ನಂಬಿಕೆಗಳಿಂದ ಸೆಳೆಯುವ ಅತಿ ಜರೂರಿನ ಅಗತ್ಯ ಉದ್ಭವಿಸಿತು. ಆದ್ದರಿಂದಲೇ ಮೌಖಿಕ ಮತ್ತು ಮುದ್ರಿತ ಮಾಧ್ಯಮಗಳ ಅವಲಂಬನೆ ಅಗತ್ಯವಾಯಿತು.

---

ದಿನಾಂಕ 20.11.2005 ರಂದು ಶ್ರೀ ಆದಿಚುಂಚನಗಿರಿ ಶ್ರೀಕ್ಷೇತ್ರದಲ್ಲಿ ಜರುಗಿದ ಫ್ಯಾರೆಕ್ ಮಹತ್ವಪೂರ್ಣ ಉಪನ್ಯಾಸಮಾಲಿಕೆಯಲ್ಲಿ ನೀಡಿದ ಅನುಗ್ರಹ ಭಾಷಣ

ಧರ್ಮವು ನಿರಂತರವಾಗಿ ಸತ್ಯಾನ್ವೇಷಣೆಯಲ್ಲಿ ತೊಡಗಿರುತ್ತದೆ. 'ಸತ್ಯಾನ್ನಾಸ್ತಿ ಪರೋ ಧರ್ಮಃ' (ಸತ್ಯಕ್ಕಿಂತ ದೊಡ್ಡ ಧರ್ಮ ಬೇರೊಂದಿಲ್ಲ). ಧಾರ್ಮಿಕ ದೃಷ್ಟಿಕೋನದಿಂದ, ಎಲ್ಲ ಜನರೂ ಸತ್ಯವನ್ನೇ ನುಡಿಯುವಂತೆ ಮಾಡಿದರೆ, ಮತ್ತು ಅದು ಎಲ್ಲರಿಗೂ ಸಾಧ್ಯವಾಗುವಂತೆ ಮಾಡಿದರೆ, ಅದೇ ಅತ್ಯಂತ ಆದರ್ಶದ ಪರಿಸ್ಥಿತಿಯಾಗುತ್ತದೆ. ಈ ದಿಸೆಯಲ್ಲಿ ಮಾಧ್ಯಮಗಳು ಬಹು ಮಹತ್ತರ ಪಾತ್ರವನ್ನು ನಿರ್ವಹಿಸಬೇಕಾಗಿದೆ. ವಿದ್ಯುನ್ಮಾನ ಮಾಧ್ಯಮಕ್ಕೆ 'ಕಣ್ಣು' ಇರುವುದರಿಂದ ಅದು ಪ್ರತಿಯೊಂದು ವಸ್ತುವನ್ನು ಮತ್ತು ಘಟನೆಯನ್ನು ನೋಡುವ ಸಾಮರ್ಥ್ಯ ಹೊಂದಿದೆ. ಪ್ರತಿಯೊಂದು ದೇಶದ ಪ್ರತಿಯೊಂದು ಮನೆಗೂ, ಪ್ರಪಂಚದ ಎಲ್ಲ ಮೂಲೆಮೂಲೆಗಳಿಗೂ ಸತ್ಯವನ್ನು ಕೊಂಡೊಯ್ಯುವ ಸಾಮರ್ಥ್ಯ ಮಾಧ್ಯಮಕ್ಕಿದೆ. ನಮ್ಮ ಮಕ್ಕಳ ಮತ್ತು ಯುವಕರ ಮನಸ್ಸುಗಳನ್ನು ಅದು ರೂಪಿಸಬಲ್ಲದು. ಪ್ರತಿಯೊಬ್ಬರ ಮನಸ್ಸಿನಲ್ಲೂ ದೊಡ್ಡ ದೊಡ್ಡ ಮೌಲ್ಯಗಳನ್ನು ಅಚ್ಚೊತ್ತಿಸುವಂತೆ ಮಾಡಬಲ್ಲದು. ಎಲ್ಲ ಮಹಾನ್ ಧರ್ಮಗಳಲ್ಲಿ ಅಡಗಿರುವ ಸತ್ಯದ ಸುಗಂಧವನ್ನು ಹರಡಬಯಸುವವರಿಗೆ ಇದೊಂದು ದೊಡ್ಡ ಅವಕಾಶ. ಸಾಮರಸ್ಯ, ಸ್ನೇಹ, ಸಾಕ್ಷಾತ್ಕಾರ ಮತ್ತು ಅಮೃತತ್ವಗಳ ಸಂದೇಶಗಳನ್ನು ಬಯಸುವವರಿಗೆಲ್ಲ ಅವುಗಳನ್ನು ಆಧುನಿಕ ಮಾಧ್ಯಮಗಳ ಮೂಲಕ ನೀಡಬಹುದಾಗಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳ ಸಂದರ್ಭದಲ್ಲಿ ಮುದ್ರಣ ಮಾಧ್ಯಮದ ಮಹತ್ವವನ್ನು ನಾವು ಕಡೆಗಣಿಸುವ ಹಾಗೆಯೇ ಇಲ್ಲ. ಜನರನ್ನು ತಲುಪಲು ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳೆರಡೂ ಪ್ರಮುಖ ಸಾಧನಗಳಾಗಿವೆ. ಲೌಕಿಕ ಅಗತ್ಯಗಳ ಎಲ್ಲ ಸ್ವರೂಪಗಳೂ ಈ ಎರಡು ಪ್ರಬಲ ಸಾಧನಗಳ ಮೇಲೆ ಬಹುಮಟ್ಟಿಗೆ ಅವಲಂಬಿತವಾಗಿವೆ. ಸತ್ಯದ ಅನ್ವೇಷಣೆ ಒಂದು ಕೊನೆಯಿಲ್ಲದ ಹೋರಾಟವಾಗಿದೆ. ಇಂದಿನ ಯುಗದಲ್ಲಿಯೂ ಮನುಷ್ಯರು, ಹಿಂದಿನ ಕಾಲದಂತೆಯೇ, ಮೂಲಭೂತ ಸತ್ಯ ಮತ್ತು ಸಾಂದರ್ಭಿಕ ಸತ್ಯಗಳೆರಡರ ಅನ್ವೇಷಣೆಯಲ್ಲಿ ತೊಡಗಿದ್ದಾರೆ. ಕೆಲವರಿಗೆ ಸತ್ಯವೆಂಬುದು ಸಾಪೇಕ್ಷವಾದರೆ ಮತ್ತೆ ಕೆಲವರಿಗೆ ಅದು ನಿರಪೇಕ್ಷ. ಸತ್ಯವೆಂಬುದು, ಒಟ್ಟಿನಲ್ಲಿ, ನೈತಿಕತೆ ಮತ್ತು ಸನ್ನಡತೆಗಳಿಂದ ಕೂಡಿದ ಮುಖ್ಯ ಮೌಲ್ಯಗಳಿಗೆ ಅಧೀನವಾಗಿರುತ್ತದೆ. ಅದನ್ನು ಕೇವಲ ವೈಚಾರಿಕ ದೃಷ್ಟಿಕೋನದಿಂದ ಮಾತ್ರವೇ ನೋಡಬಾರದು. ನಂಬಿಕೆಯ ದೃಷ್ಟಿಕೋನದಿಂದಲೂ ಅದನ್ನು ನೋಡಬೇಕು.

ಬಹು ಹಿಂದಿನಿಂದಲೂ, ಸತ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ನಂಬಿಕೆ ಬಹು ಮುಖ್ಯ ಪಾತ್ರ ವಹಿಸಿದಂತೆ ಕಾಣುತ್ತದೆ. ಭಾರತದ ಭಕ್ತಿಪಂಥ ಚಳವಳಿ, ಪರ್ಷಿಯಾದ ಸೂಫಿ ಚಳವಳಿ, ಯೂರೋಪಿನ ಮತಧರ್ಮಶಾಸ್ತ್ರದ ಬೋಧನೆಗಳು ಸತ್ಯದ ಸ್ವರೂಪವನ್ನು ಅರ್ಥಮಾಡಿಕೊಳ್ಳುವಲ್ಲಿ ಅನೇಕ ಮಾರ್ಗದರ್ಶಿ ಸೂತ್ರಗಳನ್ನು ನೀಡಿದುವು. ಅನೇಕ ದೇಶಗಳ ಅನುಭಾವಿಗಳು ಪರಮಸತ್ಯಕ್ಕೆ ಬೆಳಕಿನ ಹಾದಿಗಳನ್ನು ತೋರಿಸಿಕೊಟ್ಟರು. ಹಿಂದಿನ ಕಾಲದಲ್ಲಿ ಈಗಿನಂತೆ ಮಾಧ್ಯಮಗಳ ಸೌಲಭ್ಯಗಳು ಇಲ್ಲದೆ ಇದ್ದುದರಿಂದ, ಅನೇಕ ಮಂದಿ ದಾರ್ಶನಿಕರು ಮತ್ತು ಆದರ್ಶವಾದಿಗಳು ಪರಿವ್ರಾಜಕರಾಗಿದ್ದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುತ್ತಿದ್ದರಲ್ಲದೆ ಸತ್ಯಾನ್ವೇಷಕರಿಗೆ ಮಾರ್ಗದರ್ಶಕರಾಗಿದ್ದರು. ಬುದ್ಧ, ಕ್ರಿಸ್ತ,



ಮಹಮ್ಮದ್, ಅಲ್ಲಮ, ಕನ್‌ಫ್ಯೂಷಿಯಸ್ ಮತ್ತು ಇನ್ನೂ ಅನೇಕ ಮಂದಿ ಈ ಗುಂಪಿಗೆ ಸೇರಿದ್ದರು. ಸಾಮಾನ್ಯ ಜನರನ್ನು ಸತ್ಯದ ನೆಲೆವೀಡಿಗೆ ಕರೆದುಕೊಂಡು ಹೋಗುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಇದು ಅಚ್ಚರಿಯೆನಿಸಿದರೂ ನಿಜವಾದ ಸಂಗತಿಯಾಗಿತ್ತು. ಹಲವಾರು ವಿವರಣೆಗಳಿಂದ ಕೂಡಿದ್ದ ಈ ನಿಟ್ಟಿನಲ್ಲಿ ದಾರ್ಶನಿಕರ ಪ್ರಯತ್ನ ವಿಪುಲವಾಗಿದ್ದರೂ ಹೆಚ್ಚಿನ ಜನರು ವರ್ಣಮಯ ಹಾಗೂ ಮೂಢನಂಬಿಕೆಗಳಿಂದ ಆಕರ್ಷಿತರಾಗಿದ್ದರು. ಆದರೂ, ವಿಚಾರವಾದಿ ದಾರ್ಶನಿಕರು ಮತತತ್ತ್ವಗಳ ಧಾರ್ಮಿಕ ಆಚರಣೆಗಳನ್ನು ತಿರಸ್ಕರಿಸಿದರಲ್ಲದೆ ತಾರ್ಕಿಕ ಬೆಳಕಿನಲ್ಲಿ ಧರ್ಮವನ್ನು ಮರುನಿರೂಪಿಸಲು ಪ್ರಯತ್ನಿಸಿದರು. ಅವರ ಪಾಲಿಗೆ ಪರಿಪೂರ್ಣ ಸ್ವರೂಪದ ಸತ್ಯವೇ ಎಲ್ಲ ಸಾಧನೆಗಳ ಅಂತಿಮ ಗುರಿಯಾಗಿತ್ತು.

ಜನಸಾಮಾನ್ಯರು ಮೂಢನಂಬಿಕೆಗಳಿಗೆ ಬಲಿಪಶುಗಳಾಗಿದ್ದಾರೆ ಎಂಬುದನ್ನು ಮಹಾನ್ ಧಾರ್ಮಿಕ ಮುಖಂಡರು ಮನಗಂಡರು. ಹಾಗಾಗಿ ಜನರನ್ನು ಮೂಢನಂಬಿಕೆಗಳಿಂದ ದೂರಮಾಡುವ ಜೊತೆಗೆ ಪರಿಶುದ್ಧ ಸತ್ಯದ ಕಡೆ ಅವರನ್ನು ಕರೆದೊಯ್ಯುವ ತುರ್ತು ಅಗತ್ಯ ಉಂಟಾಯಿತು. ಆದ್ದರಿಂದ ಅವರಿಗೆ ಮೌಖಿಕ ಮತ್ತು ಮುದ್ರಿತ ಮಾಧ್ಯಮಗಳ ಆಸರೆಯನ್ನು ಪಡೆಯುವುದು ಅಗತ್ಯವಾಯಿತು. ಆಧುನಿಕ ಯುಗದಲ್ಲಿ ಕೆಲವು ಧಾರ್ಮಿಕ ಸಂಸ್ಥೆಗಳು ತಮ್ಮದೇ ಮುದ್ರಣಾಲಯಗಳನ್ನು ಹೊಂದಿದ್ದು ಅಲ್ಲಿ ತಮ್ಮದೇ ಪತ್ರಿಕೆಗಳನ್ನು ಮತ್ತು ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಮುದ್ರಿತ ಶಬ್ದಗಳ ವಿಷಯದಲ್ಲಿ ಜನರಿಗೆ ಅಪಾರ ನಂಬಿಕೆ ಇರುವುದರಿಂದ ಓದುಗರಿಗೆ ಪರಿಶುದ್ಧ ಸತ್ಯಸಂಗತಿಗಳನ್ನು ಮಾತ್ರ ನೀಡಬೇಕು ಹಾಗೂ ಓದುಗರು ದಾರಿ ತಪ್ಪಿ ಹೋಗದಂತೆ ಎಚ್ಚರ ವಹಿಸಬೇಕು. ಇದಕ್ಕಾಗಿ ಮಾಧ್ಯಮಗಳ ಜನರು ಪರಿಪೂರ್ಣ ರೂಪದ ಸತ್ಯದ ಕಟ್ಟಾ ಸಮರ್ಥಕರಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಎಂತಹ ಪ್ರಲೋಭನಗೊಳಿಸುವ, ಉದ್ರೇಕಗೊಳಿಸುವ ಪ್ರಸಂಗಗಳಿದ್ದರೂ, ಸುಲಭವಾಗಿ ನಂಬಿಬಿಡುವಂಥ ಮುಗ್ಧ ಜನರಿಂದ ಅಂಥ ಸಂಗತಿಗಳನ್ನು ದೂರವಿಡಬೇಕು. ಮತಧರ್ಮಾತೀತವಾದ ಸತ್ಯವು ಧಾರ್ಮಿಕ ಸತ್ಯ ಅಥವಾ ಅಧ್ಯಾತ್ಮ ಸತ್ಯಕ್ಕೆ ಹೆಗಲೆಣೆಯಾಗಿ ನಿಲ್ಲುವ ಕಾಲ ಒಂದು ದಿನ ಬರಲೇಬೇಕು. ಹಾಗಾದಾಗ ಮಾತ್ರವೇ ಜ್ಞಾನಪ್ರಸಾರ ಮಾಡುತ್ತಿರುವ ಕಟ್ಟಾ ಸಮರ್ಥಕರು ಸತ್ಯವನ್ನು ಮನಗಂಡಿರುವ ಕಟ್ಟಾ ಸಮರ್ಥಕರ ಜೊತೆಜೊತೆಯಲ್ಲಿ ನಿಲ್ಲಬಲ್ಲರು.

ನಮ್ಮ ದಾರ್ಶನಿಕರು ಮತ್ತು ನೈಜ ಧಾರ್ಮಿಕ ಮುಖಂಡರು ಇದನ್ನು ಅನಾದಿಕಾಲದಿಂದಲೂ ಮನಗಂಡಿದ್ದಾರೆ. ಹಾಗಾಗಿ ಅವರು ಜ್ಞಾನದ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಅವರು ಪಟ್ಟುಬಿಡದೆ 'ನಡೆ' ಮತ್ತು 'ನುಡಿ'ಗಳ ಸಮನ್ವಯಕ್ಕಾಗಿ ಹೋರಾಡಿದ್ದಾರೆ. ಕನ್‌ಫ್ಯೂಷಿಯಸ್ಸಿನಂಥ ದಾರ್ಶನಿಕರು ನಡೆಯಲ್ಲಿ ಮತ್ತು ನುಡಿಯಲ್ಲಿ ಪಾರದರ್ಶಕತೆಯನ್ನು ಸ್ಥಾಪಿಸುವ ಮಟ್ಟಕ್ಕೆ ಹೋದರು. ಅವರ ಈ ನಂಬಿಕೆಯೇ ಧರ್ಮವಾಗಿ ಮೂರ್ತಗೊಂಡಿತು.

ನಮ್ಮ ಬಹಳಷ್ಟು ಶರಣರು, ಭಕ್ತಿಪಂಥದ ಕವಿಗಳು, ಸ್ವಾಮಿ ವಿವೇಕಾನಂದರು ಮತ್ತು ಅವರಂಥವರು ಕೇವಲ ಸಾಂಪ್ರದಾಯಿಕ ಧಾರ್ಮಿಕ ಸಿದ್ಧಾಂತಗಳಲ್ಲಿ ನಂಬಿಕೆಯನ್ನಿಡುವುದಕ್ಕಿಂತ ಮಿಗಿಲಾಗಿ ಪ್ರಖರ ವಿಚಾರವಾದಿಗಳಾಗಿದ್ದರು. ಮಾನವನ ಮನಸ್ಸು, ನಡವಳಿಕೆ ಮತ್ತು

ವ್ಯವಹಾರ ಕೌಶಲಗಳ ಸ್ವಭಾವವನ್ನು ಕುರಿತಂತೆ ಅವರು ಮೂಕವಿಸ್ಮಿತರಾಗಿದ್ದರು. ತಮ್ಮ ಸಮಕಾಲೀನರ ಮಧ್ಯೆ ನೆಲೆಗೊಂಡಿದ್ದ ಎಲ್ಲ ರೀತಿಯ ಬೆದರಿಕೆಗಳ ಮತ್ತು ಉಪದ್ರವಗಳ ವಿರುದ್ಧ ಅವರು ದಣಿವಿಲ್ಲದೆ ಬೋಧಿಸಿದರು. ಅವರ ಅಂತಿಮ ಗುರಿ 'ಸರ್ವೇ ಜನಾಃ ಸುಖಿನೋ ಭವಂತು' (ಎಲ್ಲರೂ ಸುಖವಾಗಿರಲಿ) ಎಂಬುದಾಗಿತ್ತು. ಸಾಮಾಜಿಕ ಶ್ರೇಣಿಯಲ್ಲಿ ಅತ್ಯಂತ ಕೆಳಗಿನ ವ್ಯಕ್ತಿಗೂ ಈ ಅದೃಷ್ಟ ದೊರಕಬೇಕೆಂಬುದು ಅವರ ಬಯಕೆಯಾಗಿತ್ತು.

ಮಾಧ್ಯಮಗಳು ಒಂದು ಸಮಗ್ರ ದೃಷ್ಟಿಯನ್ನು ಹೊಂದಿರುತ್ತವೆ ಮತ್ತು ಎಂಥದೇ ಪ್ರಲೋಭನೆಗಳನ್ನೊಡ್ಡಿದರೂ ಅವು ಸದಾ ಸತ್ಯವನ್ನು ಸಾರಲು ಎದ್ದು ನಿಲ್ಲುತ್ತವೆ ಎಂದು ನಾವು ಪ್ರಾಮಾಣಿಕವಾಗಿ ನಂಬಿದ್ದೇವೆ.

ನಾವು ಸ್ವತಃ ಒಬ್ಬ ಧಾರ್ಮಿಕ ವ್ಯಕ್ತಿಗಳಾಗಿ, ಮಾಧ್ಯಮವು ಕ್ಷುಲ್ಲಕ ಮನರಂಜನೆಗೆ ಮತ್ತು ಉದ್ರೇಕಕಾರಿ ಸಂಗತಿಗಳಿಗಷ್ಟೆ ತಮ್ಮನ್ನು ಸೀಮಿತಗೊಳಿಸಿಕೊಳ್ಳಬಾರದೆಂದು ನಿರೀಕ್ಷಿಸುತ್ತೇವೆ. ಅದು ಜ್ಞಾನಪ್ರಬೋಧನೆಯ ಕಡೆಗೂ ಅಷ್ಟೇ ಮಹತ್ವವನ್ನು ನೀಡಬೇಕು. ಉದ್ರೇಕಕಾರಿ ಸಂಗತಿಗಳನ್ನು ಪ್ರಕಟಿಸುವ ಮೂಲಕ ಅಗ್ಗದ ಜನಪ್ರಿಯತೆಯನ್ನು ಗಳಿಸಲು ಪ್ರಯತ್ನಿಸುವುದು ಅನೈತಿಕವಾದುದು. ತಮ್ಮ ನೈಜವಾದ, ನಿಷ್ಪಕ್ಷಪಾತವಾದ ಮತ್ತು ನಿರ್ಭೀತ ವರದಿಗಳ ಆಧಾರದ ಮೇಲೆ ವೀಕ್ಷಕರ ಮತ್ತು ಓದುಗರ ಸಮುದಾಯ ಬೆಳೆಯುವಂತೆ ಮಾಡಬೇಕು. ಇದರಿಂದಾಗಿ ಭಾರತೀಯ ಮಾಧ್ಯಮಗಳು ಸತ್ಯ ಮತ್ತು ಶಾಂತಿಯ ದೂತರಾಗಿ ಮುಂದುವರಿಯುತ್ತವೆ ಎಂಬ ನಂಬಿಕೆ ನಮಗಿದೆ.

ಸತ್ಯವನ್ನು ಆರಾಧಿಸುವುದರಿಂದ ಅದು ಒಂದು ಆದರ್ಶದ ವಾದವೆಂದು ನಾವು ಭಾವಿಸಬಾರದು. ಅದೊಂದು ಯಾರೂ ಸಾಧಿಸಬಹುದಾದ ನೈಜ ಸ್ಥಿತಿ. ತೈತ್ತಿರೀಯ ಉಪನಿಷತ್ತಿನ 'ಸತ್ಯಂ ವದ' –ಸತ್ಯವನ್ನು ನುಡಿ– ಎಂಬ ಸೂತ್ರವನ್ನು ಮತ್ತು ಬಸವಣ್ಣನವರ 'ಹುಸಿಯ ನುಡಿಯಲುಬೇಡ' –ಸುಳ್ಳನ್ನು ಹೇಳಬೇಡ – ಎಂಬ ಸೂಳ್ನುಡಿಯನ್ನು ನಾವು ಮನಸ್ಸಿನಲ್ಲಿ ನೆಲೆಗೊಳಿಸೋಣ. ಮಹಾನ್ ರಷ್ಯನ್ ಕವಿ ಮಾಯ್‌ಕೋವ್‌ಸ್ಕಿಯ ಈ ಸಾಲುಗಳಿಂದ ಈ ಟಿಪ್ಪಣಿಯನ್ನು ಮುಕ್ತಾಯಗೊಳಿಸೋಣ:

*ಎಲ್ಲೆಲ್ಲಿ ನೋವಿದೆಯೊ*
*ಅಲ್ಲಿ ರುವೆ ನಾನಲ್ಲಿ*
*ಹರಿಯುವ ಒಂದೊಂದು*
*ಕಣ್ಣೀರ ಹನಿಗೂ*
*ನಾನೇ ಶಿಲುಬೆಗೇರುವೆ*

ಈ ಸಾಲುಗಳು ಕೇವಲ ಮಾಯ್‌ಕೋವ್‌ಸ್ಕಿಯ ನುಡಿಗಳಲ್ಲ. ಈ ನುಡಿಗಳು ಜೀಸಸ್, ಮಹಮ್ಮದ್, ನಮ್ಮ ಹಿಂದಿನ ಮಹಾನ್ ಸಾಧುಸಂತರು, ಬುದ್ಧ, ಬಸವ ಮತ್ತು ಸ್ವಾಮಿ ವಿವೇಕಾನಂದರವೂ ಹೌದು. ಈ ನುಡಿಗಳು ಆಧುನಿಕ ಮಾಧ್ಯಮಗಳ ನುಡಿಗಳೂ ಆಗಬೇಕು. □

# ಶರಣರ ವಚನಗಳಲ್ಲಿ ಮನಸ್ಸು

**ಎಚ್. ವಿ. ನಾಗರಾಜರಾವ್**

ಮಾನವನ ಏಳುಬೀಳುಗಳಿಗೆಲ್ಲ ಮುಖ್ಯ ಕಾರಣ ಅವನ ಮನಸ್ಸು. ಲೌಕಿಕವಾಗಿ ಮಾತ್ರವಲ್ಲ, ಆಧ್ಯಾತ್ಮಿಕವಾಗಿ ನೋಡಿದರೂ ಮನಸ್ಸೇ ಬಂಧ-ಮೋಕ್ಷಗಳಿಗೆ ಕಾರಣವೆನ್ನುತ್ತಾರೆ ಜ್ಞಾನಿಗಳು.

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ |
ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಮನಃ ||

ವಿಷಯಾಸಕ್ತಿಯಲ್ಲಿ ಮುಳುಗಿದ ಮನಸ್ಸು ಬಂಧನವನ್ನು ತಂದರೆ, ವಿಷಯಗಳನ್ನು ತ್ಯಜಿಸಿದ ಶುದ್ಧ ಮನಸ್ಸು ಮುಕ್ತಿಯನ್ನು ತಂದುಕೊಡುತ್ತದೆ. ಮನಸ್ಸಿನ ಸಮಸ್ಯೆ ಏನೆಂದರೆ ಅದು ಚಂಚಲ. 'ಚಂಚಲಂ ಹಿ ಮನಃ ಕೃಷ್ಣ' ಎನ್ನುತ್ತಾನೆ ಅರ್ಜುನ ಭಗವದ್ಗೀತೆಯಲ್ಲಿ. ಬಸವಣ್ಣನವರು ಒಂದು ವಚನದಲ್ಲಿ ಮನಸ್ಸನ್ನು ಮರ್ಕಟಕ್ಕೆ, ಎಂದರೆ ಕೋತಿಗೆ ಹೋಲಿಸಿದ್ದಾರೆ.

ಎನ್ನ ಮನವೆಂಬ ಮರ್ಕಟನು
ತನುವಿಕಾರವೆಂಬ ಅಲ್ಪಸುಖದಾಸೆಗಾಡಿ
ವೃಥಾ ಭ್ರಮೆಗೊಂಡು ನಾನಾ ದೆಸೆಗೆ ಲಂಘಿಸಿ
ಅಳಲಿಸಿ ಬಳಲಿಸುತ್ತಿದೆ ನೋಡಾ !
ಕೂಡಲಸಂಗಮ ದೇವರೆಂಬ ಕಲ್ಪವೃಕ್ಷಕ್ಕೆ ಲಂಘಿಸಿ
ಅಪರಿಮಿತದ ಸುಖವನೈದದು ನೋಡಾ !

ಅಲ್ಪವಾದ ದೈಹಿಕ ಸುಖಕ್ಕೆ ಆಸೆಪಡುವ ಮನಸ್ಸು ಎಲ್ಲೆಲ್ಲೋ ಅಲೆದು ಆತ್ಮವನ್ನು ಬಳಲಿಸುತ್ತದೆ. ಕೂಡಲಸಂಗಮನೆಂಬ ಕಲ್ಪವೃಕ್ಷವನ್ನು ಆ ಮನಸ್ಸು ಹತ್ತಿದರೆ ಅಪರಿಮಿತಸುಖವೆಂಬ ಫಲ ಸಿಗುತ್ತದೆ. ಈ ಮನಸ್ಸೆಂಬ ಮರ್ಕಟ ಏಕೋ ಆ ಕೆಲಸ ಮಾಡುತ್ತಿಲ್ಲ ಎಂಬ ಕೊರಗು. ಅದು ಹಾಗೆ ಮಾಡಲಿ ಎಂದು ಭಕ್ತನ ಬಯಕೆ. ಆದರೆ ಮನಸ್ಸು ಓಡುವುದು ವಿಷಯಗಳ ಕಡೆಗೆ. ಮುತ್ತಿನ ಪಲ್ಲಕ್ಕಿಯಂತೆ ಉನ್ನತವಾದ ಶಿವನಲ್ಲಿ ಅದನ್ನು ಕೂಡಿಸಿದರೂ, ವಿಷಯದ ಕಡೆಗೇ ಓಡುತ್ತದೆ. ಅದರ ಸ್ವಭಾವವನ್ನು ನೋಡಿ ಬಸವಣ್ಣನವರು ಅದನ್ನು ನಾಯಿಗೆ ಹೋಲಿಸುತ್ತಾರೆ–

ಅಂದಣವನೇರಿದ ಸೊಣಗನಂತೆ
ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು

ಸುಡು ಸುಡು, ಮನವಿದು ವಿಷಯಕ್ಕೆ ಹರಿವುದು
ಮೃಡ, ನಿಮ್ಮನನುದಿನ ನೆನೆಯಲೀಯದು
ಎನ್ನೊಡೆಯ ಕೂಡಲಸಂಗಮದೇವಾ
ನಿಮ್ಮ ಚರಣದ ನೆನೆವಂತೆ ಕರುಣಿಸು,
ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ

ನಾನು ಮಾಡಿದೆ, ನಾನು ಕರ್ತ ಎಂಬ ಭಾವನೆ ಮೂಡುವುದು ಮನದಲ್ಲಿ. ಈ ಭಾವನೆ ಇರುವವರೆಗೂ ಭಗವಂತನ ಅನುಗ್ರಹ ಉಂಟಾಗದು. ನನ್ನಿಂದ ಈ ಜಗತ್ತು ನಡೆಯುತ್ತಿದೆ ಎಂಬ ಭ್ರಾಂತಿ ದೂರವಾಗಬೇಕು ಎಂದು ಕಳಕಳಿಯಿಂದ ಬಸವಣ್ಣನವರು ಕೇಳಿಕೊಳ್ಳುತ್ತಿದ್ದಾರೆ–

ಒತ್ತಿ ಹೊಸೆದ ಕಿಚ್ಚ ನಾ ಮಾಡಿದೆನೆಂದು
ಮುಟ್ಟಿ ಹಿಡಿದಡೆ ಕೈ ಬೇಯದಿಹುದೆ?
ಎನ್ನಿಂದಾಯಿತ್ತು, ಎನ್ನಿಂದಾಯಿತ್ತು,
ಎನ್ನಿಂದಾಯಿತ್ತು ಎನ್ನದಿರು ಮನವೆ.
ನಾನು ಮಾಡಿದೆನೆನ್ನದಿರು ಮನವೆ.
ಕೂಡಲಸಂಗಮದೇವ ಕೇಳಯ್ಯಾ,
ಚೆನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು.

ಇದು ನನ್ನಿಂದಾಯಿತು ಎಂಬ ಅಹಂಕಾರದ ಉತ್ಪತ್ತಿ ಮನಸ್ಸಿನಲ್ಲಿ. ಆದ್ದರಿಂದ ಮನಸ್ಸನ್ನು ಸಂಬೋಧಿಸಿ ಅಂತಹ ಭಾವನೆ ಬೇಡವೆಂದಿದ್ದಾರೆ. ವಿಷಯಾಸಕ್ತಿಯಲ್ಲಿ ತಾತ್ಕಾಲಿಕ ಸುಖವನ್ನು ಕಂಡ ಮನಸ್ಸು ಮತ್ತೆ ಮತ್ತೆ ಆ ಕಡೆಗೆ ಓಡುತ್ತದೆ. ಈ ವಿಷಯವನ್ನು ಹಲವಾರು ಉಪಮೆಗಳಿಂದ ಬಸವಣ್ಣನವರು ಮನಮುಟ್ಟುವಂತೆ ಪ್ರತಿಪಾದಿಸಿದ್ದಾರೆ–

ಬೆಲ್ಲವ ತಿಂದ ಕೋಡಗನಂತೆ
ಸಿರಿಯ ನೆನೆಯದಿರಾ ಮನವೆ.
ಕಬ್ಬ ತಿಂದ ನರಿಯಂತೆ
ಹಿಂದಕ್ಕೆಳೆಸದಿರಾ ಮನವೆ.
ಗಗನವನಡರಿದ ಕಾಗೆಯಂತೆ
ದೆಸೆದೆಸೆಗೆ ಹಂಬಲಿಸದಿರಾ ಮನವೆ.
ಕೂಡಲ ಸಂಗನ ಶರಣರ ಕಂಡು
ಲಿಂಗವೆಂದೆ ನಂಬು ಮನವೆ.

ಮನಸ್ಸು ಕೋಡಗನಂತೆ, ನರಿಯಂತೆ, ಕಾಗೆಯಂತೆ ಆಡದಿರಬೇಕಾದರೆ ಅದು ಶರಣರನ್ನು ನಂಬಬೇಕು, ಆಶ್ರಯಿಸಬೇಕು. ಶ್ರೇಷ್ಠ ದಾರ್ಶನಿಕನಾಗಿದ್ದ ಅಲ್ಲಮಪ್ರಭು ಮನಸ್ಸಿನ ಪ್ರಭಾವವನ್ನೂ, ಅದರ ನಿರೋಧದ ಆವಶ್ಯಕತೆಯನ್ನೂ ಬಲ್ಲವನಾಗಿದ್ದ. ಮನಸ್ಸನ್ನು ನಿಯಂತ್ರಿಸದ ವ್ಯಕ್ತಿ ಎಷ್ಟು ತೀರ್ಥಯಾತ್ರೆ ಮಾಡಿದರೂ, ನೂರು ಬಾರಿ ಗಂಗೆಯಲ್ಲಿ ಮುಳುಗಿ



ಸ್ನಾನ ಮಾಡಿದರೂ, ಮೇರುಪರ್ವತದ ಶಿಖರವನ್ನೇರಿದರೂ, ಅನೇಕ ನಿಯಮಗಳನ್ನು ಪಾಲಿಸಿದರೂ ಫಲವಿಲ್ಲ. ಅಧ್ಯಾತ್ಮಕ್ಷೇತ್ರದಲ್ಲಿ ಅಡಿಯಿರಿಸುವ ಮಾನವನು ಮನಸ್ಸನ್ನು ಶಿವನಲ್ಲಿ ದೃಢವಾಗಿ ನಿಲ್ಲಿಸಬೇಕು ಎನ್ನುತ್ತಾನೆ ಪ್ರಭು ಒಂದು ವಚನದಲ್ಲಿ –

ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ.
ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ.
ನಿತ್ಯನೇಮದಿಂದ ತನುವ ಮುಟ್ಟಿಕೊಂಡಡಿಲ್ಲ.
ನಿಚ್ಚಕ್ಕೆ ನಿಚ್ಚ ನೆನೆವ ಮನವ
ಅಂದಂದಿಗೆ ಅತ್ತಲಿತ್ತ ಹರಿವ ಮನವ
ಚಿತ್ತದಲ್ಲಿ ನಿಲಿಸಬಲ್ಲಡೆ
ಬಚ್ಚಬರಿಯ ಬೆಳಗು ಗುಹೇಶ್ವರನೆಂಬ ಲಿಂಗವು.

ಮನಸ್ಸನ್ನು ಏಕಾಗ್ರವಾಗಿ ಮಾಡಿ ಧ್ಯಾನ ಮಾಡುವವನಿಗೆ ಮಾತ್ರ ಗುಹೇಶ್ವರ ಬೆಳಕಾಗಿ ಕಾಣುತ್ತಾನೆ ಎಂಬುದಿಲ್ಲಿ ಸ್ಪಷ್ಟವಾಗಿದೆ.

ಯೋಗಪರಿಣತ ಸಿದ್ಧರಾಮನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಮನಸ್ಸನ್ನು ಲಿಂಗಕ್ಕೆ ಅರ್ಪಿಸುವುದು ಮಾತ್ರವಲ್ಲ, ಮನಸ್ಸನ್ನೇ ಲಿಂಗವನ್ನಾಗಿ ಪರಿವರ್ತಿಸಬೇಕೆಂದಿದ್ದಾನೆ–

ಅಂಗಕ್ಕೆ ಭೋಗವ ಕೊಟ್ಟವರ ನೋಡಿದೆನಲ್ಲದೆ
ಲಿಂಗಕ್ಕೆ ಕೊಟ್ಟವರ ನೋಡಲಿಲ್ಲ.
ಲಿಂಗಕ್ಕೆ ಷೋಡಶೋಪಚಾರಂಗಳ ಕೊಟ್ಟವರ ನೋಡಿದೆನಲ್ಲದೆ
ಮನವ ಕೊಟ್ಟವರ ನೋಡಲಿಲ್ಲ.
ಮನವ ಕೊಟ್ಟವರ ನೋಡಿದೆನಲ್ಲದೆ
ಮನ ಲಿಂಗವಾದವರ ನೋಡಲಿಲ್ಲ,
ಕಪಿಲಸಿದ್ಧಮಲ್ಲಯ್ಯಾ.

ಶರೀರದ ಸುಖಕ್ಕೆ ಮರುಳಾದವರಿಗಿಂತ ಪರಮಾತ್ಮನಿಗೆ ಸಕಲವಸ್ತುವನ್ನು ಸಮರ್ಪಿಸಿದವರು ಶ್ರೇಷ್ಠ. ಹಾಗೆ ಷೋಡಶೋಪಚಾರಗಳ ಪೂಜೆ ಮಾಡಿದವರಿಗಿಂತ ಮನಸ್ಸನ್ನು ಶಿವನಿಗೆ ಅರ್ಪಿಸಿದವರು ಶ್ರೇಷ್ಠ. ಮನಸ್ಸನ್ನು ಅರ್ಪಿಸಿದವರಿಗಿಂತ ಮನಸ್ಸನ್ನೇ ಲಿಂಗವನ್ನಾಗಿ ಭಾವಿಸಿ ಕೈವಲ್ಯವನ್ನು ಪಡೆದವರು ಶ್ರೇಷ್ಠ. ಅಂಥವರು ವಿರಳರಲ್ಲೂ ವಿರಳರು ಎಂಬುದು ಸಿದ್ಧರಾಮನ ಸಿದ್ಧಾಂತ. ಅಕ್ಕಮಹಾದೇವಿಯು ತನ್ನ ಮನಸ್ಸು ಚೆನ್ನಮಲ್ಲಿಕಾರ್ಜುನನಿಗೆ ಮಾತ್ರ ಒಲಿಯುತ್ತದೆ, ಬೇರಾರಿಗೂ ಅಲ್ಲ ಎನ್ನುತ್ತಾಳೆ.

ಗಿರಿಯಲಲ್ಲದೆ ಹುಲ್ಲುಮೊರಡಿಯಲ್ಲಾಡುವುದೆ ನವಿಲು?
ಕೊಳಕ್ಕಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ?
ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ?

ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗಲ್ಲದೆ
ಅನ್ಯಕ್ಕೆಳಸುವುದೆ ಎನ್ನ ಮನ?
ಹೇಳಿರೆ ಕೆಳದಿಯರಿರಾ?

ಮನಸ್ಸು ಏನು ಮಾಡಿದರೂ ಚೆನ್ನಮಲ್ಲಿಕಾರ್ಜುನನಲ್ಲೇ ಮಾಡಬೇಕು, ಕರಗಿದರೂ ಕೊರಗಿದರೂ ಸೊರಗಿದರೂ ಅದು ದೇವ ಚೆನ್ನಮಲ್ಲಿಕಾರ್ಜುನನಿಗಾಗಿ ಎನ್ನುತ್ತಾಳೆ ಅಕ್ಕ.

ನಚ್ಚುಗೆ ಮನ ನಿಮ್ಮಲ್ಲಿ, ಮೆಚ್ಚುಗೆ ಮನ ನಿಮ್ಮಲ್ಲಿ,
ಸಲುಗುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲ್ಲಿ,
ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ,
ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ,
ಎನ್ನ ಪಂಚೇಂದ್ರಿಯಂಗಳು ಕಬ್ಬುನ ಉಂಡ ನೀರಿನಂತೆ
ನಿಮ್ಮಲ್ಲಿ ಬೆರಸುಗೆ ಚೆನ್ನಮಲ್ಲಿಕಾರ್ಜುನಯ್ಯಾ.

ಇನ್ನೊಬ್ಬ ವಚನಕಾರ್ತಿ ಲಿಂಗಮ್ಮ. (ಇವಳನ್ನು ಹಡಪದ ಅಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ ಎಂದು ಕರೆಯುತ್ತಾರೆ.) ಮನಸ್ಸಿನ ಉಪಟಳವನ್ನು ನಾನಾ ರೀತಿಯಿಂದ ಬಣ್ಣಿಸಿ ಅದನ್ನು ಒಂದು ಕಟ್ಟುಪಾಡಿಗೆ ತಂದು ನಿಲ್ಲಿಸಿದ ಪರಿಯನ್ನು ತನ್ನ ವಚನದಲ್ಲಿ ತಿಳಿಸಿದ್ದಾಳೆ.

ನೆನೆವುತ್ತಿದೆ ಮನ,
ದುರ್ವಾಸನೆಗೆ ಹರಿವುತ್ತಿದೆ ಮನ,
ಕೊನೆಗೊಂಬೆಗೆ ಎಳೆವುತ್ತಿದೆ ಮನ,
ಕಟ್ಟಿಗೆ ನಿಲ್ಲದು ಮನ,
ಬಿಟ್ಟಡೆ ಹೋಗದು ಮನ,
ತನ್ನಿಚ್ಛೆಯಲಾಡುವ ಮನವ ಕಟ್ಟಿಗೆ ತಂದು
ಗೊತ್ತಿಗೆ ನಿಲ್ಲಿಸಿ
ಬಚ್ಚಬರಿಯ ಬಯಲಿನೊಳಗೆ ಓಲಾಡುವ
ಶರಣರ ಪಾದದಲ್ಲಿ ನಾ ಬೆಚ್ಚಂತಿದ್ದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

ಚಂದಿಮರಸನೆಂಬ ವಚನಕಾರನು ಮನಸ್ಸಿನ ಬಗೆಗೆ ಹೇಳುತ್ತಾನೆ:

ಮನದಿಂದ ಸಂಸಾರ ಸುಖದುಃಖ ಮಾಯಾಮಯ.
ಈ ಮನದ ವಿಷಯದಲ್ಲಿ ಕೂಡಲೀಯದೆ ನಿಮ್ಮಲ್ಲಿ ನಿಲಿಸೆ
ಆ ಮನ ತಾನು ತನ್ನ ನಿಜದಲ್ಲಿ ನಿಂದು ನೋಡೆ
ಆ ನೋಡುವ ನೋಟ ಉಳಿದಂದು
ಉಳಿದ ಪರಮಾನಂದ ನೀನೇ,
ತಿಳಿದು ನೋಡಾ ಸಿಮ್ಮಲಿಗೆಯ ಚೆನ್ನರಾಮಾ.



ಮನಸ್ಸು ಗುರು-ಲಿಂಗ-ಜಂಗಮಗಳ ಪ್ರಸಾದವನ್ನು ಸ್ವೀಕರಿಸಲು ನಾಚಿಕೊಳ್ಳುವುದಂತೆ. ಆದರೆ ವೇಶ್ಯೆಯ ಎಂಜಲನ್ನು ತಿನ್ನಲು ಅದಕ್ಕೆ ನಾಚಿಕೆ ಇಲ್ಲವಂತೆ. ಮನಸ್ಸು ಹಾಗೆ ಮಾಡಿದರೆ ಭಗವಂತನು ತೀವ್ರವಾಗಿ ದಂಡಿಸದೆ ಬಿಡುವುದಿಲ್ಲ ಎನ್ನುತ್ತಾನೆ ವಚನಕಾರ ಸಕಲೇಶ ಮಾದರಸ.

ಗುರುಪ್ರಸಾದವ ಕೊಂಬರೆ, ನಾಚುವುದು ಮನ.
ಲಿಂಗಪ್ರಸಾದವ ಕೊಂಬರೆ, ನಾಚುವುದು ಮನ.
ಜಂಗಮಪ್ರಸಾದವ ಕೊಂಬರೆ, ನಾಚುವುದು ಮನ.
ಸಮಯಪ್ರಸಾದವ ಕೊಂಬರೆ, ನಾಚುವುದು ಮನ.
ಸೂಳೆಯ ಬೊಜಗನ ಎಂಜಲ ತಿಂಬರೆ, ನಾಚದು ಮನ.
ಮಹಂತ ಸಕಳೇಶ್ವರಯ್ಯನು ಮೂಗ ಕೊಯ್ಯದೆ ಮಾಣನು.

ಮನಸ್ಸಿನಲ್ಲಿ ಸತ್ಯವಿಲ್ಲದಾಗ ಮಾಡಿದುದೆಲ್ಲ ವ್ಯರ್ಥ. ಶಾರೀರಿಕವಾಗಿ ನಾವು ಶುದ್ಧರಾಗಿದ್ದರೂ, ಮಾನಸಿಕವಾಗಿ ಅಶುದ್ಧರಾದರೆ ಭವಿಗಳೇ ಆಗಿಬಿಡುತ್ತೇವೆ. ಭಕ್ತರೆಂದೆನಿಸಿಕೊಳ್ಳಲು ಮನಸ್ಸನ್ನೂ ಶುದ್ಧವಾಗಿಟ್ಟುಕೊಳ್ಳಬೇಕು ಎಂದು ಸಕಲೇಶ ಮಾದಯ್ಯನ ಉಪದೇಶ.

ಎನ್ನ ಮನದಲ್ಲಿ ದಿಟವಿಲ್ಲ, ಪೂಜಿಸಿ ಏವೆನು?
ಹೃದಯದಲ್ಲೊಂದು, ವಚನದಲ್ಲೊಂದು ಎನಗೆ ನೋಡಾ
ಎನ್ನ ಕಾಯ ಭಕ್ತ, ಮನ ಭವಿ ಸಕಳೇಶ್ವರದೇವಾ

ಹೀಗೆ ಶರಣರು ಮನಸ್ಸಿನ ಹಲವು ಮಗ್ಗುಲುಗಳನ್ನು ತಮ್ಮ ದೃಷ್ಟಿಯಿಂದ ವೀಕ್ಷಿಸಿ ಜಗತ್ತಿಗೆ ಮಾರ್ಗದರ್ಶನ ಮಾಡಿದ್ದಾರೆ.

□

# ವಚನ ವಿಚಾರ

ಓ.ಎಲ್. ನಾಗಭೂಷಣಸ್ವಾಮಿ

ಗಾಳಿ ಬೀಸುವಲ್ಲಿ ಕೇಳೆಲವೋ
ಬೀಸಣಿಗೆಯ ಉಸುರೆಂತು ಮರೆವುದು ಹೇಳಾ ಮರುಳೆ
ನಿಸ್ಸಾಳ ಬಾರಿಸುವಲ್ಲಿ ಧವುಡೆ ತಂಬಟದ ದನಿ
ಎಂತು ಮರೆಸುವುದು ಹೇಳ ಮರುಳೆ
ಸಿಮ್ಮಲಿಗೆಯ ಚೆನ್ನರಾಮನೆಂಬ
ಸೀಮೆಯಿಲ್ಲದ ನಿಸ್ಸೀಮಂಗೆ
ಲಿಂಗಸಂಸಾರಿ ಸರಿಯಲ್ಲ ಹೇಳಾ ಮರುಳೆ — **- ಚಂದಿಮರಸ**

ಚಂದಿಮರಸನು ಬಸವಣ್ಣನವರ ಹಿರಿಯ ಸಮಕಾಲೀನ. ಕೃಷ್ಣಾ ನದಿಯ ತೀರದ ಚಿಮ್ಮಲಿಗೆ ಅನ್ನುವ ಊರಿನವನು. ಅಲ್ಲಿ ಇವನ ನೆನಪಿಗಾಗಿ ಗುಡಿ ಇದೆ. ನಿಜಗುಣದೇವ ಇವನ ಗುರು. ಚಂದಿಮರಸನೂ ಒಬ್ಬ ರಾಜನಾಗಿದ್ದನೇ ಅನ್ನುವ ಊಹೆ ಕೆಲವು ವಿದ್ವಾಂಸರದ್ದು. ಅಕ್ಕ, ಉಗ್ಗಡಿಸುವ ಗುಬ್ಬಿದೇವಯ್ಯ, ಅಂಗಸೋಂಕಿನ ಲಿಂಗತಂದೆ, ಇವರೆಲ್ಲ ಚಂದಿಮರಸನನ್ನು ನೆನೆದು, ಹೊಗಳಿದ್ದಾರೆ. ನಿಸ್ಸೀಮ ಮತ್ತು ಲಿಂಗಸಂಸಾರಿ ಇವರ ವ್ಯತ್ಯಾಸವನ್ನು ಈ ವಚನ ಹೇಳುತ್ತಿದೆ. ಈ ವಚನವು ಹಿರಿದು-ಕಿರಿದು ಅನ್ನುವ ವ್ಯತ್ಯಾಸವನ್ನು ಆಧಾರವಾಗಿಟ್ಟುಕೊಂಡು ಬೆಳೆದಿದೆ.

ಗಾಳಿ ಬೀಸುತ್ತಿರುವಾಗ ಬೀಸಣಿಗೆಯ ಉಸಿರು ಮೆರೆಯಲು ಸಾಧ್ಯವೇ?
ನಗಾರಿಯಂಥ ದೊಡ್ಡ ಚರ್ಮವಾದ್ಯ ನಿಸ್ಸಾಳವನ್ನು
ಬಾರಿಸುತ್ತಿರುವಾಗ ತಮಟೆಯ ದನಿ ಕೇಳೀತೇ?
ಹಾಗೆಯೇ ಸಿಮ್ಮಲಿಗೆಯ ಚೆನ್ನರಾಮನು ನಿಸ್ಸೀಮ,
ಅವನಿಗೆ ಲಿಂಗಸಂಸಾರಿ ಸಮನಾದಾನೆಯೇ?

ಈ ವಚನದಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಉಪಮೆಯ ಎರಡೂ ಸಂಗತಿಗಳಲ್ಲಿರುವ ಸಮಾನಗುಣವನ್ನು ಹೇಳುತ್ತಿರುವಾಗಲೇ ಒಂದರ ಹಿರಿತನವನ್ನೂ ಇನ್ನೊಂದರ ಅಲ್ಪತೆಯನ್ನೂ ಮನದಟ್ಟುಮಾಡುವಂತೆ ಇರುವ ರಚನಾವಿಧಾನ. ಬೀಸಣಿಗೆಯ ಗಾಳಿಯೂ ಗಾಳಿಯೇ, ಆದರೆ ಅದು ಬೀಸುವ ಗಾಳಿಗೆ ಸಮನಲ್ಲ. ಬೀಸುವ ಗಾಳಿ ನಿಸರ್ಗದ ಶಕ್ತಿ, ಬೀಸಣಿಗೆ ಮನುಷ್ಯಕೃತ ಉಪಕರಣದ ಕೃತಕ ಗಾಳಿ. ನಿಸ್ಸಾಳದ ದನಿಯೂ ದನಿಯೇ,



ತಮಟೆಯ ದನಿಯೂ ದನಿಯೇ. ಆದರೆ ನಿಸ್ಸಾಳ ಬೃಹತ್ತಾದದ್ದು, ಅದರ ಸದ್ದು ಉಳಿದೆಲ್ಲ ಸದ್ದನ್ನೂ ಮರೆಮಾಡುವಂಥದು. ಅದಕ್ಕೆ ಹೋಲಿಸಿದರೆ ತಮಟೆ ಕಿರುವಾದ್ಯ. ಬೃಹತ್ತಾದ ನಿಸರ್ಗ ಶಕ್ತಿ ಮತ್ತು ದೊಡ್ಡ ವಾದ್ಯದ ಸದ್ದುಗಳನ್ನು ನಿಸ್ಸೀಮತೆಗೂ, ಕಿರುಗಾಳಿ, ಕಿರುವಾದ್ಯದ ಸದ್ದನ್ನು ಪರಿಮಿತ ಅಲ್ಪತೆಗೂ ಹೋಲಿಸುವಂತೆ ಇದೆ ಈ ವಚನ.

ಸಿಮ್ಮಲಿಗೆಯ ಚೆನ್ನರಾಮು ದೈವ, ಅವನು ನಿಸ್ಸೀಮ, ಮಿತಿ ಇಲ್ಲದವನು. ಲಿಂಗಸಂಸಾರಿಗೂ ಆ ದೈವದ ಗುಣಗಳಿದ್ದರೂ ಅಲ್ಪ, ಪರಿಮಿತ, ಸೀಮಾಬದ್ಧ. ಇಬ್ಬರನ್ನೂ ಒಂದೇ ಅನ್ನುವುದು ಸರಿಯೇ? ಈ ವಚನವು ಸಮಾನತೆಯ ಬಗ್ಗೆ ನಮಗೆ ಇರುವ ಅಂಗೀಕೃತ ಕಲ್ಪನೆಗಳನ್ನು ಪ್ರಶ್ನಿಸಿಕೊಳ್ಳುವಂತೆ ಮಾಡುತ್ತದೆ. ಸಮಾನತೆ ಅನ್ನುವ ಮಾತು ಬಳಸಿದಾಗ ತರ-ತಮಗಳ ವಿವೇಚನೆಯನ್ನು ಮರೆಯಬಾರದು. ಬೀದಿಯೊಂದರಲ್ಲಿರುವ ಎಲ್ಲ ಮನೆಗಳ ತಳಹದಿಯೂ ಸಮಾನವೇ ಆದರೂ ಮನೆಗಳ ಎತ್ತರ ಬೇರೆಬೇರೆಯೇ ಅಲ್ಲವೇ! ಹಾಗೆಯೇ ಎಲ್ಲ ಮನುಷ್ಯರೂ ಸಮಾನರೇ ಆದರೂ, ಮನುಷ್ಯ ಮತ್ತು ದೈವಗಳ ನಡುವೆ ಸಮಾನತೆ ಇದ್ದರೂ ತರ-ತಮ ಇದ್ದೇ ಇದೆ. ಮನುಷ್ಯ ಬೀಸಣಿಗೆಯ ಗಾಳಿಯ ಹಾಗೆ, ತಮಟೆಯ ಸದ್ದಿನ ಹಾಗೆ, ದೈವ ಬೀಸುವ ಗಾಳಿ, ನಿಸ್ಸಾಳದ ಶಬ್ದದ ಹಾಗೆ. ಸೀಮೆ ಅನ್ನುವುದು ಪರಿಮಿತ ವ್ಯಕ್ತಿಯ ಲಕ್ಷಣ, ನಿಸ್ಸೀಮ ಅನ್ನುವುದು ಅಪರಿಮಿತದ ಗುಣ, ಲಕ್ಷಣ. ಪರಿಮಿತ, ಸೀಮಾಬದ್ಧ ವ್ಯಕ್ತಿ ಅಪರಿಮಿತ, ನಿಸ್ಸೀಮ ದೈವದ ಅನುಭವ ಪಡೆಯುವಂತಾಗಬೇಕೆಂಬುದು ಚಂದಿಮರಸನ ಅಪೇಕ್ಷೆ ಇದ್ದಂತಿದೆ.

ಇದೇ ವಿಚಾರದ ಇನ್ನೊಂದು ಮಗ್ಗುಲನ್ನು ಬಸವಣ್ಣನವರ 'ಜಗದಗಲ, ಮುಗಿಲಗಲ' ಎಂದು ಪ್ರಾರಂಭವಾಗುವ ವಚನದಲ್ಲಿ ಕಾಣಬಹುದು. ಜಗತ್ತನ್ನೆಲ್ಲ ವ್ಯಾಪಿಸಿ ಅದರಾಚೆಗೂ ಚಾಚಿಕೊಂಡಿರುವ ಕೂಡಲಸಂಗಮ ತನ್ನ ಕರಸ್ಥಳಕ್ಕೆ ಚುಟುಕಾಗಿ ಬಂದು ಕಾದಿದ್ದನ್ನು, ಕಾಪಾಡಿದ್ದನ್ನು ದೊಡ್ಡ ಪವಾಡ, ಅಚ್ಚರಿ ಎಂಬಂತೆ ಆ ವಚನ ನಿರೂಪಿಸುತ್ತದೆ. ಕಿರಿದು-ಹಿರಿದುಗಳ ವ್ಯತ್ಯಾಸ ಮತ್ತು ಸಮಾನ ಅಂಶಗಳ ಶೋಧನೆ ವಚನಗಳ ಮುಖ್ಯ ಆಸಕ್ತಿಗಳಲ್ಲಿ ಒಂದಾಗಿದೆ.

□

# ವೀರಶೈವ-ಲಿಂಗಾಯತ ಧರ್ಮ, ಸಾಹಿತ್ಯ : ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ

**ಡಾ. ಎಸ್.ಆರ್. ಗುಂಜಾಳ**
**ಸಹಾಯಕರು: ಶ್ರೀ ಎಮ್. ಎಫ್. ಡಂಬಳ**

ಕನ್ನಡ ಸಾಹಿತ್ಯಕ್ಕೆ ಭಾರತದಲ್ಲಿ ವಿಶಿಷ್ಟ ಸ್ಥಾನವಿದೆ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜಿಕ ಕ್ರಾಂತಿಯು ಭಾರತೀಯರ ಜೀವನದಲ್ಲಿ ಹೊಸ ವಿಚಾರಗಳನ್ನು ಹರಡುವುದರೊಂದಿಗೆ ಅವುಗಳನ್ನು ಆಚಾರಕ್ಕೆ ಇಳಿಸುವಲ್ಲಿ ಅದ್ಭುತ ಸಾಧನೆ ಮಾಡಿದೆ. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪವು ಹೊಸ ಸಮಾಜ ನಿರ್ಮಾಣ ಕಾರ್ಯದಲ್ಲಿ ಅನುಪಮ ಸೇವೆ ಸಲ್ಲಿಸಿದೆ. ಹನ್ನೆರಡನೆಯ ಶತಮಾನದಲ್ಲಿ ನಿರ್ಮಾಣಗೊಂಡ ಈ ಸಂಸ್ಥೆಯು ಭಾರತದ ಆಸೇತು ಹಿಮಾಲಯದವರೆಗಿನ ವಿವಿಧ ಪ್ರಾಂತಗಳ–ಭಾಷೆಗಳ ಪ್ರಜ್ಞಾವಂತರನ್ನು–ವಿಚಾರವಾದಿಗಳನ್ನು ತನ್ನತ್ತ ಆಕರ್ಷಿಸಿತು. ಅವರು ಲಕ್ಷ ಲಕ್ಷ ಸಂಖ್ಯೆಯಲ್ಲಿ ನೆರೆದು ಬಂದರು. ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಸಿದ್ಧರಾಮ, ನೀಲಮ್ಮ, ನಾಗಮ್ಮ, ಅಕ್ಕಮಹದೇವಿ–ಮುಂತಾದವರ ಮಾರ್ಗದರ್ಶನದಲ್ಲಿ ಅನೇಕ ಶರಣ–ಶರಣೆಯರು ನಡೆಸಿದ ಆಳವಾದ ಚಿಂತನ–ಮಂಥನದಿಂದ ಅನೇಕ ಹೊಸ ಹೊಸ ಸುಧಾರಣೆಗಳು ಸಮಾಜದಲ್ಲಿ ರೂಢಿಗೆ ಬಂದವು.

1) ಕೋಟಿ ಕೋಟಿ ಸಂಖ್ಯೆಯಲ್ಲಿ ವಿವಿಧ ಆಕಾರಗಳಲ್ಲಿ ಪೂಜೆ ಮಾಡುತ್ತಿದ್ದ ವೈದಿಕ ಸಮಾಜದಲ್ಲಿ 'ಇಷ್ಟಲಿಂಗ'ದ ಮೂಲಕ ಏಕದೇವೋಪಾಸನೆಯನ್ನು ಆಚರಣೆಯಲ್ಲಿ ತರಲಾಯಿತು.
2) 'ಇಷ್ಟಲಿಂಗ' ದೀಕ್ಷೆಯನ್ನು ಎಲ್ಲ ಜಾತಿಯ ಸ್ತ್ರೀ ಪುರುಷರಿಗೆ ಕೊಡುವುದರ ಮೂಲಕ ಈ ಸಂಸ್ಥೆಯು ಜಾತೀಯತೆಯ ಬೇರುಗಳ ಮೂಲೋತ್ಪಾಟನೆ ಮಾಡಿತು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಎಲ್ಲರನ್ನು ಸಮಭಾವ ಸಮದೃಷ್ಟಿಯಿಂದ ನೋಡಿಕೊಳ್ಳುವಂತಾಯಿತು. "ಇಷ್ಟಲಿಂಗಕ್ಕೆ" ಒಬ್ಬ ವಿಲಾಯಿತಿಯ ಪಂಡಿತರು 'ಸಾಮಾಜಿಕ ತಗ್ಗು ದಿನ್ನೆಗಳನ್ನು ಸಮ ಮಾಡುವ ಒಂದು ಸಾಧನ' ಎಂದು ಕರೆದಿದ್ದಾರೆ (ಉತ್ತಂಗಿ ಚನ್ನಪ್ಪ: ಅನುಭವ ಮಂಟಪ)
3) ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯಕೊಟ್ಟಿತು.
4) ಪ್ರತಿಯೊಬ್ಬರೂ ಜೀವನ ನಿರ್ವಹಣೆಗೆ ಒಂದಿಲ್ಲೊಂದು ಕಾಯಕವನ್ನು ಮಾಡಲೇಬೇಕೆಂದು ಕಡ್ಡಾಯಗೊಳಿಸಿತು



5) ಕೇವಲ ಸನ್ಯಾಸಿಗಳಿಗಿದ್ದ ಮೋಕ್ಷದ ಹಕ್ಕನ್ನು ಗೃಹಸ್ಥರಿಗೂ ಕೊಡಮಾಡಿತು.
6) ಸಾವಿರ ಸಾವಿರ ವರುಷಗಳಿಂದ ನಾಯಿ–ಹಂದಿಗಳಿಗಿಂತಲೂ ಕನಿಷ್ಠರೆಂದು ಕಂಡ ಅಸ್ಪೃಶ್ಯರನ್ನು ಪ್ರೀತಿ–ಗೌರವಗಳಿಂದ ಅಪ್ಪಿಕೊಂಡು, ಅನುಭವ ಮಂಟಪದ ಸಕಲ ಸದಸ್ಯರು ಪರಸ್ಪರರಲ್ಲಿ ಊಟೋಪಚಾರ, ಶರೀರ ಸಂಬಂಧ ಬೆಳೆಸುವುದಕ್ಕೆ ಆಸ್ಪದ ಮಾಡಿಕೊಡಲಾಯಿತು–ಹೀಗೆ ಅನೇಕ ಸುಧಾರಣೆಗಳನ್ನು ಜಾರಿಯಲ್ಲಿ ತರುವಂತಾಯಿತು.

ಇನ್ನೊಂದು ಅತ್ಯಂತ ಮಹತ್ವದ ಕಾರ್ಯ ಅನುಭವ ಮಂಟಪದಲ್ಲಿ ನಡೆದಿದೆ. ಓದು-ಬರಹಗಳಿಂದ ವಂಚಿತರಾಗಿ ಅಜ್ಞಾನಾಂಧಕಾರದಲ್ಲಿ ಕೊಳೆಯುತ್ತಿದ್ದ ಬಹುಸಂಖ್ಯಾತ ಜನರಿಗೆ –ವಿಶೇಷತಃ ಸ್ತ್ರೀಯರಿಗೆ ಉತ್ತಮ ಶಿಕ್ಷಣವನ್ನಿತ್ತು ತಮ್ಮ ತಮ್ಮ ಅನುಭಾವದಲ್ಲಿ ಉದಿಸಿದ ವಿಚಾರಗಳನ್ನು ವಚನ ರೂಪದಲ್ಲಿ ಬರೆಯುವುದಕ್ಕೆ ಇದು ಆಸ್ಪದ ಮಾಡಿಕೊಟ್ಟಿತು. ಇದು ಇಂದು ವಚನ ಸಾಹಿತ್ಯವೆಂದು ಪ್ರಸಿದ್ಧಿ ಪಡೆದಿದೆ. ವಿಶ್ವಸಾಹಿತ್ಯಕ್ಕೆ ಶ್ರೇಷ್ಠ ಕಾಣಿಕೆಯಾಗಿ ಗಣಿಸಲ್ಪಟ್ಟಿದೆ.

'ಲಕ್ಷದ ಮೇಲೆ ತೊಂಬತ್ತಾರು ಸಾವಿರ' ಅನುಯಾಯಿಗಳನ್ನು ಅನುಭವ ಮಂಟಪ ಹೊಂದಿತ್ತೆಂದು ಪ್ರಾಚೀನ ಗ್ರಂಥಗಳಿಂದ ತಿಳಿದು ಬರುತ್ತದೆ. ಇವರಲ್ಲಿ ಸಾವಿರಾರು ಶರಣ–ಶರಣೆಯರು ಅಗಣಿತ ಸಂಖ್ಯೆಯಲ್ಲಿ ವಚನಗಳನ್ನು ರಚಿಸಿರುವರೆಂದು ತಿಳಿದುಬರುತ್ತದೆ. ಬಸವಣ್ಣನವರಿದ್ದ ವಾಸದ ಮನೆಗೆ ಹೊಂದಿಕೊಂಡು 'ವಚನ ಭಂಡಾರ'ವಿತ್ತೆಂದು ಸಾಹಿತ್ಯಿಕ ಪ್ರಬಲ ಆಧಾರಗಳುಂಟು. ಅದರ ಮುಖ್ಯಸ್ಥನಿಗೆ 'ವಚನ ಭಂಡಾರಿ ಶಾಂತರಸ' ಎಂದು ಹೆಸರು. ಅವನು ವಚನಕಾರನೂ ಹೌದು. ಅವನು ಬರೆದ 64 ವಚನಗಳಿಂದು ಲಭ್ಯವಿವೆ. ವಚನ ಭಂಡಾರದಲ್ಲಿ ಶರಣರ ವಚನಗಳನ್ನು ಸುವ್ಯವಸ್ಥಿತವಾಗಿ ಅವನು ಹೊಂದಿಸಿಟ್ಟಿದ್ದನು. ಯಾರದೇ ವಚನವನ್ನು ಹುಡುಕಿಕೊಂಡು ಓದಲು ಬಂದವರಿಗೆಲ್ಲ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದನು. ಇಂದಿನ ಮನ್ವಂತರಕ್ಕೆ ಹೋಲಿಸಿದರೆ ಅದೊಂದು ಸಾರ್ವಜನಿಕ ಗ್ರಂಥಾಲಯವಾಗಿತ್ತು. ಅದು ಪ್ರಪಂಚದಲ್ಲಿಯೇ ಪ್ರಪ್ರಥಮ ಸಾರ್ವಜನಿಕ ಗ್ರಂಥಾಲಯ (Public Library)ವೆಂದು ನಿಸ್ಸಂದೇಹವಾಗಿ ಹೇಳಬಹುದು.

ಹರಳಯ್ಯ ಮತ್ತು ಮಧುವಯ್ಯಗಳಲ್ಲಿ ಘಟಿಸಿದ ರಕ್ತಸಂಬಂಧಕ್ಕೆ ಪ್ರಬಲ ವಿರೋಧಿಯಾದ ವೈದಿಕಧರ್ಮದ ಮನುಧರ್ಮಶಾಸ್ತ್ರದಿಂದಾಗಿ ಕಲ್ಯಾಣದಲ್ಲಿ ರಕ್ತಕ್ರಾಂತಿಯಾಯಿತು. ಆಗ ವಿರೋಧಿಗಳು ವಚನ ಭಂಡಾರಕ್ಕೆ ಮುತ್ತಿಗೆ ಹಾಕಿ ವಚನ ಕಟ್ಟುಗಳನ್ನು ನಾಶಪಡಿಸಲು ಉದ್ಯುಕ್ತರಾದರು. ವಚನ ಭಂಡಾರಿ ಶಾಂತರಸನ ಚಾಣಾಕ್ಷತನದಿಂದಾಗಿ ಕೆಲವು ವಚನ ಕಟ್ಟುಗಳನ್ನು ಶರಣ–ಶರಣೆಯರು ಬಚ್ಚಿಟ್ಟುಕೊಂಡು ಕಲ್ಯಾಣದ ಹೊರಗೆ ಹೊತ್ತೊಯ್ಯುವಂತಾಯಿತು. ಉಳಿದ ಬಹುಭಾಗ ವಚನರಾಶಿ ನಾಶಗೊಳಿಸಲ್ಪಟ್ಟವು.

ಬಚ್ಚಿಟ್ಟುಕೊಂಡು ಬಂದ ವಚನಗಳ ಸಂಖ್ಯೆ ಎಷ್ಟೆಂಬುದು ಇಂದು ಗೊತ್ತಾಗುವುದಿಲ್ಲ. ಆದರೆ ಅಳಿದುಳಿದ ಅಲ್ಪಾಂಶದ ವಚನಗಳ ಸಂಖ್ಯೆ ಹದಿನೈದು ಸಾವಿರದಷ್ಟಿದೆ ಎಂದು ಇಂದಿನ ವಚನಶಾಸ್ತ್ರಕೋವಿದರು ಅಭಿಪ್ರಾಯಪಡುತ್ತಿದ್ದಾರೆ. (ಡಾ. ಸಿ. ನಾಗಭೂಷಣ:ವಚನಸಾಹಿತ್ಯ-ಇತ್ತೀಚಿನ ಸಂಶೋಧನೆಗಳು. ಬಸವ ಪಥ, ಸಂಪುಟ 14, ಸಂಚಿಕೆ 12, ಮಾರ್ಚ್ 2003, ಪು. 6)

ಅಲ್ಪಾಂಶದಲ್ಲಿ ಅಳಿದುಳಿದ ವಚನಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ ಕಲ್ಯಾಣದಲ್ಲಿ ನಡೆದ ಸಾಮಾಜಿಕ ಅದ್ಭುತ ಕ್ರಾಂತಿಯ ಮೂಲಬೇರುಗಳನ್ನು ಕಾಣಬಹುದು. ಇಂಥ ಮಹತ್ವಪೂರ್ಣ ವಚನ ಸಾಹಿತ್ಯವು ಮುಂದಿನ ಕವಿಗಳಿಗೆ, ಬರಹಗಾರರಿಗೆ ಸ್ಫೂರ್ತಿಯ ಕಲೆಯಾಗಿ ಬಂದಿದೆ. 12ನೇ ಶತಮಾನದಿಂದ ಇಂದಿನ ವರೆಗೆ 850 ವರ್ಷಗಳ ದೀರ್ಘಾವಧಿಯಲ್ಲಿ ಸಾವಿರಾರು ಕವಿಪುಂಗವರು ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಚಂಪೂ ಮುಂತಾದ ಛಂದಸ್ಸುಗಳಲ್ಲಿ ಕೃತಿರಚನೆಯನ್ನು ಮಾಡಿದ್ದಾರೆ. ಈ ಎಲ್ಲ ಕೃತಿಗಳಿಗೆ ಮೂಲ ದ್ರವ್ಯ ವಚನ ಸಾಹಿತ್ಯವೇ. ವಚನ ಸಾಹಿತ್ಯದ ಪೂರ್ವಾಪರ ಸಂಶೋಧನೆ ಪ್ರಾರಂಭವಾದದ್ದು 20ನೆಯ ಶತಮಾನದ ಆದಿಭಾಗದಿಂದ. ಅದರಲ್ಲಿಯೂ ಡಾ. ಫ.ಗು. ಹಳಕಟ್ಟಿಯವರು ವಚನಗಳ ಸಂಶೋಧನೆ ಪ್ರಕಟಣೆ, ಪ್ರಚಾರಗಳಿಗಾಗಿಯೇ "ಶಿವಾನುಭವ" ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಅದರ ಮೂಲಕ ಅನೇಕ ಶರಣರ ವಚನಗಳನ್ನು ಪ್ರಚುರಪಡಿಸಿದರು. ಅವರು ಪ್ರಕಟಿಸಿದ ವಚನ ಗ್ರಂಥಗಳಿಂದ ಅನೇಕ ವಿದ್ವಾಂಸರು ಪ್ರಭಾವಿತರಾದರು. ಅವರು ವಚನಗಳನ್ನು ಕುರಿತು ಉತ್ಕೃಷ್ಟ ಗ್ರಂಥಗಳನ್ನು ಸಹ ಬರೆದರು. ಅವರಲ್ಲಿ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ, ಶ್ರೀ ಆರ್.ಆರ್. ದಿವಾಕರ, ಹರ್ಡೇಕರ ಮಂಜಪ್ಪ ಮುಂತಾದವರು ಪ್ರಮುಖರು. ಆನಂತರದಲ್ಲಿ ಕೆಲವು ವಿದ್ವಾಂಸರು ಶರಣ ಗಣದ ನೇತಾರರಾದ ಬಸವಣ್ಣನವರ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ ಪ್ರಕಟಿಸಿದರು. ಅವರಲ್ಲಿ ಪ್ರೊ. ಸಿ.ಸಿ. ಬಸವನಾಳ, ಡಾ. ಆರ್.ಸಿ. ಹಿರೇಮಠ, ಡಾ. ಎನ್.ಎಮ್. ಕಲಬುರ್ಗಿ, ಡಾ. ಎಲ್. ಬಸವರಾಜು, ಡಾ. ಎಚ್. ತಿಪ್ಪೇರುದ್ರಸ್ವಾಮಿ ಮುಂತಾದವರನ್ನು ಹೆಸರಿಸಬಹುದು. ಜೊತೆಗೆ ಡಾ. ಎಂ.ಎಂ. ಗಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವೇತನ ಸಾಹಿತ್ಯವನ್ನು ಹದಿನಾಲ್ಕು ಸಂಪುಟಗಳಲ್ಲಿ ಕರ್ನಾಟಕ ಸರಕಾರವು ಪ್ರಕಟಿಸಿದೆ (1993). ಈ ಸಂಪುಟಗಳ ಮರು ಮುದ್ರಣವು 2001ರಲ್ಲಿ ಹೊರ ಬಂದಿದೆ.

ಹೀಗೆ ವಚನ ಸಾಹಿತ್ಯದ ಶಾಖೋಪಶಾಖೆಗಳನ್ನು ಕುರಿತು ಇಲ್ಲಿಯ ವರೆಗೆ ಪ್ರಕಟವಾದ ಕೃತಿಗಳ ಅಭ್ಯಾಸವು ಸಂಶೋಧಕರಿಂದ ಮುಂದುವರಿದಿದೆ. ಇದರ ಪರಿಣಾಮವಾಗಿ ಅನೇಕ ವಿದ್ವಾಂಸರು ವಿಶ್ವವಿದ್ಯಾಲಯದ ಮಟ್ಟದಲ್ಲಿ ಪಿ.ಎಚ್‌ಡಿ.ಗಾಗಿ ಪ್ರಬಂಧಗಳನ್ನು ಬರೆದು ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುವ ಇಂಥ ಮಹಾಪ್ರಬಂಧಗಳನ್ನು ಅವಲೋಕಿಸಿ ನಾವಿಲ್ಲಿ ಒಂದು ಪಟ್ಟಿಯನ್ನು ಸಿದ್ಧಪಡಿಸಿದ್ದೇವೆ. ಈ



ಪಟ್ಟಿಯು ಕೇವಲ ಕನ್ನಡ ಭಾಷೆಯಲ್ಲಿ ಲಿಂಗಾಯತ ಸಾಹಿತ್ಯ, ಇತಿಹಾಸ, ಸಂಸ್ಕೃತ ಮುಂತಾದವುಗಳನ್ನು ಕುರಿತು ಬರೆಯಲ್ಪಟ್ಟ ಸಂಶೋಧನ ಮಹಾ ಪ್ರಬಂಧಗಳಿಗೆ ಮೀಸಲಾಗಿಟ್ಟಿದ್ದೇವೆ. ನಮ್ಮ ಶ್ರಮಕ್ಕೆ ಕಣ್ಣು ತಪ್ಪಿ 8-10 ಮಹಾಪ್ರಬಂಧಗಳು ಉಳಿದುಕೊಂಡಿರುವ ಸಂಭವವಿದೆ.

**ಪಟ್ಟಿ ೧**

**ಪಿಎಚ್.ಡಿ.ಗಾಗಿ ಅಭ್ಯಸಿಸಿದ ಸಂಶೋಧಕರ ಮತ್ತು ಮಹಾಪ್ರಬಂಧಗಳ ಕಾಲಾನುಕ್ರಮ ಸೂಚಿ**

೧. ಹಿರೇಮಲ್ಲೂರ (ಈಶ್ವರನ್)
ಹರಿಹರನ ಕೃತಿಗಳು: ಒಂದು ಸಂಖ್ಯಾನಿರ್ಣಯ, ಕರ್ನಾಟಕ ವಿ. ವಿ. ೧೯೫೫

೨. ತಿಪ್ಪೇರುದ್ರಸ್ವಾಮಿ (ಎಚ್)
ಶರಣರ ಅನುಭಾವ ಸಾಹಿತ್ಯ. ಕರ್ನಾಟಕ ವಿ. ವಿ. ೧೯೬೨

೩. ಬಸು ಪಟ್ಟದ (ಎಸ್.ಎಸ್.)
ನಿಜಗುಣ ಶಿವಯೋಗಿ ಅವರ ಜೀವನ ಮತ್ತು ಕೃತಿಗಳು, ಕರ್ನಾಟಕ ವಿ.ವಿ. ೧೯೬೩

೪. ಕಮಲಮ್ಮ (ವಿ)
ಅಕ್ಕಮಹಾದೇವಿ ಜೀವನ ಮತ್ತು ಕೃತಿಗಳು, ಉಸ್ಮಾನಿಯಾ ವಿ.ವಿ. ೧೯೬೪

೫. ಕೊಟ್ರಶೆಟ್ಟಿ (ಎಂ.ಬಿ.)
ಸಿದ್ಧರಾಮ ಶಿವಯೋಗಿ, ಕರ್ನಾಟಕ ವಿ.ವಿ. ೧೯೬೮

೬. ವಿದ್ಯಾಶಂಕರ (ಎಸ್)
ವೀರಶೈವ ಪುರಾಣಗಳು : ಒಂದು ಅಧ್ಯಯನ, ಬೆಂಗಳೂರು ವಿ.ವಿ. ೧೯೬೮.

೭. ವಿನೋದಾಬಾಯಿ (ಎನ್)
ಅಂಡಾಳ್-ಮಹಾದೇವಿ-ಮೀರಾ. ದೆಹಲಿ ವಿ.ವಿ. ೧೯೬೯

೮. ಲಠ್ಠೆ (ಎಂ.ಎಸ್.)
ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ, ಕರ್ನಾಟಕ ವಿ.ವಿ. ೧೯೭೦

೯. ಹೊಸಮಠ (ಬಿ.ಕೆ.)
ಸರ್ವಜ್ಞ : ಜೀವನ, ಕೃತಿಗಳು ಹಾಗು ಸಂದೇಶ. ಕರ್ನಾಟಕ, ವಿ.ವಿ. ೧೯೭೦.

೧೦. ಮರುಳಯ್ಯ (ಸಾ.ಶಿ.)
ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ, ಕರ್ನಾಟಕ ವಿ.ವಿ. ೧೯೭೦

೧೧. ಶ್ರೀನಿವಾಸ (ಪಾ.ಶ)
ಶರಣ ಸಾಹಿತ್ಯ ಮತ್ತು ದಾಸ ಸಾಹಿತ್ಯ: ತೌಲನಿಕ ಅಧ್ಯಯನ, ಮದ್ರಾಸ್ ವಿ.ವಿ. ೧೯೭೦

೧೨. ಶಿವಾನಂದ (ವಿ.)
ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಕರ್ನಾಟಕ ವಿ.ವಿ. ೧೯೭೦

೧೩. ಹೆಂಡಿ (ಬಿ.ಬಿ.)
ಹರಿಹರನ ವ್ಯಕ್ತಿತ್ವ ಹಾಗು ಕವಿತ್ವ, ಕರ್ನಾಟಕ, ವಿ.ವಿ. ೧೯೭೧

೧೪. ಘಿವಾರಿ (ಎಸ್.ಜಿ.)
ದಾರ್ಶನಿಕ ಕವಿ ಚಾಮರಸನ ಜೀವನ ಸಾಹಿತ್ಯ ತತ್ವಗಳ ವಿಮರ್ಶಾತ್ಮಕ ಅಧ್ಯಯನ, ಕರ್ನಾಟಕ ವಿ.ವಿ. ೧೯೭೩

೧೫. ಹಿರೇಮಠ (ಎಸ್.ಬಿ.)
ಬಸವಣ್ಣನವರ ವಚನಗಳಲ್ಲಿ ಲೋಕಾನುಭವ ಮತ್ತು ಶಿವಾನುಭವ, ಕರ್ನಾಟಕ ವಿ.ವಿ. ೧೯೭೭

೧೬. ಗುಂಜಾಳ (ಎಸ್.ಆರ್.)
ಉತ್ತಂಗಿ ಚೆನ್ನಪ್ಪನವರ ಜೀವನ ಮತ್ತು ಕೃತಿಗಳು, ಕರ್ನಾಟಕ ವಿ.ವಿ. ೧೯೭೭

೧೭. ಕಾಪಸೆ (ಗುರುಲಿಂಗ)
ಮಧುರಚೆನ್ನರ ಜೀವನ ಹಾಗು ಕೃತಿಗಳ ಸಮೀಕ್ಷೆ, ಕರ್ನಾಟಕ ವಿ.ವಿ. ೧೯೭೭

೧೮. ವೃಷಭೇಂದ್ರ ಸ್ವಾಮಿ (ಎಸ್.ಎಂ.)
ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ, ಕರ್ನಾಟಕ ವಿ.ವಿ. ೧೯೭೮

೧೯. ಉಡಚಣ (ಶೈಲಜಾ)
ವಚನಕಾರರ ದೃಷ್ಟಿಯಲ್ಲಿ ಸ್ತ್ರೀ, ಕರ್ನಾಟಕ ವಿ.ವಿ. ೧೯೭೮

೨೦. ಜವಳಿ (ಬಿ.ಸಿ.)
ಹರಿಹರ ಕವಿಯ ಸ್ತ್ರೀ ಪಾತ್ರ ದರ್ಶನ. ಕರ್ನಾಟಕ ವಿ.ವಿ. ೧೯೭೯

೨೧. ಫಲಗಟ್ಟಿಮಠ (ಸಿದ್ಧಯ್ಯ, ಎಂ.)
ನಿಜಗುಣರ ಕೃತಿಗಳು, ಗುಲಬರ್ಗಾ ವಿ.ವಿ. ೧೯೮೦

೨೨. ಸೂರ್ಯನಾರಾಯಣ (ಎಲ್.ಎ.)
ರಾಘವಾಂಕ–ಒಂದು ಅಧ್ಯಯನ, ಬೆಂಗಳೂರು ವಿ.ವಿ. ೧೯೮೦

೨೩. ವಿಜಯಕುಮಾರ (ಹ.ನಂ.)
ಕನ್ನಡ ಸಾಹಿತ್ಯದಲ್ಲಿ ಬಸವೇಶ್ವರರ ವ್ಯಕ್ತಿತ್ವ, ಬೆಂಗಳೂರು ವಿ.ವಿ. ೧೯೮೧

೨೪. ಚವಲಾರ (ಸರೋಜಿನಿ)
ಜಯದೇವಿ ತಾಯಿ ಲಿಗಾಡೆ, ಕರ್ನಾಟಕ ವಿ.ವಿ. ೧೯೮೨

೨೫. ಸಾರಾಪೂರೆ (ಎಂ.ಜಿ.)
ಶಿವಕವಿ ಸಿದ್ಧನಂಜೇಶ ಹಾಗೂ ಅವನ ಕೃತಿಗಳು, ಕರ್ನಾಟಕ ವಿ.ವಿ. ೧೯೮೨



೨೬. ಅಯ್ಯನಗೌಡರ (ಎಸ್.ವಿ.)
ಮೈಲಾರ ಬಸವಲಿಂಗ ಶರಣರು: ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೮೨

೨೭. ಪೂಜಾರ (ವಿ.ಜಿ.)
ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಗುಲಬರ್ಗಾ, ವಿ.ವಿ. ೧೯೮೨

೨೮. ಸಬರದ (ಬಸವರಾಜ)
ದ್ಯಾಂಪುರ ಚನ್ನಕವಿಗಳು: ಜೀವನ ಮತ್ತು ಕೃತಿಗಳು, ಕರ್ನಾಟಕ ವಿ.ವಿ. ೧೯೮೨

೨೯. ಮರಿಬಾಶೆಟ್ಟಿ (ಶಶಿಕಲಾ)
ಬಸವೇಶ್ವರ ಮತ್ತು ಪುರಂದರದಾಸ, ಗುಲಬರ್ಗಾ ವಿ.ವಿ. ೧೯೮೩

೩೦. ಹೊರಕೇರಿ (ಎಂ.ಬಿ.)
ನಲವಡಿ ಶ್ರೀಕಂಠಶಾಸ್ತ್ರಿಗಳ ಜೀವನ ಹಾಗು ಸಾಹಿತ್ಯ, ಕರ್ನಾಟಕ ವಿ.ವಿ. ೧೯೮೩

೩೧. ಅಕಬರ ಅಲಿ (ಎಂ.)
ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ತತ್ವ, ಬೆಂಗಳೂರು ವಿ.ವಿ. ೧೯೮೩

೩೨. ಕಲ್ಗುಡಿ (ಬಸವರಾಜ)
ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗು ಚಾರಿತ್ರಿಕ-ಪ್ರಜ್ಞೆ, ಬೆಂಗಳೂರು ವಿ.ವಿ. ೧೯೮೩

೩೩. ಬಡಿಗೇರ(ವಿ.ಜಿ.)
ಶಿರಸಂಗಿ ಸಂಸ್ಥಾನ–ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೮೪

೩೪. ಧನಶ್ರೀ (ಮಾಣಿಕರಾವ್)
ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ, ಗುಲಬರ್ಗಾ ವಿ.ವಿ. ೧೯೮೪

೩೫. ಹರದಗಟ್ಟಿ (ಎಸ್.ಎಂ.)
ಕವಿ ರಾಘವಾಂಕ ಹಾಗು ಅವನ ಕೃತಿಗಳು, ಕರ್ನಾಟಕ ವಿ.ವಿ. ೧೯೮೫

೩೬. ತಾರಾನಾಥ (ಎನ್.ಎಸ್.)
ಕನ್ನಡದಲ್ಲಿ ನಂಬಿಯಣ್ಣ, ಬೆಂಗಳೂರು ವಿ.ವಿ. ೧೯೮೫

೩೭. ದಂಡೆ (ಜಯಶ್ರೀ)
ಬೆಡಗಿನ ವಚನಗಳು, ಗುಲಬರ್ಗಾ ವಿ.ವಿ. ೧೯೮೬

೩೮. ವಾಲಿ (ಎಂ.ಎನ್.)
ಸಿಂಪಿ ಲಿಂಗಣ್ಣ ಅವರ ಜೀವನ ಹಾಗು ಸಾಹಿತ್ಯ, ಕರ್ನಾಟಕ ವಿ.ವಿ. ೧೯೮೬

೩೯. ಯಕ್ಕುಂಡಿ ಮಠ (ಬಿ.ವಿ.)
ಬಸವಪೂರ್ವದ ವೀರಶೈವ ಸಾಹಿತ್ಯ, ಕರ್ನಾಟಕ ವಿ.ವಿ. ೧೯೮೭

೪೦. ಸಾಲಿಮಠ (ವಿ.ವಿ.)

ಜನಪದ ಗೀತ ಸಾಹಿತ್ಯದಲ್ಲಿ ಕಲ್ಯಾಣದ ಬಸವಣ್ಣನವರು, ಕರ್ನಾಟಕ ವಿ.ವಿ. ೧೯೮೭

೪೧. ಶಾಸ್ತ್ರೀ ಮಠ (ಎಮ್.ಬಿ.)
ಕೂಡಲೂರ ಬಸವಲಿಂಗ ಶರಣರು, ಕರ್ನಾಟಕ ವಿ.ವಿ. ೧೯೮೭

೪೨. ಪಾಟೀಲ (ಎಸ್.ಎನ್.)
ಅಕ್ಕಮಹಾದೇವಿ, ಕರ್ನಾಟಕ ವಿ.ವಿ. ೧೯೮೭

೪೩. ಸ್ವಾಮಿ (ಬಿ.ಎಸ್.)
ಮಲೆಯ ಮಾದೇಶ್ವರ : ಒಂದು ಅಧ್ಯಯನ, ಮೈಸೂರು ವಿ.ವಿ. ೧೯೮೭

೪೪. ವಿಜಯ (ಎಸ್. ಎನ್.)
ಚನ್ನಬಸವ ಪುರಾಣ: ಒಂದು ಅಧ್ಯಯನ, ಬೆಂಗಳೂರು ವಿ.ವಿ. ೧೯೮೮

೪೫. ಸೊಪ್ಪಿಮಠ (ಬಿ.ಎ.)
ಕೊಡೆಕಲ್ಲ ಬಸವಣ್ಣ, ಕರ್ನಾಟಕ ವಿ.ವಿ. ೧೯೮೮

೪೬. ಹೂಗಾರ (ಎಂ.ಬಿ.)
ಶರಣರ ಆಂದೋಲನ ಹಾಗು ಹೊಸ ಸಮಾಜದ ಪರಿಕಲ್ಪನೆ, ಕರ್ನಾಟಕ ವಿ.ವಿ. ೧೯೮೮

೪೭. ಪ್ರೀತಿ (ಶುಭಚಂದ್ರ)
೨೦ನೇ ಶತಮಾನದ ವಚನ ಸಾಹಿತ್ಯ, ಬೆಂಗಳೂರು ವಿ.ವಿ. ೧೯೮೮

೪೮. ಹಿರೇಮಠ (ಎನ್.ಎಂ.)
ಶರಣ ಬಸವೇಶ್ವರರು ಮತ್ತು ಅವರ ಪರಿಸರದ ಸಾಹಿತ್ಯ, ಗುಲಬರ್ಗಾ ವಿ.ವಿ. ೧೯೮೯

೪೯. ಗಂಗಮ್ಮ (ಎಚ್.ಎಸ್.)
ಮುದನೂರ ದಾಸಿಮಯ್ಯ, ಕರ್ನಾಟಕ ವಿ.ವಿ. ೧೯೮೯

೫೦. ವೆಂಕಟೇಶ (ಕೆ.ಬಿ.)
ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮಂಗಳೂರು ವಿ.ವಿ. ೧೯೮೯

೫೧. ಜವರಯ್ಯ (ಮ.ನ.)
ದಲಿತ ವರ್ಗದ ಶರಣರು: ಒಂದು ಅಧ್ಯಯನ, ಮೈಸೂರು ವಿ.ವಿ. ೧೯೯೦

೫೨. ಹಂಡಿಗಿ (ಎಸ್.ಎಂ.)
ಜ.ಚ.ನಿ. ವಚನ ಸಾಹಿತ್ಯ, ಕರ್ನಾಟಕ ವಿ.ವಿ. ೧೯೯೦

೫೩. ನಾರಾಯಣ (ಪಿ.ವಿ.)
ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು ವಿ.ವಿ. ೧೯೯೧

೫೪. ಹುಗ್ಗಿ (ಪಿ.ಎಂ.)
ಷಡಕ್ಷರದೇವ: ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೯೧



೫೫. ಪೂಜಾರ (ಬಾಬು)
ಶರಣರ ಕಾಯಕ ತತ್ವ, ಗುಲಬರ್ಗಾ ವಿ.ವಿ. ೧೯೯೧

೫೬. ಪುರಾಣಿಕ (ಡಿ.ವಿ.)
ಮಗ್ಗೆಯ ಮಾಯದೇವ: ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೯೨

೫೭. ಪ್ರಭುಸ್ವಾಮೀ ಮಠ (ಸಿ.ವಿ.)
ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ಕರ್ನಾಟಕ ವಿ.ವಿ. ೧೯೯೨

೫೮. ನಾವಲಗಿ (ಸಿ.ಕೆ)
ವಚನ ಸಾಹಿತ್ಯದಲ್ಲಿ ಜಾನಪದೀಯ ಅಂಶಗಳು, ಕರ್ನಾಟಕ, ವಿ.ವಿ. ೧೯೯೨

೫೯. ಹೆಗಡೆ (ಶ್ರೀಮತಿ ಎಸ್.ಎಂ.)
ನಾಲ್ಕು ಶೂನ್ಯ ಸಂಪಾದನೆಗಳು, ಒಂದು ಅಧ್ಯಯನ, ಶಿವಾಜಿ ವಿ.ವಿ. ಕೊಲ್ಹಾಪೂರ, ೧೯೯೨

೬೦. ವೀಣಾ ಆಚಾರ್ಯ (ಬಿ.)
ಅಕ್ಕಮಹಾದೇವಿ ವಚನಗಳಲ್ಲಿ ಸ್ತ್ರೀ ಸಂವೇದನೆ, ಮಂಗಳೂರು ವಿ.ವಿ. ೧೯೯೨

೬೧. ಶೀಗಿಹಳ್ಳಿ (ಬಾಳಣ್ಣ)
ಡೆಪ್ಯೂಟಿ ಚೆನ್ನಬಸಪ್ಪನವರ ಜೀವನ ಮತ್ತು ಸಾಧನೆ, ಕರ್ನಾಟಕ ವಿ.ವಿ. ೧೯೯೩

೬೨. ವಿಸಾಜಿ (ಬಿ.ಬಿ.)
ಶೂನ್ಯ ಸಂಪಾದನೆಗಳು: ಒಂದು ತೌಲನಿಕ ಅಧ್ಯಯನ, ಗುಲಬರ್ಗಾ ವಿ.ವಿ. ೧೯೯೩

೬೩. ಸುಲೋಚನಾ (ಎಸ್.)
ಶಿವಶರಣರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ, ಕರ್ನಾಟಕ ವಿ.ವಿ. ೧೯೯೩

೬೪. ಕುಲಕರ್ಣಿ (ಪಿ.ವಿ.)
ತಮಿಳಿನಲ್ಲಿ ಕನ್ನಡ ವೀರಶೈವ ಸಾಹಿತ್ಯ, ಮಧುರೈ ವಿ.ವಿ. ೧೯೯೩

೬೫. ವೇದಾ (ಎಂ.ಎಸ್.)
ಬಿ. ಪುಟ್ಟಸ್ವಾಮಯ್ಯನವರ ನಾಟಕಗಳು ಮತ್ತು ಕಾದಂಬರಿಗಳು: ಒಂದು ಅಧ್ಯಯನ, ಮೈಸೂರು. ವಿ.ವಿ. ೧೯೯೩

೬೬. ಒಡೆಯರ (ಲೋಕೇಶ ಎಲ್.ಎಸ್.)
ತರಳಬಾಳು ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು, ಜೀವನ ಮತ್ತು ಸಾಧನೆ, ಕುವೆಂಪು ವಿ.ವಿ. ೧೯೯೩

೬೭. ದಾನರೆಡ್ಡಿ (ರಾಜಶೇಖರ)
ಷಣ್ಮುಖ ಶಿವಯೋಗಿ: ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೯೪

೬೮. ಹಿರೇಮಠ (ವಿ.ಜಿ.)

ವೀರಭದ್ರ ದೇವರು: ಒಂದು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿ.ವಿ. ೧೯೯೪

೧೯. ಶೇರಿಕಾರ (ನೀಲಮ್ಮ)
ಬಸವ ಕಲ್ಯಾಣ: ಒಂದು ಸಾಂಸ್ಕೃತಿಕ ಅಧ್ಯಯನ, ಗುಲಬರ್ಗಾ ವಿ.ವಿ. ೧೯೯೪

೨೦. ಹಳ್ಳಿಕೇರಿ (ಎಫ್.ಟಿ.)
ಕೆರೆಯ ಪದ್ಮರಸನ ಕುಟುಂಬ ವರ್ಗ : ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೯೪

೨೧. ಬುಳ್ಳಾ (ನಾಗಾಬಾಯಿ)
ಡಾ. ಸಿದ್ದಯ್ಯ ಪುರಾಣಿಕರ ಜೀವನ ಮತ್ತು ಕೃತಿಗಳು, ಗುಲಬರ್ಗಾ ವಿ.ವಿ. ೧೯೯೪

೨೨. ನರಕೆ (ಸುಶೀಲಾ)
ಮೋಳಿಗೆ ಮಾರಯ್ಯ ಮತ್ತು ಮಹಾದೇವಮ್ಮ: ಒಂದು ಅಧ್ಯಯನ, ಗುಲಬರ್ಗಾ ವಿ.ವಿ. ೧೯೯೪

೨೩. ಕುಂದಗೋಳ (ಪಿ.ಎಂ.)
ವೀರಶೈವ ಕವಿಗಳ ಮೇಲೆ ವಚನಕಾರರ ಪ್ರಭಾವ, ಬೆಂಗಳೂರು ವಿ.ವಿ. ೧೯೯೪

೨೪. ಮಂಗಳಗೌರಿ
ಸರ್ವಜ್ಞ ಮತ್ತು ಕಬೀರ : ಒಂದು ತೌಲನಿಕ ಅಧ್ಯಯನ, ಮೈಸೂರು ವಿ.ವಿ. ೧೯೯೪

೨೫. ಧರ್ಮಪ್ಪ (ಎ.ಕೆ.)
ಹರಿಹರನ ರಗಳೆಗಳಲ್ಲಿ ಜಾತಿ ಸಮಸ್ಯೆ: ಒಂದು ಅಧ್ಯಯನ, ಮಂಗಳೂರು ವಿ.ವಿ. ೧೯೯೪

೨೬. ಯಾಳವಾರ (ಎಸ್.ಎನ್.)
ಆದಯ್ಯ: ಒಂದು ಅಧ್ಯಯನ, ಗುಲಬರ್ಗಾ ವಿ.ವಿ. ೧೯೯೫

೨೭. ಪೂಜಾರ (ಗಂಗಾ)
ಡಾ. ಎಚ್. ತಿಪ್ಪೇರುದ್ರಸ್ವಾಮಿಗಳ ವೈಚಾರಿಕ ಸಾಹಿತ್ಯ, ಗುಲಬರ್ಗಾ ವಿ.ವಿ. ೧೯೯೫

೨೮. ಕುತ್ನಳ್ಳಿ (ನೀಲಮ್ಮ ಬಸವರಾಜ ಮಹಾಂತಗೌಡರ)
ಮಹಾದೇವ ಬಣಕಾರ: ಬದುಕು ಬರಹ, ಗುಲಬರ್ಗಾ ವಿ.ವಿ. ೧೯೯೫

೨೯. ಶೀಲಾಕುಮಾರಿ (ಡಿ)
ಸಂಸ್ಕೃತ ಸಾಹಿತ್ಯಕ್ಕೆ ಮಹಾಕವಿ ಷಡಕ್ಷರದೇವನ ಕೊಡುಗೆ, ಮೈಸೂರು ವಿ.ವಿ. ೧೯೯೫

೩೦. ಅಭಿನವ ಕುಮಾರಸ್ವಾಮಿಗಳು (ಜಮಖಂಡಿ) (ಚೆನ್ನಬಸವದೇವರು)
ಮಗ್ಗೆಯ ಮಾಯಿದೇವನ ಶಿವಾನುಭವ ಸೂತ್ರ : ಒಂದು ಅಧ್ಯಯನ, ಕನ್ನಡ ವಿ.ವಿ. ಹಂಪಿ, ೧೯೯೬

೩೧. ದೊಡಮನಿ (ಜಿ.ಪಿ.)



ಶರಣರ ಕುರಿತು ಕಾದಂಬರಿಗಳು : ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೯೬

೩೨. ವಾರಿ (ಎಂ.ಬಿ.)
ಸ್ವಾದಿ ಅರಸುಮನೆತನ : ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೯೬

೩೩. ಚಿಂತಾಣಿ (ಮಹೇಶ)
ಶಿ.ಶಿ. ಬಸವನಾಳರ ಜೀವನ ಮತ್ತು ಸಾಧನೆ, ಕರ್ನಾಟಕ ವಿ.ವಿ. ೧೯೯೬

೩೪. ರಾಠೋಡ (ಪಿ.ಕೆ.)
ಹಳಕಟ್ಟಿಯವರ ಪತ್ರಿಕಾ ಸಾಹಿತ್ಯ, ಕರ್ನಾಟಕ ವಿ.ವಿ. ೧೯೯೬

೩೫. ಪ್ರಭಾಕರ ಒಬ್ಬಿ
ಶಿ.ಚ. ನಂದಿಮಠರು: ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೯೬

೩೬. ಸಿಸ್ಟರ್ ವಾಯಲೆಟ್
೧೨ನೆಯ ಮತ್ತು ೨೦ನೆಯ ಶತಮಾನದ ವಚನ ಸಾಹಿತ್ಯ: ಒಂದು ತೌಲನಿಕ ಅಧ್ಯಯನ, ಬೆಂಗಳೂರು ವಿ.ವಿ. ೧೯೯೬

೩೭. ರವೀಂದ್ರನಾಥ (ಕೆ.)
ಕನ್ನಡ ಸಾಹಿತ್ಯಕ್ಕೆ ಮಠಮಾನ್ಯಗಳ ಸೇವೆ, ಗುಲಬರ್ಗಾ ವಿ.ವಿ. ೧೯೯೬

೩೮. ಮದಬಾವಿ (ಎಂ.ಎಸ್.)
ಬಬಲಾದಿ ಚಿಕ್ಕಯ್ಯ ಸ್ವಾಮಿಗಳ ಜೀವನ ಹಾಗೂ ಕೃತಿ, ಸಮೀಕ್ಷೆ, ಕರ್ನಾಟಕ ವಿ.ವಿ. ೧೯೯೬

೩೯. ಸುಮಂಗಲಿ (ಎನ್.ಕೆ.)
ವಚನ ಚಳವಳಿ ಹಾಗೂ ಸ್ತ್ರೀ ಜಾಗ್ರತಿ, ಬೆಂಗಳೂರು ವಿ.ವಿ. ೧೯೯೬

೪೦. ಅಣ್ಣಾನವರ (ರಾಜೇಂದ್ರ)
ಅದೃಶ್ಯ ಕವಿಯ ಜೀವನ ಹಾಗೂ ಕೃತಿಗಳು, ಕರ್ನಾಟಕ ವಿ.ವಿ. ೧೯೯೭

೪೧. ಬಡಿಗೇರ (ಎಸ್.ಎನ್.)
ಸಂ.ಶಿ. ಭೂಸನೂರಮಠರ ಬದುಕು ಬರಹ, ಕರ್ನಾಟಕ ವಿ.ವಿ. ೧೯೯೭

೪೨. ದೋಟಿಹಾಳ (ಮಹಾಂತೇಶ)
ಮೂಜಗಂ: ಜೀವನ ಮತ್ತು ಸಾಧನೆ, ಕರ್ನಾಟಕ ವಿ.ವಿ. ೧೯೯೭

೪೩. ಸುಜ್ಞಾತ (ಸೂರ್ಯಕಾಂತ)
ಬಸವ-ಬುದ್ಧ : ಒಂದು ಅಧ್ಯಯನ, ಗುಲಬರ್ಗಾ ವಿ.ವಿ. ೧೯೯೭

೪೪. ಹದ್ಲಿ (ಬಿ.ಸಿ.)
ಮುಳಗುಂದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು, ಕರ್ನಾಟಕ ವಿ.ವಿ. ೧೯೯೭

೯೫. ರುಮ್ಮಾ (ಶಿವಗಂಗಮ್ಮ)

ಬಸವಣ್ಣ–ಕಾರ್ಲಮಾರ್ಕ್ಸ್ : ಒಂದು ಅಧ್ಯಯನ, ಗುಲಬರ್ಗಾ ವಿ.ವಿ. ೧೯೯೭

೯೬. ಪಾಟೀಲ (ಎಸ್.ಎಸ್.)

ಹರಿಹರನ ರಗಳೆಗಳು : ಒಂದು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿ.ವಿ. ೧೯೯೭

೯೭. ಯೋಗೇಶ್ವರಪ್ಪ (ಡಿ.ಎನ್.)

ಹಾಗಲವಾಡಿ ಪಾಳೆಯಗಾರರು: ಒಂದು ಸಮಗ್ರ ಅಧ್ಯಯನ, ಮೈಸೂರು ವಿ.ವಿ. ೧೯೯೭

೯೮. ಹಮೀದ (ಅಬ್ದುಲ್)

ಸೂಫಿಪಥ ಮತ್ತು ಶರಣಪಥ : ಒಂದು ತೌಲನಿಕ ಅಧ್ಯಯನ, ಬೆಂಗಳೂರು ವಿ.ವಿ. ೧೯೯೮

೯೯. ವೀರಪ್ಪ (ಬಿ.ಸಿ.)

ಬೆಂಗಳೂರು ನಗರ ವೀರಶೈವ ಮಠಗಳು, ಬೆಂಗಳೂರು ವಿ.ವಿ. ೧೯೯೮

೧೦೦. ಮೇತ್ರಿ (ಮಲ್ಲಿಕಾರ್ಜುನ)

ಹರ್ಡೇಕರ ಮಂಜಪ್ಪ: ಜೀವನ ಮತ್ತು ಕೃತಿಗಳು, ಕರ್ನಾಟಕ ವಿ.ವಿ. ೧೯೯೮

೧೦೧. ಜಾಲವಾದಿ (ಅನ್ನಪೂರ್ಣ)

ಶಂಕರದಾಸಿಮಯ್ಯನ ಪುರಾಣ: ಒಂದು ಅಧ್ಯಯನ, ಕರ್ನಾಟಕ ವಿ.ವಿ. ೧೯೯೮

೧೦೨. ಸಾಮಕ (ಎಸ್.ಬಿ.)

ಕವಲೇದುರ್ಗ ಮತ್ತು ನಗರಗಳಲ್ಲಿ ಕೆಳದಿ ಅರಸರ ವಾಸ್ತು ಮತ್ತು ಮೂರ್ತಿಶಿಲ್ಪ, ಬೆಂಗಳೂರು ವಿ.ವಿ. ೧೯೯೮

೧೦೩. ನಾಗಭೂಷಣ (ಸಿ.)

ಏಕಾಂತ ರಾಮಯ್ಯ ಮತ್ತು ಆದಯ್ಯ: ಒಂದು ತೌಲನಿಕ ಅಧ್ಯಯನ, ಗುಲಬರ್ಗಾ ವಿ.ವಿ. ೧೯೯೮

೧೦೪. ಪಾಲೇಕರ (ಎಸ್.ಎ.)

ಬಸವೇಶ್ವರರ ರಾಜಕೀಯ ತತ್ವಗಳು, ಗುಲಬರ್ಗಾ ವಿ.ವಿ. ೧೯೯೮

೧೦೫. ಪಾಟೀಲ (ಬಿ.ಎಂ.)

ಡಾ. ಫ.ಗು. ಹಳಕಟ್ಟಿ: ಜೀವನ ಮತ್ತು ಕೃತಿಗಳು, ಕರ್ನಾಟಕ ವಿ.ವಿ. ೨೦೦೩

೧೦೬. ಪಾಟೀಲ (ಶ್ರೀಶೈಲ, ಎಸ್.)

ಡಾ. ಎಸ್.ಆರ್. ಗುಂಜಾಳರ ಜೀವನ ಸಾಧನೆ, ಗುಲಬರ್ಗಾ ವಿ.ವಿ. ೨೦೦೪



ಮೇಲಿನ ಪ್ರಬಂಧಗಳನ್ನು ಅವಲೋಕಿಸಿದರೆ ಕೆಳಗೆ ಕಾಣಿಸಿದ ಕೆಲವು ವಿಶೇಷ ಸಂಗತಿಗಳು ಗೋಚರಿಸುತ್ತವೆ.

೧. ಸಂಶೋಧಕರು ಸಾಮಾನ್ಯವಾಗಿ ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಕೇವಲ ಪುರುಷರೆ ಇದ್ದುದು ಕಂಡುಬರುತ್ತದೆ. ಕ್ರಮೇಣ ಪುರುಷರಂತೆ ಸ್ತ್ರೀಯರು ಸಹ ಸಂಶೋಧನ ಕ್ಷೇತ್ರದಲ್ಲಿ ಮಿಂಚಿರುವುದು ನಮಗೆ ಕಂಡುಬರುತ್ತದೆ. ಮೇಲಿನ ಪಟ್ಟಿಯಲ್ಲಿ ೨೫ ಜನ ಮಹಿಳೆಯರು ವಿವಿಧ ವಿಷಯಗಳಲ್ಲಿ ಪಿಎಚ್.ಡಿ. ಪ್ರಬಂಧಗಳನ್ನು ಬರೆದಿರುವುದು ಹೆಮ್ಮೆಯ ಮಾತಾಗಿದೆ.

೧. ಕಮಲಮ್ಮ (ವಿ), ೨. ವಿನೋದಾಬಾಯಿ (ಎನ್), ೩. ಉಡಚಣ (ಶೈಲಜಾ), ೪. ಚವಲಾರ (ಸರೋಜಿನಿ), ೫. ಮರಿಬಾಶೆಟ್ಟಿ (ಶಶಿಕಲಾ), ೬. ದಂಡೆ (ಜಯಶ್ರೀ), ೭. ಪಾಟೀಲ (ಎಸ್.ಎಸ್.), ೮. ಪ್ರೀತಿ (ಶುಭಚಂದ್ರ), ೯. ಗಂಗಮ್ಮ (ಎಚ್.ಎನ್.) ೧೦. ವೇದಾ (ಎಂ.ಎಸ್.), ೧೧. ಹೆಗಡೆ (ಎಸ್.ಎಂ.), ೧೨. ಸುಲೋಚನಾ (ಎನ್), ೧೩. ಶೇರಿಕಾರ (ನೀಲಮ್ಮ), ೧೪. ಬುಳ್ಳಾ (ನಾಗಾಬಾಯಿ), ೧೫. ನರಕೆ (ಸುಶೀಲಾ), ೧೬. ಮಂಗಳಗೌರಿ, ೧೭. ಪೂಜಾರ (ಗಂಗಾ), ೧೮. ಕತ್ನಳ್ಳಿ (ನೀಲಮ್ಮ ಬಸವರಾಜ ಮಹಾಂತಗೌಡರ), ೧೯. ಶೀಲಾಕುಮಾರಿ, ೨೦. ಸಿಸ್ಟರ್ ವಾಯಲೆಟ್ಟ್, ೨೧. ಸುಮಂಗಲಿ (ಎನ್.ಕೆ.), ೨೨. ಸುಜಾತಾ (ಸೂರ್ಯಕಾಂತ), ೨೩. ರುಮ್ಮಾ (ಶಿವಗಂಗಮ್ಮಾ), ೨೪. ಜಾಲವಾದಿ (ಅನ್ನಪೂರ್ಣ), ೨೫. ವೀಣಾ ಆಚಾರ್ಯ (ಎ), ಮಂಗಳಗೌರಿ ಇವರು ಬರೆದ ಮಹಾಪ್ರಬಂಧಗಳೂ ಸಹ ವೈವಿಧ್ಯಪೂರ್ಣವಾಗಿವೆ.

೨. ಶಿವಶರಣೆಯರನ್ನು ಕುರಿತು ಸಂಶೋಧನೆಯು ಸಹ ಸಾಕಷ್ಟು ಪ್ರಮಾಣದಲ್ಲಿ ಆಗಿರುವುದೆಂದು ವಿದಿತವಾಗುತ್ತದೆ. ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಪ್ರಭುದೇವ, ಚನ್ನಬಸವಣ್ಣ, ಕೊಡೆಕಲ್ಲ ಬಸವಣ್ಣ, ಶರಣ ಬಸವೇಶ್ವರ, ಮುದನೂರ ದಾಶಿಮಯ್ಯ, ಶಂಕರ ದಾಸಿಮಯ್ಯ, ಮೋಳಿಗೆಯ ಮಾರಯ್ಯ, ಮಹಾದೇವಮ್ಮ, ಆದಯ್ಯ, ಷಣ್ಮುಖ ಶಿವಯೋಗಿ, ಏಕಾಂತ ರಾಮಯ್ಯ–ಹೀಗೆ ೧೪ ಜನ ಶಿವಶರಣರನ್ನು ಶಿವಶರಣೆಯರನ್ನು ಕುರಿತು ಸಂಶೋಧನೆ ನಡೆದಿದೆ. ಆದರೆ ಶಿವಶರಣರ (ವಚನಕಾರರ) ಬೃಹತ್ ಸಂಖ್ಯೆಯನ್ನು ನೋಡಿದರೆ ಇದು ಅತ್ಯಲ್ಪವೆಂದು ಹೇಳಬೇಕಾಗುತ್ತದೆ. ಇನ್ನುಳಿದ ಮುನ್ನೂರಕ್ಕೂ ಹೆಚ್ಚಿನ ಶಿವಶರಣರ ಶರಣೆಯರ ಚರಿತ್ರೆಗಳ ಸಂಶೋಧನಾತ್ಮಕ ಅಧ್ಯಯನ ನಡೆಯಬೇಕಾಗಿದೆ. ಆದರೂ ಈ ನಿಟ್ಟಿನಲ್ಲಿ

ನಡೆದಿರುವ ಈ ಕಾರ್ಯವು ಸಂಶೋಧನೆಯ ದೀರ್ಘವಾದ ಮಾರ್ಗದಲ್ಲಿ ಪ್ರಾರಂಭದ ಕೆಲವು ಹೆಜ್ಜೆಗಳೆಂದು ಸಂತೋಷಿಸಬೇಕಾಗಿದೆ.

೩. ವಚನಕಾರರನ್ನು ಮತ್ತು ಅವರ ವಚನಗಳನ್ನು ಅವಲಂಬಿಸಿ ಅನೇಕ ಕವಿಗಳು ವಿವಿಧ ಛಂದಸ್ಸುಗಳಲ್ಲಿ ಕಾವ್ಯಗಳನ್ನು ಬರೆದಿದ್ದಾರೆ. ಇದರ ಸಮಗ್ರ ವಿವೇಚನೆಯನ್ನು ಡಾ. ಪಿ.ಎಂ. ಕುಂದಗೋಳ ಅವರು "ವೀರಶೈವ ಕವಿಗಳ ಮೇಲೆ ವಚನಕಾರರ ಪ್ರಭಾವ" ಎಂಬ ಪಿಎಚ್.ಡಿ. ಪ್ರಬಂಧವನ್ನು ಬರೆದಿರುವುದು ಅತ್ಯಂತ ಸೂಕ್ತವಾಗಿದೆ. ಹರಿಹರ ಮಹಾಕವಿಯನ್ನು ಕುರಿತು ಐದು ಮಹಾ ಪ್ರಬಂಧಗಳು ಬಂದಿರುವುದನ್ನು ನೋಡುತ್ತೇವೆ. ಹಿರೇಮಲ್ಲೂರ ಈಶ್ವರನ್, ಬಿ.ಬಿ. ಹೆಂಡಿ, ಬಿ.ಸಿ. ಜವಳಿ, ಎಸ್.ಎಂ. ಪಾಟೀಲ, ಎ.ಕೆ. ಧರ್ಮಪ್ಪ ಇವರು ಹರಿಹರನ ಜೀವನ ಕೃತಿಗಳನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಸಿಸಿ ಸಮಗ್ರ ವಿವೇಚನೆ ವಿಮರ್ಶೆ ಮಾಡಿರುವುದು ನಮ್ಮ ಯಾದಿಯಿಂದ ಕಂಡುಬರುತ್ತದೆ. ಹಾಗೆಯೇ ಡಾ. ಸಂಗಮೇಶ ಸವದತ್ತಿಮಠರು ಸಹ ಇಂಗ್ಲಿಷಿನಲ್ಲಿ ಹರಿಹರರನ್ನು ಕುರಿತು ಒಂದು ಮಹಾಪ್ರಬಂಧವನ್ನು ಬರೆದಿರುವರು. ಹೀಗೆ ಒಬ್ಬ ಕವಿಯನ್ನು ಕುರಿತು ವೈವಿಧ್ಯಪೂರ್ಣವಾದ ಸಂಶೋಧನೆಯನ್ನು ಮಾಡುವುದು ಇಂದು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಸರ್ವಜ್ಞನನ್ನು ಕುರಿತು ಮೂರು ಮಹಾಪ್ರಬಂಧಗಳು ಬರೆಯಲ್ಪಟ್ಟಿವೆ. ಇದೇ ರೀತಿ ರಾಘವಾಂಕ, ಷಡಕ್ಷರದೇವ, ಮೊಗ್ಗೆಯ ಮಾಯದೇವ, ನಿಜಗುಣ ಶಿವಯೋಗಿ ಇವರನ್ನು ಕುರಿತು ಎರಡೆರಡು ಮಹಾಪ್ರಬಂಧಗಳು ಬಂದಿವೆ. ಚಾಮರಸ, ಸಿದ್ಧನಂಜೇಶ ಅದೃಶ್ಯಕವಿಗಳನ್ನು ಕುರಿತು ಒಂದೊಂದು ಸಂಶೋಧನಾ ಪ್ರಬಂಧಗಳು ಬಂದಿರುವುವು.

೪. ಆಧುನಿಕ ಕವಿ ವಿದ್ವಾಂಸರನ್ನು ಕುರಿತು ಅನೇಕರು ಸಂಶೋಧನ ಪ್ರಬಂಧಗಳನ್ನು ಬರೆದಿರುವರು. ಫ.ಗು. ಹಳಕಟ್ಟಿ, ಉತ್ತಂಗಿ ಚೆನ್ನಪ್ಪನವರು, ಮಧುರಚೆನ್ನರು, ಜಯದೇವಿತಾಯಿ ಲಿಗಾಡೆ, ನಾಲವಡಿ ಶ್ರೀಕಂಠ ಶಾಸ್ತ್ರಿಗಳು, ದ್ಯಾಂಪುರ ಚೆನ್ನಕವಿಗಳು, ಸಿಂಪಿ ಲಿಂಗಣ್ಣನವರು, ಡಾ. ಜ.ಚ.ನಿ., ಡೆಪ್ಯೂಟಿ ಚನ್ನಬಸಪ್ಪ, ಬಿ. ಪುಟ್ಟಸ್ವಾಮಯ್ಯ, ತರಳಬಾಳು ಶಿವಕುಮಾರ ಶಿವಾಚಾರ್ಯಸ್ವಾಮಿಗಳು, ಸಿದ್ಧಯ್ಯ ಪುರಾಣಿಕ, ತಿಪ್ಪೇರುದ್ರಸ್ವಾಮಿ, ಮಹಾದೇವ ಬಣಕಾರ, ಶಿ.ಶಿ. ಬಸವನಾಳ, ಎಸ್. ಸಿ. ನಂದಿಮಠ, ಸಂ.ಶಿ. ಭೂಸನೂರಮಠ, ಮೂಜಗಂ, ಹರ್ಡೇಕರ ಮಂಜಪ್ಪ, ಬಿ. ಶಿವಮೂರ್ತಿ ಶಾಸ್ತ್ರಿಗಳು ಮುಂತಾದವರ ಜೀವನ ಕೃತಿಗಳನ್ನು ಕುರಿತು ಸಂಶೋಧನಾ ಪ್ರಬಂಧಗಳು ಬಂದಿವೆ. ಡೆಪ್ಯೂಟಿ ಚೆನ್ನಬಸಪ್ಪನವರನ್ನು ಹೊರತುಪಡಿಸಿ



ಉಳಿದ ವಿದ್ವಾಂಸರೆಲ್ಲಾ ಇಪ್ಪತ್ತನೆಯ ಶತಮಾನದಲ್ಲಿ ಜೀವಿಸಿದ್ದವರೇ. ಎಷ್ಟೋ ಸಲ ನೂರಾರು ವರ್ಷಗಳ ಹಿಂದೆ ಬಾಳಿ ಹೋದ ಅನೇಕ ವಿದ್ವಾಂಸರನ್ನು ಕುರಿತು ಸಂಶೋಧನೆಯನ್ನು ಮಾಡುವಾಗ ಅನೇಕ ಅಡ್ಡಿ ಆತಂಕಗಳು ಎದುರಿಸಿ ಬರುತ್ತವೆ. ಅವರನ್ನು ಕುರಿತ ನಿಖರವಾದ ದಾಖಲೆಗಳು ಇಂದು ಸಿಗದೇ ಹೋಗುತ್ತವೆ. ಹೀಗಾಗಿ ಅವರ ಜೀವನ ಕೃತಿಗಳನ್ನು ಕುರಿತು ಊಹಾತ್ಮಕವಾಗಿಯೇ ಬರೆಯಬೇಕಾಗುತ್ತದೆ. ಈ ಮಾತು ಈಗಲೂ ಪ್ರಸ್ತುತ. ನಮ್ಮೊಡನೆ ಇಂದು ಜೀವಿಸಿ ಶಿವಾಧೀನರಾದ ಅನೇಕ ವ್ಯಕ್ತಿಗಳನ್ನು ಕುರಿತು ನಿಖರವಾದ ದಾಖಲೆಗಳೂ ಸಿಗುವುದು ದುಸ್ತರವಾಗುತ್ತದೆ. ಇಲ್ಲಿ ಹೇಳಬೇಕಾದುದೇನೆಂದರೆ ಈ ಶತಮಾನದಲ್ಲಿ ಜೀವಿಸಿದ್ದ ಅನೇಕ ವೀರಶೈವ ವಿದ್ವಾಂಸರನ್ನು ಸಾಯುವವರೆಗೆ ಗಡೆಗಣಿಸಿ ಸತ್ತ ನಂತರ, ಖಚಿತವಾದ ದಾಖಲೆಗಳು ನಶಿಸಿಹೋದ ಮೇಲೆ, ನಾವು ಅವರನ್ನು ಕುರಿತ ಸಂಶೋಧನೆಗೆ ತೊಡಗುತ್ತೇವೆ. ಹೀಗಾಗಿ ಆ ಗಣ್ಯ ವ್ಯಕ್ತಿಗಳ ಸಮಗ್ರವಾದ ನಿಖರವಾದ ಮಾಹಿತಿಯನ್ನು ಕೊಡುವುದು ದುಸ್ತರಾಗುತ್ತದೆ. ಹೀಗೆ ಮಾಹಿತಿಯ ಅಭಾವದಿಂದ ಸಂಶೋಧಕರಿಗೆ ನಿರುತ್ಸಾಹವೆನಿಸುತ್ತದೆ. ಈ ದೃಷ್ಟಿಯಿಂದ ಮೇಲೆ ಹೆಸರಿಸಿದ ಆಧುನಿಕ ಕಾಲದ ವಿದ್ವಾಂಸರನ್ನು ಕುರಿತು ಪಿಎಚ್.ಡಿ. ಪ್ರಬಂಧಗಳು ಸೃಷ್ಟಿಯಾದುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ. ಇವರುಗಳನ್ನು ಹೊರತುಪಡಿಸಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಮಾಡಿದ ಎಲೆ ಮರೆಯ ಹೂವಿನಂತಿರುವ ಇನ್ನುಳಿದ ವಿದ್ವಾಂಸರ ಬಗೆಗೂ ಇಂಥ ಸಂಶೋಧನ ಪ್ರಬಂಧಗಳು ಮೂಡಿ ಬರಬೇಕಾಗಿದೆ. ಉದಾ: ಯಜಮಾನ ವೀರಸಂಗಪ್ಪನವರು, ಹಾನಗಲ್ಲ ಕುಮಾರ ಶಿವಯೋಗಿಗಳು, ಚನ್ನಮಲ್ಲಿಕಾರ್ಜುನರು ಮುಂತಾದ ಸಾಹಿತ್ಯಜ್ಞರ ಬಗೆಗೆ ಎಸ್. ನಿಜಲಿಂಗಪ್ಪ, ಬಿ.ಡಿ. ಜತ್ತಿ, ವೀರೇಂದ್ರ ಪಾಟೀಲ, ಸಿದ್ದಪ್ಪ ಕಂಬಳಿ ಮುಂತಾದ ರಾಜಕಾರಣ ದುರಂಧರರ ಬಗೆಗೂ ಸಂಶೋಧನಾತ್ಮಕ ಪ್ರಬಂಧಗಳು ಮೂಡಿ ಬರಬೇಕಾಗಿದೆ.

೫. ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳನ್ನು ಕುರಿತು ಅಧ್ಯಯನವು ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆದಿದೆ. ಕೆಳದಿ ಅರಸರು, ಪ್ರೌಢದೇವರಾಯ, ಸಿರಸಂಗಿ ಸಂಸ್ಥಾನ, ಸ್ವಾದಿ ಅರಸು ಮನೆತನ, ಹಾಗಲವಾಡಿ ಪಾಳೆಯಗಾರರು ಹೀಗೆ ಕೆಲವು ಅರಸುಮನೆತನಗಳನ್ನು ಕುರಿತು ಸಂಶೋಧನೆ ಪ್ರಬಂಧಗಳು ರಚಿಸಲ್ಪಟ್ಟಿವೆ. ಕರ್ನಾಟಕವನ್ನು ಸಮರ್ಥ ರೀತಿಯಿಂದ ಆಳಿದ ಅನೇಕ

ವೀರಶೈವ ಅರಸುಮನೆತನಗಳ, ಪಾಳೆಗಾರರ, ಸಾಮಂತರ, ದೇಸಾಯಿ ದೇಶಮುಖರ ಐತಿಹಾಸಿಕ ಚರಿತ್ರೆಗಳು ಇನ್ನೂ ಬರೆಯಲ್ಪಡಬೇಕಾಗಿದೆ. ಈ ನಿಟ್ಟಿನಲ್ಲಿ ಸಂಶೋಧಕರು ಹೆಚ್ಚಿನ ಗಮನವನ್ನು ಈಯುವುದು ಅವಶ್ಯ.

೬. ಮೇಲಿನ ಪಟ್ಟಿಯಿಂದ ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿಗಳೊಡನೆ ತುಲನೆ ಮಾಡಿ ವಿವೇಚಿಸಿದ ಪ್ರಬಂಧಗಳು ಮಂಡಿಸಲ್ಪಟ್ಟಿವೆ. ಶರಣ ಸಾಹಿತ್ಯ–ದಾಸ ಸಾಹಿತ್ಯ, ಮಹಾದೇವಿಯಕ್ಕ–ಕಾರಿಕಾಲಮ್ಮೆ; ಸರ್ವಜ್ಞ–ಕಬೀರ; ಬಸವೇಶ್ವರ–ಪುರಂದರದಾಸ; ಬಸವ–ಬುದ್ಧ; ಬಸವಣ್ಣ–ಕಾರ್ಲಮಾರ್ಕ್ಸ್; ಸೂಫಿಪಂಥ–ಶರಣಪಂಥ ಮುಂತಾದ ಮಹತ್ವಪೂರ್ಣ ತೌಲನಿಕ ಪ್ರಬಂಧಗಳು ಮೂಡಿಬಂದಿವೆ.

೭. ವೀರಶೈವ ಮಹಿಳೆಯರ ಮೇಲೆ, ವಚನ ಸಾಹಿತ್ಯ, ಶೂನ್ಯ ಸಂಪಾದನೆಗಳ ಮೇಲೆ ಪ್ರಬಂಧಗಳು ಬರೆಯಲ್ಪಟ್ಟಿವೆ. ಈ ದಿಶೆಯಲ್ಲಿ ಇನ್ನೂ ಆಗಬೇಕಾದ ಸಂಶೋಧನೆ ಬೆಟ್ಟದಷ್ಟಿದೆ.

೮. ಮೇಲೆ ಕಾಣಿಸಿದ ೧೦೬ ಪಿಎಚ್.ಡಿ. ಪ್ರಬಂಧಗಳಲ್ಲಿ ಸುಮಾರು ೫೦ ರಷ್ಟು ಪ್ರಬಂಧಗಳು ಪ್ರಕಟವಾಗಿವೆ ಎಂಬುದು ನಮ್ಮ ಊಹೆ. ಬೆಳಗಾವಿ ಲಿಂಗಾಯತ ಸಂಶೋಧನಾ ಕೇಂದ್ರ ಗ್ರಂಥಾಲಯದಲ್ಲಿ ಹೀಗೆ ಪ್ರಕಟವಾದ ೪೫ ಪ್ರಬಂಧಗಳು ಲಭ್ಯವಿವೆ. ಉಳಿದ ೬೦ ಪ್ರಬಂಧಗಳು ಸಾರಾಂಶ ರೂಪದಲ್ಲಾದರೂ ಪ್ರಕಟವಾಗಬೇಕಾದುದರ ಅವಶ್ಯಕತೆ ಇದೆ. ಈ ಕಾರ್ಯವನ್ನು ವೀರಶೈವ ಮಠಗಳು, ಸಂಸ್ಥೆಗಳು ಆದ್ಯತೆಯ ಮೇರೆಗೆ ಪ್ರಕಟಿಸಬೇಕೆಂಬ ಕಳಕಳಿಯ ಸೂಚನೆ ನಮ್ಮದಾಗಿದೆ. ಮೇಲಿನ ಪಿಎಚ್.ಡಿ. ಪ್ರಬಂಧಗಳನ್ನು ಬರೆದವರಲ್ಲಿ ವೀರಶೈವರು, ವೀರಶೈವೇತರರೂ ಒಳಗೊಂಡಿರುವರೆಂಬುದು ಗಮನಾರ್ಹ ಸಂಗತಿ.

೯. ಕನ್ನಡದಲ್ಲಿ ವೀರಶೈವ/ಲಿಂಗಾಯತ ಸಾಹಿತ್ಯವನ್ನು ಕುರಿತು ಆದ ಸಂಶೋಧನೆಯು ಮುಂಬರುವ ಸಂಶೋಧಕರಿಗೆ ಮಾರ್ಗದರ್ಶನ ನೀಡುವುದೆಂಬ ಭರವಸೆ ನಮಗಿದೆ. ಈ ಸಂಶೋಧನಾ ಪ್ರಬಂಧಗಳು ಸಂಶೋಧನೆಯ ಬೇರುಗಳೆಂದು ತಿಳಿದರೆ ಮುಂಬರುವ ಸಂಶೋಧನಾ ಪ್ರಬಂಧಗಳು ಹೊಸ ಚಿಗುರೆಲೆಗಳಾಗಿ ಪಲ್ಲವಿಸುವವೆಂಬ ನಂಬಿಗೆ ನಮಗಿದೆ.

ನಮ್ಮ ಗಮನಕ್ಕೆ ಬಾರದ ಇನ್ನೂ ಹಲವಾರು ಜನ ಸಂಶೋಧಕರ ಪಿಎಚ್.ಡಿ. ಪ್ರಬಂಧಗಳು ಇರುವ ಸಾಧ್ಯತೆ ಇದೆ. ನಮ್ಮ ಶಕ್ತಿಮೀರಿ ಈ ಸಂಗ್ರಹ ಕಾರ್ಯವನ್ನು ಮಾಡಿದ್ದೇವೆ. ಈ ಕಾರ್ಯ ಮುಂದುವರಿಯಬೇಕೆಂಬುದು ನಮ್ಮ ಬಯಕೆ.



**ಪಟ್ಟಿ ೨**

**ಲಿಂಗಾಯತ/ವೀರಶೈವ**

**ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮಾಡಿದ ಸಂಶೋಧಕರ ಸಂಖ್ಯೆ ಕೆಳಗಿನಂತಿದೆ**

| ಕ್ರಮ ಸಂಖ್ಯೆ | ವಿಶ್ವವಿದ್ಯಾಲಯ | ಸಂಶೋಧಕರ ಸಂಖ್ಯೆ | ಪ್ರಥಮ ಪಿಎಚ್.ಡಿ. ವರುಷ |
|---|---|---|---|
| ೧ | ಕರ್ನಾಟಕ (ಧಾರವಾಡ) | ೫೬ | ೧೯೫೫ |
| ೨ | ಉಸ್ಮಾನಿಯಾ (ಹೈದ್ರಾಬಾದ್) | ೧ | ೧೯೬೪ |
| ೩ | ಮೈಸೂರು | ೬ | ೧೯೬೫ |
| ೪ | ದೆಹಲಿ | ೧ | ೧೯೬೯ |
| ೫ | ಬೆಂಗಳೂರು | ೧೪ | ೧೯೮೦ |
| ೬ | ಗುಲಬರ್ಗಾ | ೨೦ | ೧೯೮೨ |
| ೭ | ಮಂಗಳೂರು | ೩ | ೧೯೮೯ |
| ೮ | ಶಿವಾಜಿ (ಕೊಲ್ಹಾಪುರ) | ೧ | ೧೯೯೨ |
| ೯ | ಕಾಮರಾಜ (ಮದುರೈ) | ೧ | ೧೯೯೩ |
| ೧೦ | ಕನ್ನಡ (ಹಂಪಿ) | ೧ | ೧೯೯೬ |
| ೧೧ | ಕುವೆಂಪು (ಶಿವಮೊಗ್ಗ) | ೧ | ೧೯೯೬ |
| ೧೨ | ಮದ್ರಾಸ್ | ೧ | ೧೯೯೬ |
| | ಒಟ್ಟು | ೧೦೬ | |

ಪ್ರಾರಂಭದಲ್ಲಿ ನಾವು ನಮೂದಿಸಿದ ಪಿಎಚ್.ಡಿ. ಪ್ರಬಂಧಗಳ ಕಾಲಾನುಕ್ರಮ ಸೂಚಿಯನ್ನು ಕೊಟ್ಟಿದ್ದೇವಷ್ಟೇ. ಅದನ್ನು ವಿಶ್ಲೇಷಿಸಿ ಮೇಲಿನ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸ್ವೀಕರಿಸಲ್ಪಟ್ಟ ಮಹಾಪ್ರಬಂಧಗಳ ಅಂಕಿ–ಸಂಖ್ಯೆಗಳನ್ನು ನಮೂದಿಸಿದ್ದೇವೆ.

ಮೇಲಿನ ವಿಶ್ಲೇಷಣೆಯಿಂದ ತಿಳಿದುಬರುವುದೇನೆಂದರೆ ವೀರಶೈವ ವಾಙ್ಮಯದಲ್ಲಿ ಸಂಶೋಧನೆ ಪ್ರಾರಂಭವಾಗಿ ಹೆಚ್ಚಿನ ಪ್ರಗತಿಯನ್ನು ಪಡೆದದ್ದು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ. ಗುಲಬರ್ಗಾ ವಿಶ್ವವಿದ್ಯಾಲಯ ದ್ವಿತೀಯ ಸ್ಥಾನ ಪಡೆದರೆ ಬೆಂಗಳೂರು ವಿಶ್ವವಿದ್ಯಾಲಯ ತೃತೀಯ ಸ್ಥಾನ ಪಡೆದಿವೆ. ಅತ್ಯಂತ ಹಳೆಯದಾದ ಮೈಸೂರು ವಿಶ್ವವಿದ್ಯಾಲಯ ಚತುರ್ಥ ಸ್ಥಾನದಲ್ಲಿದೆ. ಮಂಗಳೂರು ವಿಶ್ವವಿದ್ಯಾಲಯ ಐದನೆಯ ಸ್ಥಾನ ಗಳಿಸಿದೆ. ಉಳಿದೆಲ್ಲ ವಿಶ್ವವಿದ್ಯಾಲಯಗಳು ತಲಾ ಒಂದೊಂದರಂತೆ ಪಿಎಚ್.ಡಿ. ಪ್ರಬಂಧಗಳನ್ನು ಸ್ವೀಕರಿಸಿ ಆರನೆಯ ಸ್ಥಾನದಲ್ಲಿ ಒಟ್ಟಾಗಿ ನಿಲ್ಲುತ್ತಿವೆ.

□

# ವಚನ ಸಾಹಿತ್ಯದಲ್ಲಿ ಆರ್ಥಿಕ ಮೌಲ್ಯಗಳು

**ಕೊತ್ತಲವಾಡಿ ಶಿವಕುಮಾರ್**

ಜಗತ್ತು ಕಂಡ ಸಮಾಜ ಸುಧಾರಣೆಯ ಆಂದೋಲನಗಳಲ್ಲಿ ಹನ್ನೆರಡನೆಯ ಶತಮಾನದ ಕಲ್ಯಾಣದ ಕ್ರಾಂತಿ ಐತಿಹಾಸಿಕ ಮಹತ್ವದ ಕಾಲಘಟ್ಟ. ಮಾನವ ಬದುಕಿನ ಸಮಸ್ತ ಸ್ತರಗಳನ್ನು ಶುದ್ಧೀಕರಣಗೊಳಿಸಿ ಅಂತರಂಗದಲ್ಲಿ ಮಹತ್ತನ್ನು ದರ್ಶಿಸಲು ದಾರಿದೀವಿಗೆಯಾದ ಶರಣರ ಬದುಕು ಮತ್ತು ವಿಚಾರಧಾರೆಗಳು ಕಾಲಾತೀತ. ಕಲ್ಯಾಣದಲ್ಲಿ ಒಂದು ಮಹತ್ತರವಾದ ಸಮಾಜೋಧಾರ್ಮಿಕ, ಸಾಹಿತ್ಯಿಕ, ರಾಜಕೀಯ, ಆರ್ಥಿಕ ಕ್ರಾಂತಿಗೆ ಕಾರಣರಾದ ಬಸವಾದಿ ಶರಣರು ನುಡಿದಂತೆ ನಡೆದು ಆಚಾರ ವಿಚಾರಗಳೆರಡನ್ನು ಅನುಸಂಧಾನಗೊಳಿಸಿಕೊಂಡು ಒಳ-ಹೊರಗನ್ನು ಸಮನ್ವಿತಗೊಳಿಸಿ, ಲೋಕವ್ಯವಹಾರದಿಂದ ಆಧ್ಯಾತ್ಮಿಕ ಸ್ತರಕ್ಕೆ ಕೊಂಡೊಯ್ಯುವ ವಿಚಾರಧಾರೆಯನ್ನು ತಮ್ಮ ವಚನ ಸಾಹಿತ್ಯದ ಮೂಲಕ ನೀಡಿದ ಅನುಭಾವಿಗಳು. ಇವರ ವಚನಗಳಲ್ಲಿ ಅಭಿವ್ಯಕ್ತವಾಗಿರುವ ವಿಚಾರಗಳು ಸಂಪೂರ್ಣವಾಗಿ ಜೀವನನಿಷ್ಠವಾಗಿದ್ದು ಅವರ ಕಾಯಕ-ದಾಸೋಹ ಪರಿಕಲ್ಪನೆ ಇಂದಿನ ಆಧುನಿಕ ಆರ್ಥಿಕ ವ್ಯವಸ್ಥೆಯ ಅನೇಕ ಜ್ವಲಂತ ಸಮಸ್ಯೆಗಳಿಗೆ ನೈತಿಕ, ಪ್ರಾಯೋಗಿಕ, ಸೈದ್ಧಾಂತಿಕ ನೆಲೆಗಳಲ್ಲಿ ಪರಿಹಾರ ಒದಗಿಸಬಲ್ಲದು.

ಮಾನವ ಪ್ರೀತಿಯ ಪ್ರತೀಕವಾದ, ಮನುಷ್ಯ ಬದುಕಿಗೆ ಒತ್ತಾಸೆಯಾಗಿರುವ 'ಅಯ್ಯಾ' ಎನ್ನುವ ವಿನೀತ, ಮಧುರ ಭಾವದ "ಇವನಮ್ಮವ"ನೆಂಬ ನಂಬಿಕೆಯಿರುವ, ಭಕ್ತಿಯನ್ನು ನಿಷ್ಠೆಯೆಂಬ ನೀರೆರೆದು ಪೋಷಿಸಿ ಬೆಳೆಸಿದ ಬಸವಣ್ಣನವರು ಚಾಲುಕ್ಯ ರಾಜ್ಯದ ಮಂತ್ರಿಗಳಾಗಿ ತಮ್ಮ ದಕ್ಷ, ಪ್ರಾಮಾಣಿಕ, ಕ್ರಿಯಾಶೀಲ ಕಾರ್ಯಚಟುವಟಿಕೆಗಳಿಂದ ಮತ್ತು ಪ್ರಯೋಗಶೀಲ ಆರ್ಥಿಕ ಸುಧಾರಣಾ ಸೂತ್ರಗಳನ್ನು ಚಾಲ್ತಿಗೆ ತರುವುದರ ಮೂಲಕ ರಾಜ್ಯದ ಬೊಕ್ಕಸವನ್ನು ಸಮೃದ್ಧಗೊಳಿಸಿದ್ದರು ಎಂಬುದಕ್ಕೆ "ಬಸವ ಕಲ್ಯಾಣದಲ್ಲಿ ಬೇಡುವವರಿರಲಿಲ್ಲ, ಕೊಡುವ ಕೈಗಳೆ ಹೆಚ್ಚಾಗಿದ್ದವು" ಎಂಬ ಮಾತುಗಳು ಸಾಕ್ಷೀಕರಿಸುತ್ತವೆ.

ಶರಣರ 'ಕಾಯಕವೆ ಕೈಲಾಸ' (Work is Worship) ಎಂಬ ಪರಿಕಲ್ಪನೆಯ ಹಿಂದೆ ಒಂದು ಆದರ್ಶಪ್ರಾಯವಾದ ಸಮಾನತೆಯ ಮೌಲ್ಯಗಳನ್ನೊಳಗೊಂಡ ಆರ್ಥಿಕ ಸ್ವಾವಲಂಬನೆಯ ಆಶಯವಿದೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಯಾವುದಾದರೊಂದು ಕೆಲಸವನ್ನು ಮಾಡಲೇಬೇಕು. ಯಾರೊಬ್ಬರಿಗು ಹೊರೆಯಾಗಬಾರದು. ಮತ್ತೊಬ್ಬರ ದುಡಿಮೆಯಿಂದ ಕುಳಿತು ತಿನ್ನುವ ಹೊಣೆಗೇಡಿಗಳಾಗಬಾರದು. ವ್ಯಕ್ತಿ ತಾನು ಕೈಗೊಳ್ಳುವ ವೃತ್ತಿಯಿಂದ ತನ್ನ ಆತ್ಮಾಭಿಮಾನವನ್ನು ಹೆಚ್ಚಿಸಿ, ಸಮಾಜಕ್ಕು ಉಪಕಾರವಾಗುವಂತಿರಬೇಕು.



ವ್ಯಕ್ತಿ ತಾನು ಕೈಗೊಳ್ಳುವ ವೃತ್ತಿಯಿಂದ ಮೇಲು-ಕೀಳೆಂಬ ತಾರತಮ್ಯದ ಭಾವನೆಯಿರದೆ ಅವನ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರಬೇಕೆಂಬ ಶ್ರೇಷ್ಠ ಚಿಂತನೆಯನ್ನು ಹೊಂದಿದ್ದ ಬಸವಾದಿ ಶರಣರು ಕಾಯಕವೇ ಕೈಲಾಸವೆಂಬುದನ್ನು ಅನುಷ್ಠಾನಗೊಳಿಸುವುದರ ಮೂಲಕ ಆರ್ಥಿಕ ಚಳುವಳಿಗೆ ಕಾರಣವಾಗುವುದರ ಜೊತೆಗೆ ಆರ್ಥಿಕ ಸಮಾನತೆ ಮತ್ತು ಸಮಾಜದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸಲು ಪ್ರಯತ್ನಿಸಿದರು.

> ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ
> ಆವ ಪದಾರ್ಥವಾದಡೇನು? ತಾನಿದ್ದೆಡೆಗೆ ಬಂದುದ
> ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ
> ಕೂಡಲಸಂಗಮದೇವರನೊಲಿಸ ಬಂದ
> ಪ್ರಸಾದ ಕಾಯವ ಕೆಡಿಸಲಾಗದು.

ಮೇಲ್ನೋಟಕ್ಕೆ ಸರಳವಾಗಿ ಕಾಣುವ ಈ ವಚನದಲ್ಲಿ ಆಂತರ್ಯದಲ್ಲಿ ಮನುಷ್ಯ ಸಹಜ ಬಯಕೆಗಳ ತುಡಿತವನ್ನು ಅತಿಯಾಗಿಸದೆ ತಡೆಗಟ್ಟಬೇಕೆನ್ನುವ ಆಚರಣೆಗೆ ಸಾಧ್ಯವಾದ ಸಂದೇಶವಿದೆ. ಮಾನವ ಬಯಕೆಗಳ ಆಗರ; ಅವುಗಳಿಗೆ ಮಿತಿ ಎಂಬುದೆ ಇಲ್ಲ. ಆದ್ದರಿಂದಲೆ ಅಗಣಿತ ಬಯಕೆಗಳ ತೃಪ್ತಿಗಾಗಿ ಮಾನವ ದುಡಿಯಬೇಕು. ಏಕೆಂದರೆ ಮಾನವನ ಅತೀವ ಬಯಕೆಗಳನ್ನು ತೃಪ್ತಿಪಡಿಸುವ ಸಾಧನಸಂಪನ್ಮೂಲಗಳು ವಿರಳವಾಗಿವೆ. ದುಡಿತದಿಂದ ಬರುವ ಪ್ರತಿಫಲದಿಂದ ತೃಪ್ತಿ ಹೊಂದಬೇಕು. ಈ ನಿರಂತರ ಆರ್ಥಿಕ ಚಟುವಟಿಕೆಗಳಲ್ಲಿ ತನ್ನ ಅತೀವ ಬಯಕೆಗಳ ತೃಪ್ತಿಗಾಗಿ ಪರದಾಡುತ್ತ, ಐಹಿಕ ಜೀವನವನ್ನು ನರಕವಾಗಿಸಿಕೊಳ್ಳದೆ, ಭೌತಿಕವಸ್ತುಗಳಿಂದ ಸಿಗುವ ತೃಪ್ತಿಗಾಗಿ ಹಂಬಲಿಸುತ್ತ ಬಯಕೆಗಳ ವಿಷಚಕ್ರದೊಳಗೆ ಸಿಲುಕಿಕೊಳ್ಳದೆ ಉಕ್ಕಿ ಬರುವ ಆಸೆಗಳಿಗೆ ಕಡಿವಾಣ ಹಾಕಬೇಕು. ಬೇಕು ಎನ್ನುವುದು ತನುಗುಣವಾದರು, ಆದು ಬೇಕು, ಇದು ಬೇಕು, ಎನ್ನುವ ಮನಬೇಗುದಿ ಸಲ್ಲದು, ತನುವಿನಾಸೆಯನ್ನು ಮನದಿ ನಿಯಂತ್ರಿಸಬೇಕು ಎಂದಿದ್ದಾರೆ ಬಸವಣ್ಣ.

'ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ' ಎಂಬುದರ ತಾತ್ಪರ್ಯ ತನ್ನ ದುಡಿಮೆಯಿಂದ ಬಂದ ಫಲವನ್ನು ತಾನೊಬ್ಬನೆ ಅನುಭವಿಸದೆ ಪರರಿಗು ಹಂಚಬೇಕು, ನೈತಿಕ ನೆಲೆಯಲ್ಲಿ ಧಾರ್ಮಿಕ ಮೌಲ್ಯಾಧರಿತವಾಗಿರುವ ಯಾವುದೇ ಸುಖ ಸಂತೋಷ ಭೋಗ ತ್ಯಾಜ್ಯವಲ್ಲ. 'ಲಿಂಗಾರ್ಪಣೆ'ಯೆಂಬ ಬಸವಣ್ಣನವರ ಮಾತುಗಳಲ್ಲಿ ಆಧ್ಯಾತ್ಮಿಕ ದೃಷ್ಟಿಕೋನವಿದ್ದರು, ಲೌಕಿಕ ಬದುಕಿನಲ್ಲಿ ಮನುಷ್ಯ ತನ್ನ ಅತಿಯಾದ ಬಯಕೆಗಳ ತೃಪ್ತಿಗಾಗಿ ಹೆಚ್ಚು ಹೆಚ್ಚು ಸಂಗ್ರಹಿಸಿಟ್ಟುಕೊಳ್ಳುವುದರಿಂದ ಆರ್ಥಿಕ ಅಸಮಾನತೆಗೆ ಕಾರಣವಾಗುತ್ತದೆ. ಆದ್ದರಿಂದ ಸಮಾಜದ ಸುಸ್ಥಿರತೆಗಾಗಿ ಸಂಪತ್ತು ಸಮಾನ ಹಂಚಿಕೆಯಾಗಬೇಕು ಎಂಬುದನ್ನು ಈ ವಚನ ಸಾರಿ ಹೇಳುತ್ತದೆ. ಇದನ್ನೆ ಆಧುನಿಕ ಅರ್ಥಶಾಸ್ತ್ರದಲ್ಲಿ 'ಸುಸ್ಥಿರ ಅಭಿವೃದ್ಧಿ, ಅವಿಶ್ರಾಂತ ಅಭಿವೃದ್ಧಿ' ಅಥವ ತಾಳಿಕೆಯ ಅಭಿವೃದ್ಧಿ (Sustainable development) ಎಂದು ಕರೆಯಲಾಗುತ್ತದೆ. ಅಂದರೆ "ಮುಂದಿನ ಪೀಳಿಗೆಯ

ಅಗತ್ಯಗಳನ್ನು ಕಡೆಗಣಿಸದೆ ಇಂದಿನ ಪೀಳಿಗೆಯ ಅಗತ್ಯಗಳನ್ನು ಪೂರೈಸುವುದು." ಸುದೀರ್ಘ ಕಾಲ ಅಸ್ತಿತ್ವದಲ್ಲಿರುವ, ನೈಸರ್ಗಿಕ ಸಂಪನ್ಮೂಲಗಳ ತಳಪಾಯವು ಕೆಡಲು ಅವಕಾಶ ನೀಡದಿರುವ, ಸದಾ ಮುಂದುವರಿಯುವ, ಅಭಿವೃದ್ಧಿ ಪ್ರಕ್ರಿಯೆಯನ್ನು ಇದು ವಿವರಿಸುತ್ತದೆ.

ಮಾನವ ತನ್ನ ಬದುಕಿನಲ್ಲಿ ಭೋಗಜೀವನಕ್ಕಾಗಿ ಹಂಬಲಿಸುತ್ತ ಭೌತಿಕ ವಸ್ತುಗಳಿಂದ ಸಿಗುವ ಕ್ಷಣಿಕ ಸುಖಕ್ಕಾಗಿ ಹೇಗೆ ಚಡಪಡಿಸುತ್ತಾನೆ. ಅಕ್ಕಮಹಾದೇವಿಯವರ ಈ ವಚನದಲ್ಲಿ ಇದನ್ನು ಬಹಳ ಸೊಗಸಾಗಿ ಬಣ್ಣಿಸಲಾಗಿದೆ.

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ
ತಮ್ಮೊಳಗಿದ್ದ ಮಹಾಘನವನರಿಯರು
ಚನ್ನಮಲ್ಲಿಕಾರ್ಜುನದೇವಾ.

ಲೌಕಿಕ ಜೀವನದಲ್ಲಿ ಭೋಗಕ್ಕೂ ಒಂದು ಮಿತಿ ಇದೆ. ಮನುಷ್ಯನು ಸಾಮಾಜಿಕ ಪ್ರತಿಷ್ಠೆ, ಪ್ರದರ್ಶನದ ಚಪಲಗಳಿಂದ ಭೌತಿಕ ವಸ್ತುಗಳಿಂದ ಸಿಗುವ, ಸುಖಕ್ಕಾಗಿ ಐಶಾರಾಮಿ ಜೀವನ ನಡೆಸಲು ಸಿಗುವ ಎಲ್ಲವನ್ನು ಕಬಳಿಸಲು ಹವಣಿಸುತ್ತಾನೆ. ಹಾಗೆಯೇ ಸಂಪತ್ತಿನ ಸಂಗ್ರಹದಲ್ಲಿ ತೊಡಗುತ್ತಾನೆ. ಅದಕ್ಕೋಸ್ಕರ ತನ್ನೆಲ್ಲ ಜೀವಿತವನ್ನು ವ್ಯರ್ಥವಾಗಿ ಕಳೆಯುತ್ತಾನೆ. ಅಂತರಂಗದಲ್ಲಿ ಅರಿವಿನಿಂದ ಮಹತ್ತನ್ನು ದರ್ಶಿಸಲು ಇರುವ ಅವಕಾಶ ಕಾಲನ ವಶವಾಗಿ ಪ್ರಾಣಪಕ್ಷಿ ದೇಹ ಬಿಟ್ಟು ಹಾರಿಹೋಗುತ್ತದೆ. ಆದ್ದರಿಂದಲೆ ಕ್ಷಣಭಂಗುರವಾದ ಭೌತಿಕ ಸುಖದ ಆಶಾಪಾಶದಲ್ಲಿ ಬೀಳದೆ ತನಗೆ ಕಾಣುವುದೆಲ್ಲವು ಬೇಕು ಎಂದು ತಹತಹಿಸುವ ಮನಕ್ಕೆ ಕಡಿವಾಣ ಹಾಕಿ ಅಂತರಂಗ ಶುದ್ಧಿಗೊಳಿಸಿಕೊಳ್ಳುವುದರ ಮೂಲಕ ಬದುಕಿನಲ್ಲಿ ಪರಮ ತೃಪ್ತಿ ಪಡೆಯಬೇಕು ಎಂದು 'ಅಕ್ಕ' ಬಯಸುತ್ತಾರೆ.

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ರಾಷ್ಟ್ರೀಯ ವರಮಾನ ಹೆಚ್ಚಾಗುತ್ತಿದ್ದರು, ಬಂಡವಾಳಶಾಹಿ ಧೋರಣೆಯಿಂದ, ಸಂಪತ್ತಿನ ಕೇಂದ್ರೀಕರಣದ ಪರಿಣಾಮ ಕೆಲವೆ ಜನರ ಹಿಡಿತದಲ್ಲಿರುವ ಸಂಪನ್ಮೂಲಗಳ ಅಸಮಾನ ಹಂಚಿಕೆಯಿಂದಾಗಿ, ಆರ್ಥಿಕ ಅಸಮಾನತೆಗೆ ಕಾರಣವಾಗಿದೆ. ಇದರಿಂದ ಬಹುಸಂಖ್ಯಾತರ ಬಡತನ, ಶೋಷಣೆ, ಅತಿಪ್ರಸರಣ, ಆರ್ಥಿಕ ಮುಗ್ಗಟ್ಟು, ತೀವ್ರ ಪೈಪೋಟಿ ಉಂಟಾಗಿ ಸಮಾಜದಲ್ಲಿ ಅಶಾಂತಿ, ದ್ವೇಷ, ಅಸೂಯೆ, ಕೊಲೆ, ಸುಲಿಗೆ, ಭಯೋತ್ಪಾದನೆಯಂತಹ ವಿಧ್ವಂಸಕ ಕೃತ್ಯಗಳು ದಿನೇದಿನೇ ಹೆಚ್ಚಾಗುತ್ತಿವೆ.

ಅಭಿವೃದ್ಧಿ ಹೊಂದಿದ ಅಮೇರಿಕಾ, ಇಂಗ್ಲೆಂಡ್, ಜರ್ಮನಿ, ಆಸ್ಟ್ರೇಲಿಯಾ ಇವೇ ಮುಂತಾದ ರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯಾಗಿದ್ದು, ಸಂಪತ್ತಿನ ಗಳಿಕೆ ಹೆಚ್ಚಾಗಿದ್ದರು ಜನರು ಭೌತಿಕ ಸರಕುಗಳ ಬೆನ್ನೇರಿ, ವಿಲಾಸಿಜೀವನಕ್ಕೆ ಮಾರುಹೋಗಿ ಸುಖಲೋಲುಪತೆಯಲ್ಲಿ ತೇಲುತ್ತ, ಸರಳ ಬದುಕು ತಂದುಕೊಡುವ, ಶಾಂತಿ, ನೆಮ್ಮದಿ, ಸಂತೋಷಗಳನ್ನು ಕಳೆದುಕೊಂಡು ಜನರ ಬದುಕಿನಲ್ಲಿ ಏಕತಾನತೆ, ಹತಾಶೆ, ಒಂಟಿತನ, ನಿರಾಶೆ ಮನೆಮಾಡಿ ಮಾನಸಿಕ



ಒತ್ತಡದಿಂದ ಬಳಲುತ್ತಿದ್ದಾರೆ.

ಆದ್ದರಿಂದಲೆ ಅಕ್ಕಮಹಾದೇವಿ ಈ ವಚನದಲ್ಲಿ ಕೇವಲ ಬಹಿರಂಗದ ಸಮೃದ್ಧತೆಯನ್ನು ನೆಚ್ಚಿಕೊಳ್ಳದೆ, ಅಂತರಂಗದ ಸಮೃದ್ಧತೆಯನ್ನು, ಬಹಿರಂಗದ ಸಮೃದ್ಧತೆಯನ್ನು ಸಮನ್ವಯಗೊಳಿಸಿಕೊಳ್ಳಬೇಕು. ವ್ಯಕ್ತಿ ವಿಕಾಸದ ಪ್ರಕ್ರಿಯೆಯನ್ನು ಸಕಲ ಜೀವಿಗಳ ವಿಕಾಸದ ಪ್ರಕ್ರಿಯೆಯನ್ನಾಗಿ ಪರಿವರ್ತಿಸಿ ಚೈತನ್ಯಸ್ವರೂಪಿ ಸಮಾಜದ ರಚನೆಗೆ ಮುಂದಾಗಬೇಕು. ಮಾನವರು ಅಂತಃಶಕ್ತಿಗೆ ಹೊಸ ಚೈತನ್ಯ ತುಂಬಿ ಒಳಗಿನ ಮಹಾಘನವನ್ನರಿತು, ಅರ್ಪಣಾಭಾವದಿಂದ ತೃಪ್ತಿ ನೆಮ್ಮದಿ ಕಾಣಬೇಕೆಂಬುದನ್ನು ತಿಳಿಸಿದ್ದಾರೆ.

ಆಸೆಗೆ ಸತ್ತುದು ಕೋಟಿ
ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು, ಹೆಣ್ಣು, ಮಣ್ಣಿಗೆ, ಸತ್ತುದು ಕೋಟಿ
ಗುಹೇಶ್ವರ, ನಿಮಗಾಗಿ ಸತ್ತವನಾರನೂ ಕಾಣೆ

ಪ್ರಭುದೇವರ ಈ ವಚನದಲ್ಲಿ ಸಾಮಾಜಿಕರ ಬದುಕಿನ ವಿಡಂಬನೆ ಇದ್ದರೂ ಆರ್ಥಿಕ ವಿಚಾರಗಳ ಒಳತೋಟಿಯ ಗಹನತೆ ನಮಗೆ ಅರಿವಾಗುತ್ತದೆ.

ಈಗ ವಿಶ್ವದ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಯ ನೀತಿ ಮಂತ್ರ, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಈ 'ತ್ರಿ'ಕರಣಗಳ ವಿಷ ವರ್ತುಲದೊಳಗೆ ಬಂಧಿಯಾಗಿರುವ ಈ ಸಂಕ್ರಮಣಕಾಲದಲ್ಲಿ ಈ ವಚನ ಪ್ರತಿಪಾದಿಸುವ ತತ್ವ ಮನನೀಯವಾದುದು. ಜಾಗತೀಕರಣದ ರೂಪುರೇಷಗಳು, ನೀತಿ, ನಿಯಮಗಳು ಜನರನ್ನು ಕೊಳ್ಳುಬಾಕ ಸಂಸ್ಕೃತಿಗೆ ಹೊರಳುವಂತೆ ಮಾಡಿದೆ. ಆಧುನಿಕತೆ ಮತ್ತು ವೈಜ್ಞಾನಿಕ ಬೆಳವಣಿಗೆಯ ಪರಿಣಾಮ ಆರ್ಥಿಕತೆಯ ನಾಗಾಲೋಟ ತೀವ್ರವಾಗುತ್ತಿದೆ. ಅಮೂಲ್ಯವಾದ ಪ್ರಾಕೃತಿಕ ಸಂಪನ್ಮೂಲಗಳು ಮಾನವನ ಹುಚ್ಚು ಬಯಕೆಗಳಿಗೆ, ಆಸೆ, ಆಮಿಷಗಳ ಈಡೇರಿಕೆಗಾಗಿ ಬರಿದಾಗುತ್ತಿವೆ.

ಸಂಪತ್ತಿನ ಸಂಗ್ರಹದ ದಾಹ ಹೆಚ್ಚಾಗುತ್ತಿರುವುದರಿಂದ, ನಾಗರೀಕ ಸಮಾಜದ ಸ್ವಾಸ್ಥ್ಯ ಕೆಡಿಸುವ, ಅನಾರೋಗ್ಯಕರ ಪೈಪೋಟಿಯ ಹೆಚ್ಚಳದಿಂದಾಗಿ, ಜಗತ್ತಿನ ರಾಷ್ಟ್ರಗಳಲ್ಲಿ ಆರ್ಥಿಕ ಅಂತರ ಹೆಚ್ಚಾಗುತ್ತಿದೆ. ಇದರಿಂದ ಎಲ್ಲೆಡೆ ಅಸಮಾನತೆ ವಿಜೃಂಭಿಸುವಂತಾಗಿದೆ. ಆರ್ಥಿಕ ಕಾರಣಕ್ಕಾಗಿ ಸಂಘರ್ಷಗಳು, ಯುದ್ಧಗಳು ನಡೆದು ಅಪಾರ ಸಾವು ನೋವುಗಳು ಸಂಭವಿಸುತ್ತಲೇ ಇವೆ.

ಆದ್ದರಿಂದಲೆ ಅಲ್ಲಮಪ್ರಭು ಈ ವಚನದಲ್ಲಿ ಆರ್ಥಿಕ ವಿಷಮತೆಯ ಕೋಟೆಯೊಳಗೆ ಹಮ್ಮುಬಿಮ್ಮಿನಲ್ಲಿ ಮೆರೆಯುವ ಮನುಷ್ಯ ಒಳಗನ್ನು ತಿದ್ದಿಕೊಳ್ಳದೆ ಸಮಚಿತ್ತಭಾವದಿಂದ ಮನವ ನಿಲಿಸದೆ ತನ್ನಂತರಾತ್ಮದ ದೈವತ್ವವನ್ನು ಕಾಣಲು ಪ್ರಯತ್ನಿಸದೆ, ಆಸೆ, ಆಮಿಷಗಳಿಗೆ ಬಲಿಯಾಗಿ, ಹೊನ್ನು ಮಣ್ಣಿಗಾಗಿ ಸಾಯುತ್ತಿದ್ದಾನೆ ಎಂದು ಅತ್ಯಂತ ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದ್ದಾರೆ.

ಹಾವಿನ ಬಾಯ ಕಪ್ಪೆ ಹಸಿದು
ಹಾರುವ ನೊಣಕ್ಕೆ ಆಸೆ ಮಾಡುವಂತೆ
ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು
ಮೇಲೇಸುಕಾಲ ಬದುಕುವನೊ?
ಕೆಡುವೊಡಲನಚ್ಚಿ, ಕಡು ಹುಸಿಯನೆ ಹುಸಿದು
ಒಡಲ ಹೊರೆವರ ಕೂಡಲಸಂಗಮದೇವಯ್ಯನೊಲ್ಲ, ಕಾಣಿರಣ್ಣಾ

ಕಾವ್ಯದ ದೃಷ್ಟಿಯಿಂದ ನೋಡಿದಾಗ ಬಸವಣ್ಣನವರ ಈ ವಚನ ಎರಡು ಸುಂದರ ಚಿತ್ರಗಳ ಮೂಲಕ ಐಹಿಕ ಆಸೆಯ ತೃಷೆಯೊಳಗೆ ಸಿಲುಕಿಕೊಂಡಿರುವ ಮನುಷ್ಯನ ಅಂತರಂಗವನ್ನು ಅತ್ಯಂತ ಮಾರ್ಮಿಕವಾಗಿ ನಿರೂಪಿಸುತ್ತದೆ.

ಜಾಗತೀಕರಣವೆಂಬ ಮಾರುಕಟ್ಟೆಯಾಧರಿತ ಮನೆಯ ಹೊಸ್ತಿಲು ದಾಟಿ ನಡುಮನೆಯಲ್ಲಿ ಬಂದು ನಿಂತಿರುವ ಇಂದಿನ ಜನತೆ ದೈಹಿಕ ಆಸೆಗಳ ದಾಸರಾಗುತ್ತಿರುವ, ಭೌತಿಕವಸ್ತುಗಳ ಸಿರಿವಂತಿಕೆಯ ಅಳತೆಗೋಲಾಗಿರುವ ಭೋಗಜೀವನವೆ ಆದರ್ಶವಾಗಿರುವ ಈ ದಿನಗಳಲ್ಲಿ ಈ ವಚನ ಹೆಚ್ಚು ಪ್ರಸ್ತುತವಾಗುತ್ತದೆ.

ಅಂತಾರಾಷ್ಟ್ರೀಯ ಆರ್ಥಿಕ ಸೂತ್ರಗಳು ಜಗತ್ತಿನ ರಾಷ್ಟ್ರಗಳನ್ನು ತುಂಬ ಹತ್ತಿರಕ್ಕೆ ಬರುವಂತೆ ಮಾಡಿವೆ. ಇಡೀ ವಿಶ್ವ ಇಂದು 'ಜಾಗತಿಕ ಹಳ್ಳಿ' (Global village)ಯಂತೆ ಪರಿಣಮಿಸಿದೆ. ಇದರಿಂದ ರಾಷ್ಟ್ರ-ರಾಷ್ಟ್ರಗಳ ನಡುವೆ ಆರ್ಥಿಕ ಅವಲಂಬನೆ ಹೆಚ್ಚಾಗಿದೆ. ಇದು ಅಭಿವೃದ್ಧಿಗೆ ಪೂರಕವಾಗಿದ್ದರು ಸಹ, ಸ್ವಾರ್ಥಪರವಾದ ಲೋಭತನದಿಂದ ಕೂಡಿದ ನಿಲುವುಗಳಿಂದ, ಅನಗತ್ಯ ಪೈಪೋಟಿ ಹೆಚ್ಚಾಗಿ ಕೆಟ್ಟ ಸ್ಪರ್ಧೆ ತೀವ್ರವಾಗಿ ಜಾಗತಿಕ ಆರ್ಥಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಮೇಲ್ನೋಟಕ್ಕೆ ದೇಶ-ದೇಶಗಳು, ಹತ್ತಿರವಾದಂತಿದ್ದರು, ಆಂತರಿಕವಾಗಿ ದೊಡ್ಡ ಕಂದರವೆ ನಿರ್ಮಾಣವಾಗಿದೆ. ಉದಾಹರಣೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿನ ಆರ್ಥಿಕ ನಿಯಮಗಳನ್ನು ಕೆಲವು ಬಲಾಢ್ಯ ರಾಷ್ಟ್ರಗಳು ತಮಗೆ ಅನುಕೂಲವಾಗುವಂತೆ ಮಾಡಿಕೊಂಡು ಅವುಗಳನ್ನು ಬಲಹೀನ ರಾಷ್ಟ್ರಗಳ ಮೇಲೆ ಒತ್ತಾಯ ಪೂರ್ವಕವಾಗಿ ಹೇರುವ ಮೂಲಕ ವಿಶ್ವದ ರಾಷ್ಟ್ರಗಳಲ್ಲಿನ, ಅಪಾರ ನೈಸರ್ಗಿಕ ಸಂಪತ್ತು ಮತ್ತು ಮಾನವ ಸಂಪನ್ಮೂಲದ ಮೇಲೆ ಹಿಡಿತ ಸಾಧಿಸುತ್ತಿವೆ. ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರವನ್ನು ಸದೆಬಡಿಯುವ ಈ ದುಷ್ಕೃತ್ಯದಲ್ಲಿ ಆರ್ಥಿಕ ಬಲ ಮತ್ತು ತೋಳ್ಬಲವೆ ಮುಖ್ಯವಾಗುತ್ತಿದೆ.

'ವಿಶ್ವ ವ್ಯಾಪಾರ ಸಂಘಟನೆ' (WTO) - (World Trade Organisation), ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) - (International Monetary Fund), ವಿಶ್ವ ಬ್ಯಾಂಕ್ (IBRD) - (International Bank for Reconstruction and Development) ಇವೆ ಮೊದಲಾದ ಅಂತರಾಷ್ಟ್ರೀಯ ಆರ್ಥಿಕ, ಸಂಘ ಸಂಸ್ಥೆಗಳು, ಅಭಿವೃದ್ಧಿ ಸಾಧಿಸಿದ ರಾಷ್ಟ್ರಗಳ ಹಿಡಿತದಲ್ಲಿ ಕೆಲಸ ನಿರ್ವಹಿಸುವ ಅನಿವಾರ್ಯ ಪರಿಸ್ಥಿತಿಯಲ್ಲಿವೆ. ಜಾಗತೀಕರಣದ



ಕಬಂಧ ಬಾಹುವಿನಲ್ಲಿ ಬಂಧಿಸಲ್ಪಟ್ಟಿರುವ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳು ಮತ್ತು ಹಿಂದುಳಿದ ತೃತೀಯ ಜಗತ್ತಿನ ರಾಷ್ಟ್ರಗಳು ಮುಂದುವರಿದ ರಾಷ್ಟ್ರಗಳ ಆಣತಿಯಂತೆ ಆರ್ಥಿಕ ಧೋರಣೆಗಳನ್ನು ರೂಪಿಸಿ ಅನುಸರಿಸಬೇಕಾದ ದುಸ್ಥಿತಿ ನಿರ್ಮಾಣವಾಗಿದೆ.

ಇಂತಹ ವಿಷಮಸ್ಥಿತಿಯನ್ನೆ ಬಸವಣ್ಣನವರು ಅಶಾಶ್ವತವಾದ, ನಶ್ವರವಾದ ಈ ಜೀವನದಲ್ಲಿ, ಅತಿಯಾಸೆಯ ವಿಷವೃತ್ತದೊಳಗೆ ಸಿಲುಕಿ ಒಬ್ಬರ ಮೇಲೊಬ್ಬರು ಪೈಪೋಟಿಗೆ ಬಿದ್ದು ಒದ್ದಾಡುವ ಮಾನವರ ಹೀನ ಬಾಳನ್ನು ಕಂಡು ಕುಹಕವಾಡಿದ್ದಾರೆ. ಹಾವಿನ ಬಾಯೊಳಗಿರುವ ಕಪ್ಪೆ ತಾನು ಸಾಯುವುದನ್ನು ಕಾಣದೆ ನೊಣಕ್ಕೆ ಆಸೆಪಡುತ್ತದೆ. ಕಪ್ಪೆಯನ್ನಿಡಿದಿರುವ ಹಾವಿಗಾದರು ಜೀವನ ಶಾಶ್ವತವೆ? ನೇಣುಗಂಬಕ್ಕೇರುವ ಕಳ್ಳನು ಸಾವು ಅವನ ಕಣ್ಮುಂದೆ ಇದ್ದರು ಹಾಲು, ತುಪ್ಪವ ಕುಡಿಯಲು ಆಸೆಪಡುವುದು ಅದೆಷ್ಟು ಕ್ಷಣಿಕ! ಇವೆರಡು ಸಮರ್ಥ ಉಪಮೆಗಳನ್ನು ಬಸವಣ್ಣನವರು ಕಟ್ಟಿಕೊಡುವುದರ ಮೂಲಕ ಮನುಷ್ಯನ ಅಂತರಂಗದ ಶೋಧನೆ ನಡೆಸಿದ್ದಾರೆ.

ಮೋಸ ವಂಚನೆ ಮಾಡಿ, ಸುಳ್ಳು ಹೇಳಿ, ದೇಶದ ಆರ್ಥಿಕ ವ್ಯವಸ್ಥೆಯನ್ನೆ ಬುಡಮೇಲು ಮಾಡಿ, ದಶಕಗಳ ಕಾಲ ಮೆರೆದು ಮರೆಯಾದ, ಷೇರು ಹಗರಣದ ರೂವಾರಿ ಹರ್ಷದ್‌ಮೆಹ್ತಾ, ಸತ್ಯಂ ಕಂಪ್ಯೂಟರ್ ಕಂಪನಿಯ ರಾಮಲಿಂಗರಾಜುರಂತವರು ಪ್ರಪಂಚದಲ್ಲಿ ಸಾವಿರಾರು ಜನರಿದ್ದಾರೆ. ಇಂತಹವರನ್ನು ಕುರಿತೆ ಬಸವಣ್ಣನವರು 'ಕೆಡುವ ಒಡಲನ್ನು ನೆಚ್ಚಿಕೊಂಡು ಸುಳ್ಳು ಹೇಳಿ ಹೊಟ್ಟೆಹೊರೆಯುವವರು' ಎಂದು ವಿಡಂಬಿಸಿದ್ದಾರೆ ಎನಿಸುತ್ತದೆ.

ಇತ್ತೀಚೆಗೆ ಸಂಭವಿಸಿದ ಮಹಾ ಆರ್ಥಿಕ ಕುಸಿತದಿಂದ ತತ್ತರಿಸಿದ ಅಮೇರಿಕಾದಂತಹ ಬಲಿಷ್ಠ ರಾಷ್ಟ್ರಗಳಿಗೆ "ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು ಮೇಲೇಸು ಕಾಲ ಬದುಕುವನೊ?" ಎಂಬ ವಚನದ ಈ ಸಾಲುಗಳಲ್ಲಿ ಭೋಗ ಜೀವನಕ್ಕಾಗಿ ಹಪಹಪಿಸಿ ಬೇರೆಯವರ ಮೇಲೆ ದಬ್ಬಾಳಿಕೆ ಮಾಡಿ ಹಣ ಸಂಗ್ರಹಿಸಿದರೆ ಆಪತ್ತು ಕಟ್ಟಿಟ್ಟ ಬುತ್ತಿ ಎಂಬುದನ್ನು ಮಾರ್ಮಿಕವಾಗಿ ತಿಳಿಸಲಾಗಿದೆ.

ಕಾಯಕ ನಿಷ್ಠೆ ಸರಳ-ಪ್ರಾಮಾಣಿಕ ಜೀವನ ನಡೆಸಿದರೆ ಮಾತ್ರ ಸಮಷ್ಟಿಯ ಕಲ್ಯಾಣ ಸಾಧ್ಯ ಎಂದು ಬಸವಣ್ಣನವರು ವಿಶ್ಲೇಷಿಸಿದ್ದಾರೆ. ಮನುಷ್ಯ-ಮನುಷ್ಯನನ್ನೆ ಆಪೋಶನಗೈವ ಅಮಾನವೀಯ ನಡವಳಿಕೆಯನ್ನು ಹುಟ್ಟುಹಾಕಿರುವ ಜಾಗತೀಕರಣದ ಈ ಸಂದರ್ಭದಲ್ಲಿ ಈ ವಚನ ಹೆಚ್ಚು ಚಿಂತನಪರವಾಗಿದೆ.

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ

ಮೇಲುಸ್ತರದ ಸಾಮಾನ್ಯ ಆಲೋಚನೆಗೆ ಸರಳವಾಗಿ ಗೋಚರವಾಗುವ ಈ ವಚನದ ಒಳಹೊಕ್ಕಾಗ ಶರಣೆ ಲಕ್ಕಮ್ಮನ ಕಾಯಕ ನಿಷ್ಠೆಯ ಅರಿವಾಗುತ್ತದೆ. ಕಾಯಕದ ಮೂಲಕ,

ಸಮಾನತೆಯ, ಸ್ವಾಭಿಮಾನದ, ಸ್ವಾವಲಂಬನೆಯ ಬದುಕಿಗೆ ಅರ್ಥ ತುಂಬುವ ಆರ್ಥಿಕ ವಿಚಾರಗಳನ್ನು ಈ ವಚನದಲ್ಲಿ ಕಾಣಬಹುದು.

ಅಂಗಳದಲ್ಲಿ ಬಿದ್ದಿದ್ದ ಅಕ್ಕಿಯನ್ನು ದಿನಕ್ಕಿಂತ ಜಾಸ್ತಿ ಆಯ್ದು ತರುವ ತನ್ನ ಪತಿ ಮಾರಯ್ಯನನ್ನು ಪ್ರಶ್ನಿಸುವ ಈ ಪರಿ ಮಾನವನ ಚಿತ್ತಶುದ್ಧತೆಯನ್ನೇ ಪ್ರಶ್ನಿಸಿದಂತಿದೆ.

ಇತ್ತೀಚಿನ ವರದಿಯ ಒಂದು ಅಂದಾಜಿನ ಪ್ರಕಾರ ಸ್ವಿಸ್ ಬ್ಯಾಂಕುಗಳಂತಹ ವಿದೇಶಿ ಬ್ಯಾಂಕುಗಳಲ್ಲಿ ಭಾರತೀಯರು ನ್ಯಾಯಬಾಹಿರವಾಗಿ ಕಾಪು ದಾಸ್ತಾನು ಮಾಡಿರುವ ಕಪ್ಪು ಹಣ ಸುಮಾರು ಎಪ್ಪತ್ತು ಲಕ್ಷ ಕೋಟಿ ರೂಪಾಯಿಗಳು. ಇದು ಭಾರತದ ರಾಷ್ಟ್ರೀಯ ವರಮಾನವಾದ (50) ಐವತ್ತು ಲಕ್ಷ ಕೋಟಿ ರೂಪಾಯಿಗಳಿಗಿಂತ ಶೇಕಡ (40) ನಲವತ್ತರಷ್ಟು ಅಧಿಕ ಎಂಬುದು ಆರ್ಥಿಕತಜ್ಞರ ಲೆಕ್ಕಾಚಾರ. ಇಷ್ಟೊಂದು ಭಾರಿ ಮೊತ್ತದ ಹಣವನ್ನು ಪಾರದರ್ಶಕ ಆರ್ಥಿಕ ವ್ಯವಸ್ಥೆಯಿಂದ ವಂಚಿಸಿ ತೆರಿಗೆ ಕಳ್ಳತನದಿಂದ ತಪ್ಪಿಸಿ ಸರ್ಕಾರದ ತೆರಿಗೆ ವ್ಯವಸ್ಥೆಯ ಲೆಕ್ಕ ಪ್ರಾಧಿಕಾರದ ಕಣ್ತಪ್ಪಿಸಿ ಕಳ್ಳತನ ಮಾಡಿ ಕಾಪಿಟ್ಟಿರುವುದರಿಂದಲೆ ದೇಶದಲ್ಲಿ ಬಂಡವಾಳದ ಕೊರತೆಯುಂಟಾಗಿ, ವಿದೇಶಿ ಬಂಡವಾಳಕ್ಕೆ ಕೈಚಾಚುವ ಪರಿಸ್ಥಿತಿ ಬಂದಿದೆ. ದೇಶದಲ್ಲಿ ಆರ್ಥಿಕ ವಿಷಮತೆ ಹೆಚ್ಚಾಗುತ್ತಿದೆ. ಬಡವರು ಬಡವರಾಗುತ್ತಲೇ ಇದ್ದಾರೆ.

ಹೀಗಿರುವಾಗ ಅಗತ್ಯಕ್ಕಿಂತ ಹೆಚ್ಚು ಸಂಗ್ರಹ ಸಲ್ಲದು ಎಂಬ ಶರಣೆ ಲಕ್ಕಮ್ಮನ ಚಿತ್ತಶುದ್ಧ ಕಾಯಕದ ನಿರ್ವಂಚಕ ಮನಸ್ಥಿತಿ ಇಂದಿನ ಧನದಾಹಿ ಆಧುನಿಕ ಮಾನವರಿಗೆ ಆದರ್ಶಪ್ರಾಯವಾಗಿದೆ.

ಸಮಾಜವಾದದ ಹರಿಕಾರ, ಸರ್ವಶ್ರೇಷ್ಠ ಚಿಂತನಶೀಲ 'ಕಾರ್ಲ್‌ಮಾರ್ಕ್ಸ್' ತನ್ನ "ಕಮ್ಯುನಿಸ್ಟ್ ಮ್ಯಾನಿಫೆಸ್ಟೋ" ಮಹಾಕೃತಿಯಲ್ಲಿ ಹೀಗೆ ಹೇಳಿದ್ದಾರೆ: "ಕಾರ್ಮಿಕರೆ ಒಂದುಗೂಡಿ ಅದರಿಂದ ನೀವು ಬಂಧವಿಮೋಚನರಾಗುವುದನ್ನು ಬಿಟ್ಟರೆ ಬೇರೆ ಏನನ್ನು ಕಳೆದುಕೊಳ್ಳುವುದಿಲ್ಲ."

ಮಾರ್ಕ್ಸ್‌ರವರ ಈ ಮಾತುಗಳು ಶೋಷಿತವರ್ಗದವರನ್ನು ಬಡಿದೆಬ್ಬಿಸುವ ಮೂಲಕ ನೊಂದ ಜನರನ್ನು ಕ್ರಾಂತಿಗೆ ಪ್ರೇರೇಪಿಸಿದವು.

ಬಂಡವಾಳಶಾಹಿ ಅರ್ಥವ್ಯವಸ್ಥೆ, ಆರ್ಥಿಕ ಅಸಮಾನತೆಯ ಕಾರಣದಿಂದ ತನ್ನ ಒಡಲಲ್ಲೆ ಸಂಘರ್ಷವನ್ನಡಗಿಸಿಕೊಂಡಿರುತ್ತದೆ. ಕಾರ್ಲ್‌ಮಾರ್ಕ್ಸ್‌ರಂತವರ ವಿಚಾರಧಾರೆಗಳಿಂದ ತುಳಿತಕ್ಕೊಳಗಾದವರ ಎದೆಯಲ್ಲಿ ಮಿಂಚಿನ ಸಂಚಾರವಾಗಿ, ಬೆಂಕಿಯ ಜ್ವಾಲೆಯಾಗಿ ಪರಿಣಮಿಸಿ ವರ್ಗ ಸಂಘರ್ಷಕ್ಕೆ ನಾಂದಿಯಾಗುತ್ತದೆ.

ಆದರೆ ಇಂತಹ 'ಉಳ್ಳವರು ಮತ್ತು ಇಲ್ಲದವರ' ನಡುವಿನ ಹೋರಾಟದಂತಹ ರಕ್ತ ಕ್ರಾಂತಿಯ ಮೂಲಕ ಸಾಧಿತವಾಗುವ ಸಮಾನತೆ ಶಾಶ್ವತವಾದುದಲ್ಲ ಅದು ಕ್ಷಣಿಕ, ನಶ್ವರ.

ಆದರೆ ಶರಣರು ತೋರಿದ ಸದಾಚಾರದ ಮಾರ್ಗ ಒಳ ಹೊರಗನ್ನು ಪರಿಶುದ್ಧಗೊಳಿಸಿ, ಹೃದಯದಲ್ಲಿ ಸಾತ್ವಿಕ ಅರಿವನ್ನು ಮೂಡಿಸುವಂತಹದು, ಸಮಾನತೆಯ ತಳಹದಿಯ ಮೇಲೆ



ವರ್ಗರಹಿತವಾದ ಸಮಾಜ ಕಟ್ಟಲು ಶರಣರು ಕಂಡುಕೊಂಡ ಮಾರ್ಗ ಕಾಯಕ-ದಾಸೋಹ ತತ್ವ. ನೈತಿಕ ಮೌಲ್ಯಗಳಿಲ್ಲದ ಆರ್ಥಿಕತೆ ಪಾಪಕರ. ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮನುಷ್ಯ ಮಾಡುವ ಯಾವುದೇ ಕೆಲಸ ನೈತಿಕತೆಯ ಅಸ್ತಿಭಾರದ ಮೇಲೆಯೆ ನಿಲ್ಲಬೇಕು ಎಂಬುದು ಶರಣರ ನಿಲುವಾಗಿತ್ತು. ಅವರ ಆಚಾರ-ವಿಚಾರಗಳಲ್ಲಿ ಅಸಮತೆಗೆ ಎಡೆಯಿಲ್ಲ, ಘರ್ಷಣೆಗೆ ಜಾಗವೆ ಇಲ್ಲ.

"ಸಂಪತ್ತು ಮಾನವನ ಕಲ್ಯಾಣಕ್ಕಾಗಿ ಇದೆಯೇ ಹೊರತು ಮಾನವನು ಸಂಪತ್ತಿಗೋಸ್ಕರವಲ್ಲ, ಸಂಪತ್ತು ಕೇವಲ ಸಾಧನ ಮಾತ್ರ. ಸಂಪತ್ತನ್ನು ಗಳಿಸುವುದೇ ಮಾನವನ ಮುಖ್ಯ ಗುರಿಯಲ್ಲ, ಮಾನವನ ಕಲ್ಯಾಣ ಸಂಪತ್ತಿನಿಂದಾಗಬೇಕು" ಎಂದು ಹೇಳಿರುವ ಅರ್ಥಶಾಸ್ತ್ರಜ್ಞ ಡಾ. ಆಲ್ಫ್ರೆಡ್ ಮಾರ್ಷಲ್‌ರವರ ಮಾತನ್ನು ಹನ್ನೆರಡನೆಯ ಶತಮಾನದಲ್ಲಿಯೆ ಸರ್ವರಿಗು ಲೇಸು ಬಯಸುವ ಸಹಬಾಳ್ವೆಯ ಸದಾಚಾರ, ಸನ್ನಡತೆ, ಸದ್ಭಾವನೆಯ ಜೊತೆಗೆ ಕಾಯಕ ನಿಷ್ಠೆ ಮತ್ತು ದಾಸೋಹ ತತ್ವಗಳ ಮೂಲಕ ಶರಣರು ಸಾಧಿಸಿ ತೋರಿಸಿದ್ದರು.

ಸಾಹಿತ್ಯಿಕ, ಭಾವನಾತ್ಮಕ, ಧಾರ್ಮಿಕ, ಪಾರಮಾರ್ಥಿಕ, ಪರಿಭಾಷೆಯಲ್ಲಿರುವ ಶರಣರ ವಚನಗಳಲ್ಲಿ ಮಹೋನ್ನತವಾದ ಆರ್ಥಿಕ ಮೌಲ್ಯಗಳಿವೆ. ಜಾಗತೀಕರಣದ ಸವಾಲುಗಳ ನಡುವೆ ಸಿಲುಕಿ ಬಳಲುತ್ತಿರುವ ಇಂದಿನ ಆಧುನಿಕ ಮಾನವನ ಆರ್ಥಿಕ-ಸಾಮಾಜಿಕ, ಸಮಸ್ಯೆಗಳಿಗೆ ವಚನಗಳು ಸೂಕ್ತ ಪರಿಹಾರ ಒದಗಿಸಬಲ್ಲವು. ಶರಣರ ವಚನ ಸಾಗರದಲ್ಲಿ ಮಿಂದು ಆಚಾರ-ವಿಚಾರಗಳೆಂಬ ಸತ್ಯದ ಬೆಳಕಿನಲ್ಲಿ ಇಂದಿನ ಸಮಾಜ ತನ್ನ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ.

□

ಗ್ರಂಥಾಂತರಂಗ

# ಕಾಯಕ ಮೀಮಾಂಸೆ - ಒಂದು ಓದು

**ಕೃತಿ : ಕಾಯಕ ಮೀಮಾಂಸೆ** **ಸಂದೀಶ್ ಹಂಚೆ**

**ಕರ್ತೃ : ಡಾ. ಬಿ.ವಿ. ವಸಂತಕುಮಾರ್**

**ಪ್ರಕಾಶನ: ಸಂವಹನ, ಮೈಸೂರು**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಚಳವಳಿ ಒಂದು ಮಹತ್ವದ ಘಟ್ಟ. ಇದೊಂದು ಸಾಮೂಹಿಕ ಮತ್ತು ಸಮಾನತೆಯ ಆಶಯಗಳ ಚಳವಳಿಯಾಗಿತ್ತು. ಅರಸೊತ್ತಿಗೆಯ ಸುಪರ್ದಿಯಲ್ಲಿದ್ದ ಕನ್ನಡ ಸಾಹಿತ್ಯ ಪ್ರವೃತ್ತಿ ಜನಸಾಮಾನ್ಯರಿಂದ ದೂರವಾಗಿತ್ತು. ಪಂಪನಿಂದ ಆರಂಭಗೊಂಡು ಬಹುತೇಕ ಕನ್ನಡದ ಕವಿಗಳು (ವ್ಯಾಪಕಾರ್ಥದಲ್ಲಿ) ವ್ಯವಸ್ಥೆಯ ಬೇರೆ ಬೇರೆ ಸ್ವರೂಪದ ಪ್ರತಿಪಾದಕರೇ ಆಗಿದ್ದರು. ಈ ಸಾಂಸ್ಥಿಕ ಸಾಮಾಜಿಕ ಗೃಹಿತಗಳಿಂದ ಬಹುಸಂಖ್ಯಾತ ಅಂಚಿನ ಸಂಸ್ಕೃತಿಯ ಜನ ಪ್ರತ್ಯೇಕತೆಯನ್ನು ಯಾವಾಗಲೂ ಕಾಯ್ದುಕೊಳ್ಳುತ್ತಾರೆ. ನಾಡಿನ ಸ್ಥಾಪಿತ ಚರಿತ್ರೆಗಿಂತ ಪ್ರತ್ಯೇಕ ಪರಮ ನಿಜ ಚರಿತ್ರೆಯೊಂದನ್ನು ಕಟ್ಟಿಕೊಂಡಿರುತ್ತಾರೆ. ಆದರೆ ಅದು ಸಮಾಜದ ಕೇಂದ್ರ ಸ್ಥಾನದಲ್ಲಿ ಪ್ರತಿಷ್ಠಾಪನೆಗೊಳ್ಳಲಾರದೆ ಹೋಗುತ್ತದೆ. ಯಾಕೆಂದರೆ ಇದಕ್ಕೆ ಸಾಂಸ್ಥಿಕ ರಾಜಕೀಯ ಗೃಹಿತಗಳನ್ನು ಮೀರಲಾಗುವುದಿಲ್ಲ ಮತ್ತು ಕೇಂದ್ರ ಸಂಸ್ಕೃತಿ ಇಂತಹ ಅಂಚಿನ ಪ್ರತಿಪಾದನೆಗಳನ್ನು ಮಾನ್ಯ ಮಾಡುವುದಿಲ್ಲ. ಆದರೆ ಜೀವಂತ ಸಮಾಜದ ಆಂತರ್ಯದಲ್ಲಿ ಮಾತ್ರ ನಿರಂತರವಾಗಿ ಪ್ರತಿಲೋಪ ಸಂಸ್ಕೃತಿಯ ಕಟ್ಟುವಿಕೆ ಜೀವಂತವಾಗಿರುತ್ತದೆ. ಕನ್ನಡ ಸಾಹಿತ್ಯದಲ್ಲಿ ಇಂತಹ ಪ್ರತಿಲೋಪ ಸಂಸ್ಕೃತಿ ಪ್ರಧಾನತ್ವವನ್ನು ಪಡೆದದ್ದು ವಚನ ಚಳವಳಿಯ ಸಂದರ್ಭದಲ್ಲಿ.

ಇಡೀ ವಚನ ಚಳವಳಿಯನ್ನು ಅಂಚಿನ ಸಂಸ್ಕೃತಿಯ ಬಹುಸಂಖ್ಯಾತ ಜನ ಕಟ್ಟಿದರು. ಕೇಂದ್ರ ಸಂಸ್ಕೃತಿಗಿಂತ ಭಿನ್ನವಾಗಿ ಜನರ ನಡುವಿನಲ್ಲಿ ಪ್ರಜಾತಾಂತ್ರಿಕ ಕ್ರಮ ಮತ್ತು ಸ್ವರೂಪದಲ್ಲಿ ತಮ್ಮ ಚಳವಳಿಯ ಧೋರಣೆಯನ್ನು ರೂಪಿಸಿದರು. ಇಡೀ ಭಾರತದಲ್ಲಿ ಮೊದಲ ಬಾರಿಗೆ ಅಂಚಿನ ಸಂಸ್ಕೃತಿ ಕೇಂದ್ರ ಸ್ಥಾನದಲ್ಲಿ ಪ್ರಕಟಿತಗೊಳ್ಳತೊಡಗಿತು. ಇಲ್ಲಿ ಒಂದು ಸೂಕ್ಷ್ಮ ಸಂಗತಿಯನ್ನು ಗಮನಿಸಬೇಕು. ಇಲ್ಲಿಯವರೆವಿಗೆ ಕೇಂದ್ರ ಸ್ಥಾನದಲ್ಲಿ ಅಲಂಕರಿಸಿದ್ದ ಮಹಾಜನರು ತಮ್ಮ ಸಂಸ್ಕೃತಿಯ ಪ್ರತಿಪಾದನೆಯನ್ನು ಬುದ್ಧಿಗೋಳಿಸಿದರು. ಅವೆಲ್ಲವೂ ತರ್ಕದಿಂದ, ಬುದ್ಧಿಯ ಬಲದಿಂದ ಮತ್ತು ತಮ್ಮ ಸಾಮಾಜಿಕ ನಂಬಿಕೆಗಳ ಗೃಹಿತಗಳೇ ಪರಮ ಮೌಲ್ಯವೆಂಬ ಗಮ್ಯನೆಲೆಯಿಂದ ಹುಟ್ಟಿದವು. ಇದನ್ನಿಲ್ಲಿ ಅವರು ಬರಹದ ರೂಪದಲ್ಲಿ ಪ್ರತಿಪಾದಿಸಿದರು. ವೇದಗಳು, ಕನ್ನಡ ಕಾವ್ಯಗಳೆಲ್ಲ ಇಂತಹ ಬುದ್ಧಿಗಮ್ಯವಾದವುವೆ; ಬರಹ ಅವರಿಗೆ ಒಂದು ಪ್ರವೃತ್ತಿಯೇ. ಆದರೆ 12ನೇ ಶತಮಾನದ ವಚನ ಚಳವಳಿ ಶ್ರಮಯುಕ್ತವಾಗಿತ್ತು. ವಚನಕಾರರಿಗೆ ಬದುಕು ಮುಖ್ಯ. ನಡೆ ತತ್ವವನ್ನು ರೂಪಿಸಬೇಕೆ



ಹೊರತು ತತ್ವವೇ ನಡೆಯನ್ನು ರೂಪಿಸಬಾರದು. ತತ್ವ ಕಾಲದ ತೆಕ್ಕೆಯಲ್ಲಿ ಜಂಗಮ ಸ್ವರೂಪಿಯಾಗಿರಬೇಕು, ಸ್ಥಾವರವಾಗಿಯಲ್ಲ. ಆದುದರಿಂದಲೇ ವಚನಕಾರರಿಗೆ ಬರಹವೊಂದು ಅನುಷಂಗಿಕ ಪ್ರಕ್ರಿಯೆಯಾಗಿತ್ತು, ಬದುಕು ಮುಖ್ಯವಾಯಿತು. ವಚನ ಚಳವಳಿಯ ನಂತರ ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧಿ ಇಂತಹ ಅಂಚಿನ ಸಂಸ್ಕೃತಿ ಪ್ರಧಾನ ಆಶಯಗಳನ್ನು ಕೇಂದ್ರ ಸಂಸ್ಕೃತಿಯ ಸ್ಥಾನದಲ್ಲಿ ಪ್ರತಿಷ್ಠಾಪಿಸಲು ತೀವ್ರವಾಗಿ ಯತ್ನಿಸಿದರು.

ಈ ಪ್ರತಿಲೋಮ ಸಂಸ್ಕೃತಿಯ ಮಹಾ ಚಳವಳಿಯಾದ ವಚನ ಚಳವಳಿಯನ್ನು ನಾಡಿನ ಅನೇಕ ವಿದ್ವಾಂಸರು ಬಹು ವಿಸ್ತೃತವಾಗಿ ಚರ್ಚಿಸಿದ್ದಾರೆ. ಅಂತಹ ಚಿಂತನೆಯಲ್ಲಿ ಡಾ. ಬಿ.ವಿ. ವಸಂತಕುಮಾರ ಅವರ 'ಕಾಯಕ ಮೀಮಾಂಸೆ'ಯೂ ಒಂದು. ಈ ಕೃತಿ ಅಂಚಿನ ಸಂಸ್ಕೃತಿಯ ಪ್ರಧಾನ ನೆಲೆಯಾದ ಶ್ರಮದ ಪರಿಕಲ್ಪನೆಯೆ ವಚನ ಚಳವಳಿಯ ಮುಖ್ಯ ತಾತ್ವಿಕತೆಯಾಗಿತ್ತು ಎಂಬುದನ್ನು ಗುರುತಿಸುತ್ತದೆ. ಶೂದ್ರ ಸಮುದಾಯವೊಂದು ತನ್ನ ನಿತ್ಯ ಬದುಕಿನ ಅನಿವಾರ್ಯತೆಯಾದ ಕಾಯಕವನ್ನು ಬದುಕಿನ ಆತ್ಯಂತಿಕ ಸ್ಥಿತಿಯಲ್ಲಿ ಮಾಡುತ್ತಾರೆ. ಆದುದರಿಂದಲೇ ಅವರಿಗೆ ನಿಜವಾದ ಸಂಸ್ಕೃತಿಯನ್ನು ಕಟ್ಟಲು ಸಾಧ್ಯವಾಯಿತು. ನಾಡಿನ ಬಹುಜನರ ಶ್ರಮಕ್ಕೆ ಮನ್ನಣೆ ದೊರಕುವಂತೆ ಮಾಡಿತು ಎಂಬುದನ್ನು ಸ್ಥೂಲವಾಗಿ ಈ ಕೃತಿ ಚರ್ಚಿಸಲು ನೋಡುತ್ತದೆ.

ಕಾಯಕ ಮೀಮಾಂಸೆ ಕೃತಿಯಲ್ಲಿ ಪ್ರಧಾನವಾಗಿ ಐದು ಅಧ್ಯಾಯಗಳಿವೆ. ಅವೆಲ್ಲವು ಒಟ್ಟು ವಚನ ಚಳವಳಿಯ ಮುಖ್ಯ ಆಶಯವಾದ ಕಾಯಕವನ್ನು ತಾತ್ವಿಕವಾಗಿ ಕಟ್ಟಿಕೊಡಲು ಪ್ರಯತ್ನಿಸುತ್ತವೆ. ಕೃತಿಯ ಮೊದಲ ಅಧ್ಯಾಯ "ವಚನಕಾರರ ಕಾಯಕ ಪರಿಕಲ್ಪನೆ"ಯಲ್ಲಿ "ಶ್ರಮ" ಎಂಬುದು ಶೂದ್ರ ಸಮುದಾಯದ ಜೀವನ ದರ್ಶನ. ಅವರು ಬೆವರಿನ ಗಂಗೆಯಲ್ಲಿ ಮಿಂದ ಪವಿತ್ರಾತ್ಮರೂ ....ಅಂಥ ವರ್ಗದವರಿಂದಲೇ ಹುಟ್ಟಿ ಬೆಳೆದ ವಚನ ಚಳವಳಿಗೆ ಕಾಯಕ ತತ್ವವೇ ಜೀವಾಳ. ಕೆಳವರ್ಗದವರಿಂದ ಬಂದ ವಚನಕಾರರಲ್ಲಿ ಕಂಡು ಬರುವಷ್ಟು "ಕಾಯಕ ತತ್ವ" ಬಸವಣ್ಣನವರಂತ ಮೇಲ್ವರ್ಗದಿಂದ ಬಂದವರಲ್ಲಿ ಕಾಣಿಸುವುದಿಲ್ಲ (ಪುಟ 1) ಎಂದು ಚರ್ಚಿಸುತ್ತಾರೆ. ಮುಂದುವರೆದು "ಬಸವಣ್ಣನವರಿಗೆ ಕಾಯಕ ಗುರುಲಿಂಗ ಜಂಗಮಕ್ಕೆ ದಾಸೋಹ ಮಾಡಲು ಮಾಡುವ ಒಂದು ಸಾಧನ. ಅಪವರ್ಗದ ವಚನಕಾರರಿಗೆ ಕಾಯಕವೇ ಗುರುಲಿಂಗ ಜಂಗಮಕ್ಕಿಂತಲೂ ಮುಖ್ಯವಾದದ್ದು (ಪುಟ 4) ಎನ್ನುತ್ತಾರೆ. "ಅಲ್ಲಮನಾಗಲೀ, ಬಸವನಾಗಲೀ, ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯನಂತೆ ಕಾಯಕದ ಪರಿಕಲ್ಪನೆಯನ್ನು ಕಟ್ಟಿಕೊಡುವುದಿಲ್ಲ. ಬಸವಣ್ಣ ದಾಸೋಹದ ಹರಿಕಾರನಾದರೆ ಅಲ್ಲಮ ಅನುಭಾವದ ಅವಧೂತ." ಆದುದರಿಂದ "ವಚನ" ಧರ್ಮದ ಬಹುತೇಕ ಪರಿಕಲ್ಪನೆಗಳನ್ನು ಇತರ ವಚನಕಾರರೂ ನೀಡಿರುವುದರಿಂದ ವಚನ ಧರ್ಮವನ್ನು "ಬಸವ ಧರ್ಮ" ಎಂದು ಕರೆಯುವುದು ಇತರ ವಚನಕಾರರಿಗೆ ಮಾಡಿರುವ ವಂಚನೆಯಾಗುತ್ತದೆ" ಎಂದು ಅನೇಕ ಅಪವರ್ಗದವರ ವಚನಗಳ ಉಲ್ಲೇಖದೊಡನೆ ಚರ್ಚಿಸುತ್ತಾರೆ. ಈ ಅಧ್ಯಾಯದ ಕೊನೆಯಲ್ಲಿ ಟಿಪ್ಪಣಿ ರೂಪದಲ್ಲಿ ತಾವು ಚರ್ಚಿಸಿದ ಸಂಗತಿಗಳನ್ನು ದಾಖಲಿಸುತ್ತಾರೆ. ಈ ಅಧ್ಯಾಯವೇ ಇಡೀ

ಕೃತಿಯ ಮುಖ್ಯ ಅಂಗವಾಗಿದೆ. ಇನ್ನುಳಿದ ನಾಲ್ಕು ಅಧ್ಯಾಯಗಳು ಈ ನಿಲುವನ್ನು ಸಮರ್ಥಿಸಲು ಪೋಷಕನಾಗಿ ಕಾಣಿಸಿಕೊಂಡಿವೆ.

ಒಂದು ವಸ್ತುಸಂಗತಿಯನ್ನು ಕುರಿತು ವಿಸ್ತೃತವಾದ ಓದು ಮತ್ತು ಚಿಂತನೆ ಅನೇಕ ಹೊಳವುಗಳನ್ನು ಹೊಳೆಸುತ್ತದೆ. ಆ ಹೊಳವುಗಳನ್ನು ಸರಿಯಾಗಿ ಧ್ಯಾನಿಸದೆ ಹೋದರೆ, ತಾತ್ವಿಕವಾಗಿ ಅದು ರೂಪುಗೊಳ್ಳದೆ ಸೋಲುತ್ತದೆ. ತಾತ್ವಿಕವಾಗಿ ಸರಿಯಾಗಿ ರೂಪುಗೊಳ್ಳದೆ ಲೇಖಕ ಏನನ್ನು ಬರೆಯಬಾರದು ಎಂಬುದು ನನ್ನ ಖಚಿತ ಅಭಿಪ್ರಾಯ. ಡಾ. ಬಿ.ವಿ. ವಸಂತಕುಮಾರ್ ಅವರು ಈ ಕೃತಿಯಲ್ಲಿ ದ್ವಂದ್ವಮಾನ ವರ್ಗೀಕರಣ ಮಾನದಂಡವನ್ನು ಪ್ರಧಾನವಾಗಿ ಆಶ್ರಯಿಸಿದ್ದಾರೆ. ಇವು ಸ್ವತಃ ತಮ್ಮ ಅಂತರ್ಗತದೊಳಗೆ ವಿರೋಧಾಭಾಸ ಹೊಂದಿವೆ ಎಂಬುದನ್ನು ಗಮನಿಸಬೇಕು. ಲೇಖಕರು ಇಡೀ ಕೃತಿಯಲ್ಲಿ ವಚನ ಚಳುವಳಿಯನ್ನು ಬಡವರು - ಶ್ರೀಮಂತರು; ಶ್ರಮ - ಬುದ್ಧಿ; ಲೌಕಿಕ - ಅಲೌಕಿಕ; ಕೆಳವರ್ಗದವರು - ಮೇಲ್ವರ್ಗದವರು; ದಾಸೋಹ ಪ್ರಧಾನ - ಕಾಯಕ ಪ್ರಧಾನ; ಇಂತಹ ಪ್ರಮೇಯಗಳ ದ್ವಂದ್ವಮುಖೇನ ವಚನ ಚಳವಳಿಯನ್ನು ಲೇಖಕರು ನೋಡುತ್ತಾರೆ. ಈ ತರಹದ ವರ್ಗೀಕರಣಗೊಂಡ ಕ್ರಮ ಸರಳ ದ್ವಂದ್ವ ನಿಯಮದ್ದು. ಈ ಪ್ರಕ್ರಿಯೆ ಅನೇಕ ಸಂದರ್ಭದಲ್ಲಿ ತಾತ್ತ್ವಿಕ ಮುಖಾಮುಖಿಯ ಪ್ರಶ್ನೆಯಾಗಿರದೆ, ಮೇಲ್ನೋಟದ ಆಂಶಿಕ ಸಂಗತಿಗಳನ್ನು ತನ್ನೆದುರು ಇಟ್ಟುಕೊಂಡಿರುತ್ತದೆ. ಇದರಿಂದಾಗಿ ಇಂತಹ ವರ್ಗೀಕರಣದ ಹಿಂದೆ ಇರುವ ತರ್ಕಗಳು ಕೂಡ ಸಾಂಪ್ರದಾಯಿಕವಾದ ರೂಪಗಳನ್ನು ದಾಟುವುದಿಲ್ಲ. ಬದಲಿಗೆ ಅದನ್ನೇ ಆಧರಿಸಿರುತ್ತವೆ.

ಕೃತಿಯ ಮೊದಲ ಅಧ್ಯಾಯದಲ್ಲಿ, ಮೇಲ್ವರ್ಗದಿಂದ ಬಂದ ಬಸವಣ್ಣ ಹಾಗೂ ಕೆಳವರ್ಗದಿಂದ ಬಂದ ಅನೇಕ ವಚನಕಾರರ ವಚನಗಳ ಮೂಲಕ ಈ ದ್ವಂದ್ವಮಾನ ಕಾಯಕ ಪ್ರಮೇಯವನ್ನು ಕಟ್ಟಲು ಲೇಖಕರು ಪ್ರಯತ್ನಿಸುತ್ತಾರೆ. ಒಂದರ್ಥಕ್ಕೆ ಮೇಲುನೋಟಕ್ಕೆ ಯಶಸ್ಸನ್ನು ಕಂಡರು ತಾತ್ವಿಕವಾಗಿ ತೀರ ಪೇಲವವಾಗಿ ಸೋಲುತ್ತಾರೆ. ಇಂತಹ ವರ್ಗೀಕರಣ ತನ್ನೊಳಗೆ ಅಂತರ್ಗತ ಮಾಡಿಕೊಂಡಿರುವ ದ್ವಂದ್ವಗಳನ್ನು ಲೇಖಕರು ಗಮನಿಸುವುದೇ ಇಲ್ಲ. ಮೊದಲಿಗೆ ಬಡವರು ಮಾತ್ರ ಶ್ರೇಷ್ಠರು, ಮನುಷ್ಯರು, ಪ್ರೀತಿಯುಳ್ಳವರು, ಕಾಯಕ ಜೀವಗಳು ಆಗಿದ್ದಾರೆ, ಇವರೆಲ್ಲ ಶೂದ್ರರು (ಪುಟ 24) ಇವರಿಗೆ ದುಡಿಯದಿದ್ದರೆ ಅನ್ನವಿಲ್ಲ, ಹಂಚದಿದ್ದರೆ ಆನಂದವಿಲ್ಲ (ಪುಟ 23) ಎಂದು ಖಚಿತವಾಗಿ ಪ್ರತಿಪಾದಿಸುವ ಲೇಖಕರಿಗೆ ಶ್ರೀಮಂತರು ಈ ಮೇಲೆ ಪ್ರತಿಪಾದಿಸಿ ಎಲ್ಲ ಸಂಗತಿಗಳಿಂದ ದೂರವಿರುವವರು "ರಾಕ್ಷಸರು" ಆಗಿದ್ದಾರೆ ಎಂಬ ಸರಳ ನಿಲುವಿಗೆ ಬಂದಿದ್ದಾರೆ. ಇಡೀ ಕೃತಿ ಶೂದ್ರ ನೆಲೆಯಲ್ಲಿ ಪ್ರತಿಪಾದಿತವಾಗುತ್ತದೆ. ಆದರೆ ಶೂದ್ರರೂ ಮತ್ತು ಅಸ್ಪೃಶ್ಯರ ನಡುವೆ ಒಂದು ಅಂತರವಿದೆ. ಅದನ್ನು ಸಮೀಕರಿಸುವ ಲೇಖಕರ ಕ್ರಮ ಪ್ರಶ್ನಾರ್ಹ ಮತ್ತು ಇಡೀ ಕೃತಿಯಲ್ಲಿ ಕಾಯಕ ಶೂದ್ರ ಜೀವಿಗಳನ್ನು ಮತ್ತು ಅವರ ವಚನವನ್ನು ಉಲ್ಲೇಖಿಸುತ್ತಾರೆ. ಹೀಗೆ ಪ್ರತಿಪಾದಿಸುವ ಲೇಖಕರಿಗೆ ಈ ಬಡತನ ಸಿರಿತನವೆಂಬುದು ಸೃಷ್ಟಿಯಾಗಲು ಇರುವ ನಿಜವಾದ ಸಾಮಾಜಿಕ, ಆರ್ಥಿಕ ಕಾರಣಗಳು



ಹೊಳೆಯುವುದೇ ಇಲ್ಲ. ಹಾಗೆ ನೋಡಿದರೆ 12ನೇ ಶತಮಾನದಲ್ಲಿ ಪ್ರಬಲಗೊಂಡ ಊಳಿಗಮಾನ್ಯ ಪದ್ಧತಿಯ ವಿರುದ್ಧವಾಗಿ ಸಂಘಟಿತ ಪ್ರಜಾತಾಂತ್ರಿಕ ರೂಪದಲ್ಲಿ ಪ್ರಕಟಗೊಂಡಿದ್ದು ಈ ವಚನ ಚಳವಳಿ, ಶೋಷಣೆ ಮತ್ತು ರಾಕ್ಷಸತ್ವ ರೂಪುಗೊಳ್ಳುವುದು ಆರ್ಥಿಕ ವರ್ಗೀಕರಣದ ಹಿನ್ನೆಲೆಯಲ್ಲಿ. ಆದರೆ ಲೇಖಕರು ಇದನ್ನು ಎಲ್ಲಿಯೂ ಗಮನಿಸಿಲ್ಲ. ಈ ಕೃತಿಯ ಸರಳ ಮಾನದಂಡದಿಂದ ಆಗಿರುವ ಅಪಾಯಗಳನ್ನು ಗಮನಿಸಲೇಬೇಕು. ಒಂದು ಈ ಬಡವರು ಮನುಷ್ಯರಾಗಿರುವುದರಿಂದ ಅವರು ಹಾಗೆಯೇ ಇರಬೇಕೆಂಬ ಮನೋಭಾವ ಲೇಖಕರಲ್ಲಿ ಕೆಲಸ ಮಾಡಿದೆ. ಅದು ಈ ಸಮಾಜದ ಕೇಂದ್ರ ಸ್ಥಾಪಿತ ಗೃಹಿತಗಳು ಕೆಲಸ ಮಾಡುವ ರೀತಿ ಎಂಬುದು ಲೇಖಕರಿಗೆ ಎಲ್ಲಿಯೂ ಗೋಚರಿಸುವುದಿಲ್ಲ. ಈ ರೀತಿ ಬಡತನವನ್ನು ವೈಭವೀಕರಿಸುವ ಶೋಷಣೆ ಮಾಡುವ ಈ ಸಮಾಜದ ರೀತಿಗಿಂತ ಭಿನ್ನವೇನಲ್ಲ. ಈ ರೀತಿ ಶ್ರೀಮಂತರನ್ನೆಲ್ಲ ಅಮಾನವೀಯತೆಯ ತೆಕ್ಕೆಗೆ ತಳ್ಳಿಬಿಡುವುದು ತೀರ ಅಪಾಯಕಾರಿ. ಭಾರತದಂತಹ ದೇಶದಲ್ಲಿ ಈ ವರ್ಗ ಮತ್ತು ಜಾತಿಯ ಸಂಕೀರ್ಣತೆ ತುಂಬ ಗಮನಾರ್ಹವಾದುದು. ಇದನ್ನು ತಾತ್ವಿಕವಾಗಿ ಲೇಖಕರು ಗ್ರಹಿಸುವಲ್ಲಿ ವಿಫಲರಾಗಿದ್ದಾರೆ.

ಈ ಕೃತಿಯಲ್ಲಿ ಕಾಯಕ ತತ್ವ - ಬುದ್ಧಿಯನ್ನು ಕುರಿತ ದ್ವಂದ್ವ ಮಾನದಂಡ ತುಂಬಾ ಮುಖ್ಯವಾದದ್ದು. ಕೃತಿಯ ಮೊದಲ ಅಧ್ಯಾಯದಲ್ಲಿ ಬಸವಣ್ಣನವರಿಗೂ ಮತ್ತು ಶೂದ್ರ ಕಾಯಕಜೀವಿಗಳಿಗೂ ಇರುವ ಕಾಯಕ ತತ್ವ ವೈರುದ್ಯವನ್ನು ಲೇಖಕರು ಗುರುತಿಸುತ್ತಾರೆ. ಲೇಖಕರಿಗೆ ಕಾಯಕದ ಬಗ್ಗೆ, ಅದರ ನಿಷ್ಠೆಯ ಬಗ್ಗೆ ತುಂಬಾ ನಿಷ್ಠೆ. ಈ ಇಡೀ ಪ್ರಮೇಯದಲ್ಲಿ ಎರಡು ಮೂಲಾಂಶಗಳನ್ನು ಗ್ರಹಿಸಬೇಕು. 1. ಕಾಯಕ ತತ್ವ ಮತ್ತು ಜಾತೀಯತೆ 2. ಕಾಯಕದ ತಾತ್ವಿಕತೆ ಮತ್ತು ಬಸವಣ್ಣ. ಲೇಖಕರು ಕೃತಿಯಲ್ಲಿ ಸೂಚಿಸಿರುವ ಎಲ್ಲಾ ಕಾಯಕ ಜೀವಿಗಳ ಹೆಸರು ಅವರ ಕಾಯಕದೊಂದಿಗೆ ಅಂಟಿಕೊಂಡಿವೆ. ಉದಾ: ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯ, ಕನ್ನಡಿ ಕಾಯಕದ ಅಮ್ಮಿದೇವಯ್ಯ, ಮಾದಾರ ಚೆನ್ನಯ್ಯ. ಇದನ್ನು ಅನೇಕ ಜನ ತಾವು ಮಾಡುವ ಕಾಯಕ ಕೀಳಲ್ಲವೆಂದು ವಿದ್ವಾಂಸರು, ವಚನಕಾರರೂ ತಾವು ತಮ್ಮ ವೃತ್ತಿಗಳನ್ನೂ ತಮ್ಮ ಹೆಸರಿನ ಜೊತೆ ಇಟ್ಟುಕೊಂಡರು ಎನ್ನುವ ಉದಾರ ಮಾನವತಾ ನೆಲೆಯಲ್ಲಿಯ ಇಂದಿನವರೆವಿಗೆ ನೋಡಿದ್ದಾರೆ. ಆದರೆ ಬಸವಣ್ಣನಿಗೆ ಅಲ್ಲಮನಿಗೆ ಚನ್ನಬಸವಣ್ಣನಿಗೆ ಇಂತಹ ಯಾವುದೇ ಕಾಯಕವೃತ್ತಿ ಅವರ ಹೆಸರಿನ ಮುಂದೆ ಅಂಟಿಕೊಂಡಿಲ್ಲ ಯಾಕೆ ಎಂಬುದು ಮುಖ್ಯವಾಗಿ ಕಾಣುವುದಿಲ್ಲ. (ಭಕ್ತಿ ಕಾಯಕವಲ್ಲ) ಎಂತಹ ಸೂಕ್ಷ್ಮ ವಿಚಾರ ಇದು ಎಂದರೆ ಬಸವಣ್ಣ ಅಪವರ್ಗದವರೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳಲು ಯತ್ನಿಸಿದರೆ, ಸ್ವತಃ ಶೂದ್ರನಾದ ಅಲ್ಲಮ ಅಂತಹ ಸಮೀಕರಣವನ್ನು ಮೀರುತ್ತಾನೆ. ಇದು ವಚನ ಚಳವಳಿಯ ಮಹತ್ವದ ಅಂಶ. ಡಾ. ವಸಂತಕುಮಾರ್ ರವರು ದೈಹಿಕ ಕಾಯಕವೇ ಶ್ರೇಷ್ಠವೆಂದು ಇಡೀ ಕೃತಿಯಲ್ಲಿ ಪ್ರತಿಪಾದಿಸುತ್ತಾರೆ. ಆದರೆ ಕಾಯಕ ನಿಷ್ಠೆ ಮತ್ತು ಕಾಯಕ ತತ್ವ ಎರಡೂ ಪ್ರತ್ಯೇಕವಾದವು. ಕಾಯಕ ನಿಷ್ಠೆಯೆಂದರೆ ತಾನು ಮಾಡುವ ಕಾಯಕವನ್ನು ಅತ್ಯಂತ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಮಾಡುವುದು. ಆದರೆ ಕಾಯಕ ತತ್ವ ಕಾಯಕದಿಂದಲೇ

ಸೃಷ್ಟಿಗೊಂಡಿರುವ ಜಾತೀಯ, ವರ್ಗದ ಮೂಲವನ್ನು ಶೋಧಿಸುವುದು. ಇಡೀ ವಚನ ಚಳವಳಿಯಲ್ಲಿ ವ್ಯಕ್ತವಾಗಿರುವ ಎಲ್ಲ ಕಾಯಕಜೀವಿಗಳ ಹೆಸರಿನ ಹಿಂದೆ ಅಂಟಿಕೊಂಡಿರುವ ಅವರ ವೃತ್ತಿ ಅವರ ಜಾತಿಸೂಚಕವೇ ಆಗಿದೆ. ವಚನ ಚಳವಳಿಗೆ ಮುಡಿಯಲು ಸಾಧ್ಯವಾಗದೆ ಹೋದ ಈ ಕಾಯಕ ಪ್ರಮೇಯ ಕೂಡ ಜಾತೀಯ ಸ್ಥಿರೀಕರಣದಲ್ಲೇ ನಿಲ್ಲುವಂತಾಗಿದ್ದು ನಿಜಕ್ಕೂ ಬೇಸರದ ಸಂಗತಿ. ಭಾರತೀಯ ಸಮಾಜದಲ್ಲಿ ಕಾಯಕವೇ ಜಾತಿಯ ನಿರ್ಮಾತೃ. ಅವರು ಮಾಡುವ ಕಾಯಕದ ಮೇಲೆ ಜಾತಿಗಳು ಸೃಷ್ಟಿಗೊಂಡವು. ಇಂತಹ ಕಾಯಕದ ಪರಿಧಿಯನ್ನು ಮುರಿಯಲು ಸಾಧ್ಯವಿಲ್ಲದೆ ಜಾತಿ ನಾಶವು ಸಾಧ್ಯವಿಲ್ಲ. ಕಾಯಕ ಐಚ್ಛಿಕವಾಗಬೇಕೇ ಹೊರತು ಅನಿವಾರ್ಯವಾಗಬಾರದು. ಮನುಷ್ಯನೊಬ್ಬ ಯಾವ ಕಾಯಕವನ್ನಾದರೂ ಮಾಡುವಂತಿರಬೇಕು. ಆದರೆ ಕಾಯಕ ಮೀಮಾಂಸೆ ಕೃತಿಯು ಸೇರಿದಂತೆ ಬಹುತೇಕ ವಿಶ್ಲೇಷಣಕಾರರು ಕಾಯಕವನ್ನು ಶ್ರದ್ಧೆಯಿಂದ ಮಾಡುವ ಕೈಲಾಸ ಸಮಾನವಾದ ತತ್ವವೆಂದು ಪ್ರತಿಪಾದಿಸುತ್ತಾರೆ. ಆದರೆ ಆಯಾ ಕಾಯಕ ಮಾಡುವವರು ಅದರಲ್ಲೇ ಮುಂದುವರೆದಿದ್ದರಿಂದ ಜಾತಿಯ ನಾಶ ಸಾಧ್ಯವಾಗದೇ ಹೋಯಿತು ಎಂಬುದು ಕೂಡ ಪ್ರಖರ ಸತ್ಯ. ಅದು ವಚನ ಚಳವಳಿಯ ದೊಡ್ಡ ವೈಫಲ್ಯವು ಹೌದು. ಆದರೆ 18ನೇ ಶತಮಾನದ ಕೈಗಾರಿಕಾ ಕ್ರಾಂತಿ ಸೃಷ್ಟಿಸಿದ ಔದ್ಯೋಗಿಕ ಮೀಮಾಂಸೆ ಇಡೀ ಪ್ರಪಂಚದಲ್ಲಿ ಜಾತಿ ವ್ಯವಸ್ಥೆಯನ್ನು ಛಿದ್ರೀಕರಿಸಿತ್ತು.

ಶ್ರೀಯುತ ವಸಂತಕುಮಾರ ಅವರು ಕೃತಿಯಲ್ಲಿ ಅಲ್ಲಮ ಮತ್ತು ಬಸವಣ್ಣನ ತತ್ವ ಪರಿಕಲ್ಪನೆಯನ್ನು ಪ್ರಶ್ನಿಸಿದ್ದಾರೆ. ನಾನು ವಚನ ಚಳವಳಿಯ ಅಭಿಮಾನದಿಂದ ಈ ಲೇಖನವನ್ನು ಬರೆಯುತ್ತಿಲ್ಲವೆಂದು ಸ್ಪಷ್ಟಪಡಿಸಬಯಸುತ್ತೇನೆ. ಈಗ ತತ್ವ ಪ್ರತಿಪಾದಕನ ಮೂಲವು ಮುಖ್ಯವಾಗುತ್ತಿರುವುದೇ ಇದಕ್ಕೆ ಕಾರಣ. ಮೊದಲಿಗೆ ಅಲ್ಲಮಪ್ರಭುವಿನ ಆಧ್ಯಾತ್ಮ ಅನುಭೂತಿಯ ಬಗ್ಗೆ ಅವರಿಗೆ ಪ್ರಶ್ನೆಯಿದೆ. ಅಲ್ಲಮನನ್ನು 'ಅನುಭಾವದ ಅವಧೂತ' ಎನ್ನುತ್ತಾರೆ. ಅನುಭಾವವೆಂಬುದು ಅನುಭವಜನ್ಯವೇ ಹೊರತು ಬೇರೆಯಲ್ಲ. ಆದರೆ ಲೇಖಕರು ಇಡೀ ಕೃತಿಯಲ್ಲಿ ಈ ಅನುಭಾವ ಮತ್ತು ಆಧ್ಯಾತ್ಮವನ್ನು ಸರಿಯಾಗಿ ಗ್ರಹಿಸದೇ ಹೋಗಿದ್ದಾರೆ. ಮೊದಲ ಪುಟದಲ್ಲಿ 'ಅವರು (ಶೂದ್ರರು) ಆಧ್ಯಾತ್ಮದ ವಿಕಾರದ ನೆತ್ತರಿನಲ್ಲಿ ಮಿಂದವರಲ್ಲ' ಎನ್ನುತ್ತಾರೆ. ಮುಂದೆ ಕೃತಿಯ ಅನೇಕ ಕಡೆ ಸರಾಗವಾಗಿ ಈ ಪದವನ್ನು ತುಂಬಾ ಸಲೀಸಾಗಿ ಬಳಸಿದ್ದಾರೆ. ಇದು ಅಲ್ಲಮನನ್ನು ಗ್ರಹಿಸುತ್ತಿರುವ ಒಟ್ಟು ಈ ಸಮಾಜದ ಮೂಲ ಪರಂಪರೆಯ ಧಾಟಿಯಲ್ಲದೆ ಬೇರೇನೂ ಅಲ್ಲ. ಅನೇಕರು ಆತನನ್ನು ಅವಧೂತನೆಂದು ಧನಾತ್ಮಕವಾಗಿ (ಆಧ್ಯಾತ್ಮದ ದೃಷ್ಟಿಯಿಂದ) ಋಣಾತ್ಮಕವಾಗಿ ವ್ಯಾಖ್ಯಾನಿಸಿದ್ದಾರೆ. ಆದರೆ ಅಲ್ಲಮನಿಗೆ ಸಾಧ್ಯವಾಗಿದ್ದ ಶೂದ್ರ ಕಾಯಕ ತತ್ವ ಪರಿಕಲ್ಪನೆ ಬೇರಾರಿಗೂ ಸಾಧ್ಯವಾಗಿಲ್ಲ. ಇಂದು ನಾವೂ ನೀಶೆ, ಡೆರಿಡಾನ ತತ್ವಜ್ಞಾನದಿಂದ ಬಿಡಿಸಲೆತ್ನಿಸುವ ಅನೇಕ ಸಾಮಾಜಿಕ ಗ್ರಹಿತಗಳನ್ನು ಅಲ್ಲಮ ಅಂದು ಸುಲಭವಾಗಿ ಕಂಡುಕೊಂಡಿದ್ದ ಮತ್ತು ಅಭಿವ್ಯಕ್ತಿಸಿದ್ದ. ವಿಕೋ ಸಾಮಾಜಿಕ ಸಂಸ್ಥೆಗಳನ್ನು ಸ್ಥಾಪಿತ ರಚನಾಕ್ರಮವೆಂದು ಪರಿಗಣಿಸಿರುವುದು ಬೌದ್ಧಿಕತೆಯು ಕೂಡ ಸಮಾಜದ



ಉತ್ಪನ್ನವೆಂಬ ಗ್ರಹಿಕೆಯ ಹಿನ್ನೆಲೆಯಲ್ಲಿ. ಅಲ್ಲಮನ ಇಡೀ ವಚನವನ್ನು ಅಭ್ಯಾಸಿಸಿದರೆ ಅವನ್ನು ಈ ಭಾಷಿಕ ಹಾಗೂ ಸಾಮಾಜಿಕ ಸಂಹಿತೆಯ ಗ್ರಹಿತಗಳನ್ನು ಸಮರ್ಥವಾಗಿ ಗ್ರಹಿಸುವ ಮತ್ತು ಮುಂದು ಕೆಟ್ಟ ಕೆಲಸ ಮಾಡಿದ್ದಾನೆ. ಕುತೂಹಲವೆಂದರೆ ಆತ ತುಂಬಾ ಗಮನಾರ್ಹ. ವಚನದಲ್ಲಿ ರೂಪಕ ಮತ್ತು ಪ್ರತಿಮೆಗಳನ್ನು ಛಿದ್ರೀಕರಿಸುವ ರೀತಿಯನ್ನು ಮತ್ತು ಆತ ಭೇಟಿಯಾಗುವ ಪ್ರತಿ ಶರಣನಿಗೂ ತಾನು ಮಾಡುವ ಕಾಯಕಕ್ಕಿಂತ ಮೊದಲು ಜ್ಞಾನ ಮುಖಿಯಾಗಬೇಕೆನ್ನುತ್ತಾನೆ. ಕಾರಣ ಸುಸ್ಪಷ್ಟವಿದೆ. ನಮ್ಮನ್ನು ಸೃಷ್ಟಿ ಮಾಡಿ ಆಳುವ ಸಮಾಜದ ಗೃಹಿತಗಳು ಸರಿಯಾಗಿ ಅರ್ಥವಾಗದೆ ಹೋದರೆ ನಮ್ಮ ಸ್ಥಿತಿಗತಿಯನ್ನು ಸ್ತುತಿಸಿ ಮೈಮರೆತುಬಿಡುತ್ತೇವೆ. ಅಲ್ಲಮ ಸಿದ್ಧರಾಮನನ್ನು ಭೇಟಿಯಾಗಿ ಆತನ ಕಾಯಕವನ್ನು ನಿಂದಿಸುವುದು ಈ ಹಿನ್ನೆಲೆಯಲ್ಲಿ, ಆತನು ಎಲ್ಲರಂತೆ ಜ್ಞಾನವನ್ನು ಸಂಪಾದಿಸಿ ನಂತರ ತನ್ನ ಕಾಯಕವನ್ನು ಮುನ್ನಡೆಸಬೇಕು ಎಂಬ ನೆಲೆಯಲ್ಲಿ. ಈ ಹಿನ್ನೆಲೆಯಲ್ಲಿ ಅಲ್ಲಮನ ಲಿಂಗ, ಕಾಯಕ, ಭಕ್ತಿ, ಆಧ್ಯಾತ್ಮಗಳನ್ನು ಪ್ರತ್ಯೇಕವಾಗಿಯೇ ಅಭ್ಯಸಿಸಬೇಕು. ಬಿ.ವಿ. ವಸಂತಕುಮಾರ ಅವರು ಮಾತ್ರ ಇಂತಹ ತಾತ್ವಿಕತೆಯ ಅಂಚನ್ನು ಸುಳಿಯದೆ ಹೋಗುತ್ತಾರೆ. ಸ್ವತಃ ಮಹಾಶೂದ್ರನಾದ ಅಲ್ಲಮ ಅವರಿಗೆ ಅವಧೂತನಂತೆ ಕಾಣುತ್ತಾನೆ. ಈ ಹಿನ್ನೆಲೆಯಲ್ಲಿ ಜನಪದ ಅವಧೂತ, ಸಿದ್ಧ ಸನ್ಯಾಸಿಗಳ ಪರಂಪರೆಯನ್ನೂ ನೋಡಬೇಕು. ಬಸವಣ್ಣನವರ ವಿಚಾರವನ್ನು ಲೇಖಕರು ಇಡೀ ಕೃತಿಯಲ್ಲಿ ಇಂತಹ ದ್ವಂದ್ವಮಾನದಲ್ಲಿಯೇ ನೋಡುತ್ತಾರೆ. ವಚನ ಧರ್ಮವನ್ನು ಬಸವ ಧರ್ಮವೆಂದು ಕರೆಯುವುದನ್ನು ಆಕ್ಷೇಪಿಸುತ್ತಾರೆ. ಈ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಕಾಯಕವನ್ನು ಕುರಿತ ಹಿನ್ನೆಲೆಯಲ್ಲಿ ಬಸವಣ್ಣನ ಕುರಿತ ಅವರ ವ್ಯಾಖ್ಯಾನ ತೀರ ಬಾಲಿಶವಾದುದು. ಇದು ಲೇಖಕರು ಕೇವಲ ದೈಹಿಕ ಶ್ರಮದಿಂದ ಮಾತ್ರ ಸಾಧ್ಯ. ಕಾಯಕ ಬುದ್ಧಿಯಿಂದಲ್ಲ ಎಂಬ ನೆಲೆಯಿಂದ ಹುಟ್ಟಿದ್ದು. ಈ ಹಿನ್ನೆಲೆಯಲ್ಲಿ ಬಸವಣ್ಣ ಮಾಡುವ ಕಾಯಕ ಬುದ್ಧಿಯದ್ದೇ ಆದುದರಿಂದ ಅದು ಶ್ರಮವಲ್ಲ ಎಂಬುದು ಕೃತಿಯ ನಿಲುವು. ಈ ಕಾರಣದಿಂದಲೇ ಅಲ್ಲಮ ಮತ್ತು ಬಸವಣ್ಣ ಇವರಿಗೆ ವಿಭಿನ್ನವಾಗಿ ಕಾಣುತ್ತಾರೆ. ಆದರೆ ಬಸವಣ್ಣ ಕಾಯಕದ ಮೂಲಕ ರೂಪುಗೊಳ್ಳುತ್ತಿದ್ದ ಜಾತಿಯ ಸಮೀಕರಣವನ್ನು ಮುರಿಯಲು ಯತ್ನಿಸಿದ್ದ ಮತ್ತು ಅದನ್ನು ಆಧ್ಯಾತ್ಮದ, ಭಕ್ತಿಯ ತುತ್ತತುದಿಗೆ ಏರಿಸಿದ್ದ. ತನ್ಮೂಲಕ ದೇವರ ದೃಷ್ಟಿಯಲ್ಲಿ ಎಲ್ಲವೂ ಸಮಾನ ಮತ್ತು ಶ್ರೇಷ್ಠವೆಂದು ಪ್ರತಿಪಾದಿಸಿದ್ದ. ಹಾಗೆ ನೋಡಿದರೆ ಅಲ್ಲಮನಿಗೆ ಸಾಧ್ಯವಾದ ಅಖಂಡ ಪ್ರಜ್ಞೆ ಮತ್ತು ಬಹುಮುಖಿ ಸಂಸ್ಕೃತಿಯ ನೆಲೆ ಬಸವಣ್ಣನಿಗೆ ಅಲ್ಲ? ಬೇರೆ ಯಾವ ವಚನಕಾರರಿಗೂ ದಕ್ಕಲಿಲ್ಲ. ಅಲ್ಲಮ ಎಲ್ಲರನ್ನು ಜ್ಞಾನಮುಖಿಯಾಗಿಸುತ್ತ ತಮ್ಮ ವೈವಿಧ್ಯ ಕಾಯಕ ಸಂಸ್ಕೃತಿಯನ್ನು ಪ್ರತಿಲೋಮ ಸಂಸ್ಕೃತಿಯೆಂದು ಪ್ರತಿಪಾದಿಸುತ್ತ ಬಹುಮುಖಿ ಆರಾಧನೆಯನ್ನು ಮತ್ತು ಸಂಸ್ಕೃತಿಯನ್ನು ಆತ ಬೆಂಬಲಿಸಿದ್ದ. (ಈ ಹಿನ್ನೆಲೆಯಲ್ಲಿ ಅವನ ಲಿಂಗದ ಪರಿಕಲ್ಪನೆ ಗಮನಿಸಬೇಕು) ಆದರೆ ಬಸವಣ್ಣ ಮುಂತಾದ ವಚನಕಾರರಿಗೆ ಏಕ ಸಂಸ್ಕೃತಿ ಮತ್ತು ಏಕದೇವತಾರಾಧನೆ ಮುಖ್ಯವಾಗಿ ಕಂಡಿತ್ತು. ಇಂತಹ ಸರಿಯಲ್ಲದ ಅನೇಕ ಸಂಗತಿಗಳು ಬಸವಣ್ಣನಲ್ಲಿದ್ದರು ಅದನ್ನು ಅವನು ಸ್ವತಃ ಅವುಗಳನ್ನು ಮೀರಲೆತ್ನಿಸುತ್ತಾನೆ ಮತ್ತು ಸ್ವತಃ ದಾಖಲಿಸುತ್ತಾನೆ. ಆತನದು ಅಪ್ಪಟ ಪ್ರಾಮಾಣಿಕ ಮನಸ್ಸು,

ಈ ಹಿನ್ನೆಲೆಯಲ್ಲಿ ಬಸವಣ್ಣನ ದಾಸೋಹ ಸಂಗತಿಯನ್ನು ಗಮನಿಸಬೇಕು.

ಕೃತಿಯಲ್ಲಿ ಕಾಯಕಜೀವಿಗಳನ್ನು ಕುರಿತು ಬರೆಯುವಾಗ ಲೇಖಕರು ಆಯ್ದಕ್ಕಿ ಮಾರಯ್ಯ ದಂಪತಿಗಳನ್ನು ಕುರಿತು ತುಂಬಾ ವಿಸ್ತೃತವಾಗಿ ಬರೆದಿದ್ದಾರೆ. ಆದರೆ ಆಯುವ ಕ್ರಿಯೆಯಲ್ಲಿ ಕಾಯಕವೆಲ್ಲಿ ಅಡಗಿದೆ. ಅದು ಸೋಮಾರಿಯ ನೀಚ ಲಕ್ಷಣ. (ಇತ್ತೀಚೆಗೆ ಆಯದ (ತೆರಿಗೆ) ಅಕ್ಕಿ ಎಂದು ವ್ಯಾಖ್ಯಾನಿಸಿದ್ದಾರೆ) ಮತ್ತು ಇಂತಹ ಸಂಗತಿಯನ್ನು ವ್ಯಾಖ್ಯಾನಿಸುವ ರೀತಿ ಸ್ತುತಿ ಕೂಡ ಪಡೆದಿರುವುದು ಇನ್ನಷ್ಟು ಆಯುವ, ಬೇಡುವವರನ್ನು ಹೆಚ್ಚಿಸಿದಂತೆ ಅಲ್ಲವೆ. ಸೂಳೆಸಂಕವ್ವನ ಕಾಯಕದ ಬಗ್ಗೆ ವಿದ್ವಾಂಸರ ನಿಲುವೇನು, ಇವನ್ನೆಲ್ಲ ನೋಡಲು ಸಮಾಜೋ ಧಾರ್ಮಿಕ ರಾಜಕೀಯ ದೃಷ್ಟಿಕೋನ ಲೇಖಕನಿಗೆ ಬೇಕು. ಈ ಪ್ರಬುದ್ಧತೆ ಇಲ್ಲದೆ ಇದ್ದರೆ ಇಂತಹ ಕೃತಿಗಳು ರಚನೆಯಾಗುತ್ತವೆ.

ಕೃತಿಯ ಎರಡನೆ ಅಧ್ಯಾಯದಲ್ಲಿ ಲೇಖಕರು ಕಾಯಕತತ್ವವನ್ನು ಕುರಿತು ವ್ಯಕ್ತವಾಗಿರುವ ಜಿಜ್ಞಾಸೆ ಕೂಡ ಲೇಖಕರ ಅಪಕ್ವತೆಯನ್ನೂ ತೋರಿಸುತ್ತದೆ. ಶ್ರೀಯುತ ಪಿ.ವಿ. ನಾರಾಯಣ್, ಕಿ.ರಂ. ನಾಗರಾಜು ಅವರ ಲೇಖನಗಳನ್ನು ಅರ್ಥೈಸಿಕೊಂಡಿರುವ ರೀತಿ ಇದಕ್ಕೆ ದ್ಯೋತಕವಾಗಿದೆ. ಮೂರನೆಯ 'ಹರಿಹರನ ರಗಳೆ'ಗಳಲ್ಲಿ ಕಾಯಕ ಎಂಬ ಅಧ್ಯಾಯದಲ್ಲಿ ಅಮರ ನೀತಿ, ಮಾದಾರ ಚೆನ್ನಯ್ಯ, ಕುಂಬಾರ ಗುಂಡಯ್ಯ, ಇಳೆಯಾಂಡ ಗುಡಿಮಾರ ಮುಂತಾದ ರಗಳೆಗಳನ್ನು ಗುರುತಿಸಿ ಕಾಯಕ ಮೀಮಾಂಸೆಯನ್ನು ವಿವರಿಸಲು ಲೇಖಕರು ಪ್ರಯತ್ನಿಸುತ್ತಾರೆ. ಈ ಸಂದರ್ಭದಲ್ಲಿ ನನ್ನ ಮುಖ್ಯ ಪ್ರಶ್ನೆಯೆಂದರೆ ಹರಿಹರನ ಅಖಂಡ ಪ್ರಜ್ಞೆಯಿಂದ, ಅಭಿವ್ಯಕ್ತಿ ಕ್ರಮದಿಂದ ಈ ರಗಳೆಗಳು ಹೊರತಾದುವುವೇ ಮತ್ತು ಅದು ಸಾಧ್ಯವೇ? ಹರಿಹರನ ಪ್ರಕಾರ ಬಹುತೇಕ ರಗಳೆಯ ನಾಯಕರು ಕೈಲಾಸದಲ್ಲಿ ತಪ್ಪು ಮಾಡಿ ಬಂದ ಗಣಗಳು, ಇಲ್ಲಿ ಪರಿಶುದ್ಧರಾಗಿ ಮತ್ತೆ ಕೈಲಾಸಕ್ಕೆ ಹೋಗುವವರು. ಇದರ ಮೂಲಕ ಪ್ರತಿಪಾದಿತವಾಗುವ ಆತನ ತಾತ್ವಿಕ ನಿಲುವು ಎಂತದ್ದು. ಹರಿಹರ ಸೃಷ್ಟಿಸುವ ಪವಾಡಗಳ ನಿಲುವು ಈ ಲೇಖಕರು ಪ್ರತಿಪಾದಿಸುವ ನಿಲುವಿಗಿಂತ ಬೇರೆಯವೇ. ಇದನ್ನಿಲ್ಲಿ ಗುರುತಿಸಿಕೊಳ್ಳುವಲ್ಲಿ ಲೇಖಕರಿಗೆ ಸಾಧ್ಯವಾಗಿಲ್ಲ. ಅವರು ಮಾದಾರ ಚೆನ್ನಯ್ಯನ ರಗಳೆಯಲ್ಲಿ ಆತನ ಕಾಯಕವನ್ನು ಆತ್ಯಂತಿಕವಾಗಿ ಪ್ರತಿಪಾದಿಸಿದ್ದಾರೆ. ಅದನ್ನು ಪ್ರತಿಪಾದಿಸುವ ಹರಿಹರನೇ ಅಂತಹ ದೈಹಿಕ ಪರಿಶ್ರಮದ ಕಾಯಕ ಮಾಡುತ್ತಿರಲಿಲ್ಲ. ಈ ದ್ವಂದ್ವವನ್ನು ಲೇಖಕರು ಪರಿಹರಿಸಿಕೊಳ್ಳಲು ಹೋಗುವುದೇ ಇಲ್ಲ. ಕಾರಣ ಅವರಲ್ಲಿ ಸರಿಯಾಗಿ ರೂಪುಗೊಳ್ಳದೆ ಇರುವ ತಾತ್ವಿಕತೆ. ಹರಿಹರನ ರಗಳೆಗಳನ್ನು ಸಮಗ್ರವಾಗಿ ಓದುವಾಗ ಮಾದಾರ ಚೆನ್ನಯ್ಯನ ಮನೆಗೆ ಕರಿಕಾಲ ಚೋಳ ಬರುವುದು! ಬಸವಣ್ಣನನ್ನು ಬಸವರಾಜನೆನ್ನುವುದು, ಸಾಮವೇದಿ ರಗಳೆ ಬರೆಯುವುದು - ಇವುಗಳನ್ನೆಲ್ಲ ಆಮೂಲಾಗ್ರವಾಗಿ ಗ್ರಹಿಸಬೇಕು. ಹರಿಹರನ ನಿಲುವು ಸಾಮಾಜೋಧಾರ್ಮಿಕ ಸ್ವರೂಪದ್ದು. ಅದನ್ನು ಸರಿಯಾಗಿ ಗುರುತಿಸಿಕೊಳ್ಳಲು ಕೃತಿ ವಿಫಲವಾಗಿದೆ.

ನಾಲ್ಕನೆಯ ವಚನಕಾರರ ಜೀವನ ಕಥೆಗಳಲ್ಲಿ ಕಾಯಕ ಎಂಬ ಅಧ್ಯಾಯದಲ್ಲಿ ದೇವರ ದಾಸಿಮಯ್ಯ, ಘಟ್ಟಿವಾಳಯ್ಯ, ಆಯ್ದಕ್ಕಿ ಲಕ್ಕಮ್ಮನ ಕಥೆಗಳ ಐತಿಹ್ಯವನ್ನು ಪ್ರಧಾನ ನೆಲೆಯಲ್ಲಿ



ಲೇಖಕರು ಚರ್ಚಿಸುತ್ತಾರೆ. ದೇವರ ದಾಸಿಮಯ್ಯನಿಗೆ ಬಸವಣ್ಣ ಆದರ್ಶವೆನ್ನುತ್ತಾರೆ. (ಪುಟ 73) ಅದರ ಕೃತಿಯಲ್ಲಿ ಲೇಖಕರೆ ಬಸವಣ್ಣನಿಗೆ ಕಾಯಕ ಜೀವಿಗಳೇ ಮಾದರಿ ಎನ್ನುತ್ತಾರೆ. ಇದಕ್ಕಿಂತಲೂ ಮುಖ್ಯ ಸಂಗತಿಯೆಂದರೆ ಈ ಅಧ್ಯಾಯದಲ್ಲಿನ ಬಹುತೇಕ ಐತಿಹ್ಯ ಹರಿಹರ ಮುಂತಾದ ಕವಿಗಳ ಕೃತಿಗಳಲ್ಲಿ ವ್ಯಕ್ತವಾಗಿರುವ ಮಿಥ್‌ಗಳನ್ನೂ ಆಧರಿಸಿದ್ದು, ಕೃತಿ ಇದನ್ನು ನಿಜದ ನೆಲೆಯಲ್ಲಿಯೇ ವ್ಯಾಖ್ಯಾನಿಸುತ್ತಾರೆ. ಮತ್ತೆ ನಾನು ಉಲ್ಲೇಖಿಸುವುದಾದರೆ ಇದೆಲ್ಲವು ಮುಂದೆ ವಚನ ಚಳವಳಿಯ ನಂತರ ಕೇಂದ್ರ ಪ್ರಧಾನ ಸಂಸ್ಕೃತಿ ಸೃಷ್ಟಿಸಿದ ಮಿಥ್‌ಗಳು ಮತ್ತು ತನಗೆ ಬೇಕಾದಂತೆ ವ್ಯಾಖ್ಯಾನಿಸಿಕೊಂಡ ರೀತಿಗಳು ಅಷ್ಟೆ. ಐದನೆಯ ಅಧ್ಯಾಯದಲ್ಲಿ ಜನಪದರು ತಮ್ಮ ನಡುವಿನ ವಚನಕಾರರನ್ನು ಕುರಿತು ಜಾನಪದ ಹಾಡುಗಳ ಮೂಲಕ ಪುನರಚಿಸಿಕೊಂಡಿರುವ ಸಂಗತಿಯನ್ನು ಚರ್ಚಿಸುತ್ತಾರೆ. ಈ ಅಧ್ಯಾಯ ತುಂಬಾ ಮಹತ್ವದ್ದು. ಎಲ್ಲ ಸಂದರ್ಭದಲ್ಲಿ ಅಂಚಿನ ಮತ್ತು ಪ್ರಧಾನ ಸಂಸ್ಕೃತಿಗಳು ಪ್ರತ್ಯೇಕವಾಗಿ ಕಟ್ಟಿಕೊಳ್ಳುವ ಈ ಚರಿತ್ರೆ ತುಂಬ ಮಹತ್ವದ್ದು. ಮಹಾಭಾರತವನ್ನು ಕುರಿತು ಪಂಪ, ರನ್ನ, ಕುಮಾರವ್ಯಾಸರಂತ ಕೇಂದ್ರ ಸಂಸ್ಕೃತಿಯ ಜನರು ಕಟ್ಟಿಕೊಡುವ ಚರಿತ್ರೆಗೂ, ಜನಪದರು ಕಟ್ಟಿಕೊಡುವ ಮಹಾಭಾರತದ ಚರಿತ್ರೆಗೂ ಇರುವ ವೈರುಧ್ಯವನ್ನು ಗಮನಿಸಲೇಬೇಕು. ಇದು ಈ ಶತಮಾನದ ಮುಖ್ಯ ಆಶಯವೆಂದು ನಾನು ಭಾವಿಸಿದ್ದೇನೆ. ಅಂತೆಯೇ ವಚನ ಚರಿತ್ರೆಯನ್ನು ಹರಿಹರ, ಚಾಮರಸಾದಿ ಲೇಖಕರಿಗಿಂತ ಜನಪದ ಕಾವ್ಯಗಳ ಹಿನ್ನೆಲೆಯಲ್ಲಿ ಕಟ್ಟಿಕೊಡಬೇಕಾಗಿದೆ. ಒಟ್ಟು ಕನ್ನಡ ಸಾಹಿತ್ಯ ಚರಿತ್ರೆಯನ್ನು ಈ ನಿಟ್ಟಿನಲ್ಲಿ ಪುನರೂಪಿಸಿಕೊಳ್ಳಬೇಕು.

ಡಾ. ಬಿ.ವಿ. ವಸಂತಕುಮಾರ ಅವರು 'ಕಾಯಕ ಮೀಮಾಂಸೆ' ಎಂದು ಕೃತಿಯನ್ನು ಹೆಸರಿಸಿರುವುದೇ ಅದರ ತಾತ್ವಿಕತೆ ಮತ್ತು ಅಭಿವ್ಯಕ್ತಿಗೆ ಸಾಕ್ಷಿಯಾಗಿದೆ. "ಇದು ಬುದ್ಧಿಯ ಸಂಶೋಧನೆಯಲ್ಲ ಇದು ಭಾವದ ನಿವೇದನೆ" ಎಂಬ ಅವರ ಮಾತು ಕಾಯಕ ಮೀಮಾಂಸೆ ಅಭಿವ್ಯಕ್ತಿ ಸ್ವರೂಪದ್ದೇ ಹೊರತು ತತ್ವದಲ್ಲವೆಂಬುದನ್ನೂ ಸ್ಪಷ್ಟಪಡಿಸುತ್ತದೆ. ಈ ಮೀಮಾಂಸೆ ಸಂಗತಿಯೇ ಹಾಗೆ. ಒಟ್ಟು ಭಾರತೀಯ ಕಾವ್ಯಮೀಮಾಂಸೆಯೂ ಕೂಡ ಕಾವ್ಯದ ಪರಿಕರದ ಬಗ್ಗೆ ಚರ್ಚಿಸುತ್ತದೆ, ತಾದಾತ್ಮ್ಯದಿಂದ ಚಿಂತಿಸುತ್ತದೆ. ಆದರೆ ಕಾವ್ಯದ ವಸ್ತುವಿನ ಬಗ್ಗೆ ಏನನ್ನು ಹೇಳುವುದಿಲ್ಲ. ಅಂತೆಯೇ ಇಲ್ಲಿನ ಕಾಯಕ ಮೀಮಾಂಸೆ ಕೂಡ ಪರಿಕರ ಸ್ವರೂಪದ್ದು. ವಸ್ತುದರ್ಶನದ ಸಂಗತಿಯದಲ್ಲ. ಈ ಹಿನ್ನೆಲೆಯಲ್ಲಿ ಒಟ್ಟು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾಯಕವನ್ನು ಗ್ರಹಿಸುವ ಕ್ರಮಗಳನ್ನು ಕುರಿತು ಚಿಂತಿಸಬೇಕಾಗಿದೆ. ಈ ಕಾಯಕ ಮೀಮಾಂಸೆ ಕೃತಿ ಅಂತಹ ಯೋಚನೆಗೆ ಒಂದು ಸಣ್ಣ ಕಾರಣವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

□

# ವಾರ್ತಾವಿಹಾರ

## ಜ್ಯೋತಿಷ್ಯಶಾಸ್ತ್ರ ನಮ್ಮ ಪರಂಪರೆಯ ಒಂದು ಭಾಗ

ದಿನಾಂಕ 1.5.2009 ರಂದು ಬೆಂಗಳೂರಿನಲ್ಲಿ ನಡೆದ ಮೂರು ದಿನಗಳ ಅಂತಾರಾಷ್ಟ್ರೀಯ ಜ್ಯೋತಿಷ್ಯ ಸಮ್ಮೇಳನದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡಿದರು. ಜ್ಯೋತಿಷ್ಯ ಶಾಸ್ತ್ರವು ನಮ್ಮ ಪರಂಪರೆಯ ಒಂದು ಭಾಗ. ಅದೂ ಸಹ ಒಂದು ಶುದ್ಧ ವಿಜ್ಞಾನವೇ ಆಗಿದೆ. ಆದರೆ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಕೆಲವರಿಂದ ಅದಕ್ಕೆ ಅಪಾರ್ಥಗಳು ಕಲ್ಪಿತವಾಗಿವೆ ಎಂದು ಪರಮಪೂಜ್ಯರು ತಿಳಿಸಿದರು.

ವೈದ್ಯಕೀಯ ಶಿಕ್ಷಣ ಸಚಿವ ಶ್ರೀ ರಾಮಚಂದ್ರಗೌಡ, ಗ್ರಾಮೀಣಾಭಿವೃದ್ಧಿ ಸಚಿವೆ ಕು. ಶೋಭಾ ಕರಂದ್ಲಾಜೆ, ಶ್ರೀ ಮುಖ್ಯಮಂತ್ರಿ  ಚಂದ್ರು ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹಿರಿಯ ಜ್ಯೋತಿಷಿ ಶ್ರೀ ಪಿ.ಎಸ್. ವಾಸನ್ ಅವರನ್ನು ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿಯವರು ಸನ್ಮಾನಿಸಿದರು.

## ಸ್ವವಿಮರ್ಶ ಪ್ರಜ್ಞೆಯೇ ಇಂದು ಮಾಯವಾಗುತ್ತಿದೆ

ದಿನಾಂಕ 2.5.2009 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬಸವ ವೇದಿಕೆ ಹಮ್ಮಿಕೊಂಡಿದ್ದ. 'ಬಸವ ಜಯಂತಿ' ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಪೂಜ್ಯರು ಮಾತನಾಡುತ್ತಿದ್ದರು. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪೂಜ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರಿಗೆ 'ಬಸವಶ್ರೀ' ಪ್ರಶಸ್ತಿಯನ್ನು ಪ್ರಧಾನಮಾಡಿ ಮಾತನಾಡುತ್ತಿದ್ದ ಪೂಜ್ಯರು ಸ್ವವಿಮರ್ಶೆಯ ಪ್ರಜ್ಞೆಯೇ ಇಂದು ಮಾಯವಾಗುತ್ತಿದ್ದು ತನ್ನ ಬಣ್ಣಿಸಬೇಡ ಇದಿರ ಅಳಿಯಬೇಡ ಎಂಬ ವಚನ ಪಾಲಿಸುವುದಾದರೆ ರಾಜಕಾರಣಿಗಳಿಗೆ ಮಾತನಾಡಲು ಏನೂ ಉಳಿಯುವುದಿಲ್ಲ. ಮನುಷ್ಯ ತನ್ನನ್ನು ತಾನು ಆತ್ಮವಿಮರ್ಶೆ ಮಾಡಿಕೊಳ್ಳುವುದು ಮುಖ್ಯ ಎಂದರು.

ಪಾರದರ್ಶಕ ಜೀವನ, ಸ್ತ್ರೀಯರನ್ನು ಸಮಾಜದ ಮುಖ್ಯಸ್ತರಕ್ಕೆ ತಂದ ಬಸವಣ್ಣನವರು ಧರ್ಮ ಪ್ರತಿಪಾದನೆಯಲ್ಲಿ ವೈಜಾರಿಕತೆಯ ಅಗತ್ಯವನ್ನು ಪ್ರತಿಪಾದಿಸಿದರು. ಮನುಷ್ಯ ತನ್ನ ನಡವಳಿಕೆಯಿಂದ ಹೇಗೆ ಭಗವಂತನೆಡೆಗೆ ಸಾಗಬಹುದೆಂಬುದಕ್ಕೆ ಬಸವಣ್ಣನವರ ಬದುಕೇ ಸಾಕ್ಷಿ ಎಂದು ಶ್ರೀಗಳು ತಿಳಿಸಿದರು.

'ಬಸವಶ್ರೀ ಪ್ರಶಸ್ತಿ'ಯನ್ನು ಸ್ವೀಕರಿಸಿದ ಶ್ರೀ ವೀರೇಂದ್ರ ಹೆಗ್ಗಡೆಯವರು ಮಾತನಾಡಿ ಹುಟ್ಟಿನಿಂದಲೇ ಯಾರೂ ಮಹಾತ್ಮರಾಗುವುದಿಲ್ಲ, ಗಾಂಧೀಜಿಯವರು ಸಹ ಬಸವಣ್ಣನವರಂತೆ ಸರಳತೆ ಮತ್ತು ಸಾಧನೆಯಿಂದ ಮಹಾತ್ಮರೆನಿಸಿಕೊಂಡರು. 800 ವರ್ಷಗಳ ನಂತರವೂ



ಜನಮನಸ್ಸಿನಲ್ಲಿ ಇನ್ನೂ ಜೀವಂತವಾಗಿರುವ ಬಸವಣ್ಣನವರಂತಹ ಮಹಾತ್ಮ ಇನ್ನೊಬ್ಬರಿಲ್ಲ ಎಂದರು.

ಸಮಾರಂಭದಲ್ಲಿ ನ್ಯಾಯಮೂರ್ತಿ ಶ್ರೀ ಕೆ.ಎಲ್. ಮಂಜುನಾಥ್, ಬೆಂಗಳೂರು ವಿ.ವಿ. ಕುಲಪತಿ ಡಾ. ಎನ್. ಪ್ರಭುದೇವ್, ಕೃಷಿ ಇಲಾಖೆ ಆಯುಕ್ತ ಡಾ. ಸಿ. ಸೋಮಶೇಖರ್, ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಎಲ್ಲ ಧರ್ಮಗಳು ಭಾರತೀಯ ಸಂಸ್ಕೃತಿಯ ಮೂಲ

ಎಲ್ಲ ಧರ್ಮಗಳು ಭಾರತೀಯ ಸಂಸ್ಕೃತಿಯ ಮೂಲವಾಗಿದೆ ಎಂದು ಪರಮಪೂಜ್ಯರು ಅಭಿಪ್ರಾಯಪಟ್ಟರು.

ಚಾಮರಾಜನಗರ ತಾಲ್ಲೂಕಿನ ನಾಗವಳ್ಳಿ ಗ್ರಾಮದಲ್ಲಿ ದಿನಾಂಕ 7.5.2009ರಂದು ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದ ಸಂಪ್ರೋರಕ್ಷಣಾ ಹಾಗೂ ವಿಮಾನ ಗೋಪುರ ಕಳಸಾರೋಹಣ ಕಾರ್ಯಕ್ರಮದ ನಂತರ ಏರ್ಪಡಿಸಿದ್ದ ಧಾರ್ಮಿಕ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ಜಗದ್ಗುರುಗಳವರು ಮಾತನಾಡಿದರು.

ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಧರ್ಮಗಳು ಸಹ ಮನುಷ್ಯನ ಪ್ರಗತಿಯನ್ನು ಬಯಸುತ್ತವೆ. ಇನ್ನೊಂದು ಧರ್ಮವನ್ನು ದ್ವೇಷಿಸುವಂತೆ ಯಾವ ಧರ್ಮವೂ  ಹೇಳುವುದಿಲ್ಲ. ಎಲ್ಲ ಧರ್ಮಗಳು ಮನುಷ್ಯನ ಶ್ರೇಯೋಭಿವೃದ್ಧಿಗೆ ಬದ್ಧವಾಗಿವೆ. ಅವುಗಳ ಆಚರಣೆಯಲ್ಲಿರುವ ತಪ್ಪು ಗ್ರಹಿಕೆಯಿಂದ ಸಮಾಜದಲ್ಲಿ ಅಶಾಂತಿ ವಾತಾವರಣ ಉಂಟಾಗುತ್ತಿದೆ ಎಂದು ಶ್ರೀಗಳು ವಿಷಾದಿಸಿದರು.

ಎಲ್ಲ ಧರ್ಮಗಳು ಭಾರತೀಯ ಸಂಸ್ಕೃತಿಯ ಮೂಲವಾಗಿವೆ. ಬುದ್ಧ, ಬಸವ ಮೊದಲಾದ ಸಂತರು ತಮ್ಮದೇ ಆದ ಧಾಟಿಯಲ್ಲಿ ಧರ್ಮಬೋಧನೆ ಮಾಡಿದ್ದಾರೆ ಎಂದು ಅಭಿಪ್ರಾಯಪಟ್ಟ ಶ್ರೀಗಳು, ಮನುಷ್ಯನಲ್ಲಿರುವ ಲೋಪಗಳನ್ನು ಗೆಲ್ಲುವ ಶಕ್ತಿ ಧರ್ಮಕ್ಕೆ ಇದೆ. ಧರ್ಮ ಆಚರಣೆ ಮಾಡುವುದರಿಂದ ಸುಖ, ಶಾಂತಿ ಹಾಗೂ ನೆಮ್ಮದಿ ದೊರೆಯುತ್ತದೆ. ಧರ್ಮವನ್ನು ಆಚರಿಸುವ ವೇಳೆಯಲ್ಲಿ ಶ್ರೇಷ್ಠವಾದ ವಿಷಯ ಮಂಡಿಸುವಾಗ ಬೇರೆ ಧರ್ಮದ ಬಗ್ಗೆ ತಪ್ಪು ಸಂದೇಶ ರವಾನೆಯಾಗುತ್ತದೆ. ಆ ತಪ್ಪು ಗ್ರಹಿಕೆಯನ್ನು ಹೋಗಲಾಡಿಸಲು ಎಲ್ಲರೂ ಸಹ ಸತ್ಯವನ್ನು ಹೇಳಬೇಕಾಗಿದೆ. ಆ ಮೂಲಕ ಅಶಾಂತಿಯನ್ನು ಹೋಗಲಾಡಿಸಬೇಕು.

ದೇವಸ್ಥಾನಗಳು ದಾರ್ಮಿಕ ಕೇಂದ್ರಗಳಾಗಬೇಕು. ಹಿರಿಯರ ನಡೆ-ನುಡಿಗಳನ್ನು ಮಕ್ಕಳು ಅನುಕರಣೆ ಮಾಡುವುದರಿಂದ ಹಿರಿಯರು ದೇವಸ್ಥಾನಗಳು ಮತ್ತು ಸಂತರನ್ನು ಕಂಡರೆ ಗೌರವದಿಂದ ಕಾಣಬೇಕು. ಆಗ ಮಕ್ಕಳು ಸಹ ತಮ್ಮ ದಾರಿಯಲ್ಲೇ ನಡೆಯುತ್ತಾರೆ ಎಂದರು.

ಕನಕಪುರ ದೇಗುಲ ಮಠದ ಕಿರಿಯ ಶ್ರೀಗಳಾದ ಮಹಾಲಿಂಗಸ್ವಾಮೀಜಿ, ಚಾಮರಾಜನಗರ ಮಠದ ಶ್ರೀ ಸಿದ್ಧಬಸವರಾಜಸ್ವಾಮಿಗಳು, ಮಾದಾಪಟ್ಟಣ ಮಠದ ಶ್ರೀಗಳಾದ ಸದಾಶಿವಸ್ವಾಮಿಗಳು, ರೇಚಂಬಳ್ಳಿ ಮಠದ ಮಹಾದೇವ ಸ್ವಾಮಿಗಳು, ಅಖಿಲ

ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್. ನಾಗರಾಜಪ್ಪ, ತಾಲ್ಲೂಕು ಘಟಕದ ಅಧ್ಯಕ್ಷ ನಟೇಶ್, ಗ್ರಾಮದ ಮುಖಂಡರಾದ ಚೇ. ಗುರುಮಲ್ಲಪ್ಪ, ಮಹದೇವಪ್ಪ, ವೀರಭದ್ರಸ್ವಾಮಿ, ಬಸಪ್ಪ, ಪುಟ್ಟಸ್ವಾಮಿ, ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

**ಸುತ್ತೂರು ಶ್ರೀಕ್ಷೇತ್ರಕ್ಕೆ ರಾಷ್ಟ್ರಪತಿಗಳ ಭೇಟಿ**

ದಿನಾಂಕ 9.5.2009 ಸುತ್ತೂರಿನ ಪಾಲಿಗೆ ಒಂದು ಐತಿಹಾಸಿಕ ದಿನ. ಅಂದು ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್‌ರವರು ಸುತ್ತೂರು ಕ್ಷೇತ್ರಕ್ಕೆ ಮೊತ್ತಮೊದಲ ಭೇಟಿ ನೀಡಿದರು. ಅಂದು ಅವರು ಸುತ್ತೂರಿನ ಉಚಿತ ಶಾಲೆಯ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯದ ಕಟ್ಟಡವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಅವರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ರಜತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ "ಸಮರ್ಥ ಗ್ರಾಮೀಣ ಆರೋಗ್ಯಾಭಿವೃದ್ಧಿ" ವಿಚಾರ ಸಂಕಿರಣಕ್ಕೆ ಚಾಲನೆ ನೀಡಿದರು. ರಾಜ್ಯಪಾಲರಾದ ಶ್ರೀ ರಾಮೇಶ್ವರ ಠಾಕೂರ್ ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮತ್ತು ಸಿದ್ಧಗಂಗಾ ಶ್ರೀಕ್ಷೇತ್ರದ ಡಾ. ಶಿವಕುಮಾರ ಸ್ವಾಮೀಜಿಯವರ ದಿವ್ಯ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆಯಿತು. ಭಾಷಣದ ಕೆಲವು ಆಯ್ದ ಭಾಗಗಳು ಹೀಗಿವೆ:

"ಗ್ರಾಮೀಣ ಅಭಿವೃದ್ಧಿ ಮತ್ತು ಆರೋಗ್ಯ ಸೌಲಭ್ಯಗಳು ನಮ್ಮ ಎಲ್ಲ ಗ್ರಾಮಗಳಿಗೂ ತಲುಪುವಂತೆ ಮಾಡಲು ರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ಕ್ರಮ ಹಾಗೂ ಸತತ ಪ್ರಯತ್ನ ಕೈಗೊಳ್ಳಬೇಕಾದುದು ಇಂದಿನ ಆದ್ಯತೆಯಾಗಿದೆ" ಎಂದು ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್ ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಉಚಿತ ಶಾಲೆಯ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡ ಮತ್ತು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ರಜತಮಹೋತ್ಸವದ ಅಂಗವಾಗಿ "ಸಮರ್ಥ ಗ್ರಾಮೀಣ ಆರೋಗ್ಯಾಭಿವೃದ್ಧಿ" ವಿಚಾರಸಂಕಿರಣವನ್ನು ದಿನಾಂಕ 9.5.2009 ರಂದು ಸುತ್ತೂರು ಶ್ರೀಕ್ಷೇತ್ರದ ಶಾಲಾ ಆವರಣದಲ್ಲಿ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಂದುವರಿದು ಅವರು "ಸ್ವಾತಂತ್ರ್ಯಾನಂತರ ಭಾರತವು ಆರೋಗ್ಯ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದು, ಅವುಗಳಿಂದ ಜನರ ಆಯುಷ್ಯ ವೃದ್ಧಿ ಮತ್ತು ಮಾರಕ ಖಾಯಿಲೆಗಳ ನಿರ್ಮೂಲನ ಕಾರ್ಯವು ನಡೆಯುತ್ತಿರುವುದು ಸಂತೋಷದ ಸಂಗತಿ. ಪರಿಪೂರ್ಣ ಆರೋಗ್ಯ ರಕ್ಷಣೆ ಎಲ್ಲರ ಹಕ್ಕಾದರೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸೌಲಭ್ಯವಂಚಿತ ಸಮಾಜಕ್ಕೆ ವೈದ್ಯಕೀಯ ಸೌಲಭ್ಯಗಳು ದೊರೆಯುವುದು ಅಷ್ಟು ಸುಲಭವಾಗಿಲ್ಲ. ಈ ಪರಿಸ್ಥಿತಿ ಶೀಘ್ರವೇ ಬದಲಾವಣೆ ಯಾಗಬೇಕು" ಎಂದು ಅವರು ಕಳಕಳಿ ವ್ಯಕ್ತಪಡಿಸಿದರು.

**ಶ್ರೀ ರಾಮೇಶ್ವರ ಠಾಕೂರ್**

"ಸುತ್ತೂರು ಶ್ರೀಮಠವು ಶಿಕ್ಷಣದ ಕ್ಷೇತ್ರದಲ್ಲಿ ಅನುಪಮವಾದ ಸಾಧನೆ ಮಾಡುತ್ತಿದ್ದು



ಶ್ರೀ ಬಸವೇಶ್ವರರು ಹಾಕಿಕೊಟ್ಟ ಅನನ್ಯವಾದ ಹಾದಿಯಲ್ಲಿ ಮುನ್ನಡೆಯುತ್ತಿದೆ. ಇಂದು ಉದ್ಘಾಟನೆಯಾಗಿರುವ ವಿದ್ಯಾರ್ಥಿನಿಲಯದಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ತುಂಬ ಉಪಯೋಗವಾಗುತ್ತದೆ. ಇದರಿಂದ ಹೆಣ್ಣುಮಕ್ಕಳು ಸಮಾನತೆ ಯನ್ನು ಗಳಿಸಿಕೊಂಡು ಸಮಾಜದ ಮುಖ್ಯ ವಾಹಿನಿಯಲ್ಲಿ ಬೆರೆಯಲು ಸಾಧ್ಯವಾಗುತ್ತದೆ" ಎಂದರು. ಸುತ್ತೂರಿನ 'ಮಾದರಿ ಆರೋಗ್ಯ ಗ್ರಾಮ' ಯೋಜನೆಯು ಗ್ರಾಮೀಣ ಆರೋಗ್ಯ ಕ್ಷೇತ್ರದಲ್ಲಿ ಒಂದು ವಿನೂತನ ಪ್ರಯೋಗವೆಂದು ಅವರು ಶ್ರೀಮಠವನ್ನು ಪ್ರಶಂಸಿಸಿದರು.

**ಶ್ರೀ ಬಿ.ಎಸ್. ಯಡಿಯೂರಪ್ಪನವರು**

ರಾಜ್ಯ ಸರ್ಕಾರವು ಇತ್ತೀಚೆಗೆ ಜಾರಿಗೆ ತಂದಿರುವ 'ಆರೋಗ್ಯ ಕವಚ' ಯೋಜನೆಯ ಅನ್ವಯ, ತುರ್ತು ಸಂದರ್ಭಗಳಲ್ಲಿ ಅಂಬ್ಯುಲೆನ್ಸ್ ಮತ್ತು ಚಿಕಿತ್ಸೆಗೆ ನೆರವು ದೊರೆಯುತ್ತಿದ್ದು ಕಳೆದ ಆರು ತಿಂಗಳಲ್ಲಿ ಸುಮಾರು 40,000 ಜನರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ನುಡಿದರು.

ಶಿಕ್ಷಣ ಕ್ಷೇತ್ರ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಜೆಎಸ್‌ಎಸ್ ಸಂಸ್ಥೆಯು ಹಲವಾರು ವಿಶೇಷ ಕ್ರಮಗಳನ್ನು ಕೈಗೊಂಡಿದೆ. ಸುತ್ತೂರು ಗ್ರಾಮಕ್ಕೆ ವಿಶೇಷ ಆರೋಗ್ಯ ಪ್ಯಾಕೇಜ್‌ನ ಲಾಭ ದೊರಕಿದೆ. ಗ್ರಾಮೀಣ ಆರೋಗ್ಯಾಭಿವೃದ್ಧಿಯ ಸಂಕಿರಣವು ಇಂಥ ಅನುಭವ ಗಳನ್ನು ಹಂಚಿಕೊಳ್ಳಲು ವೇದಿಕೆಯಾಗಲಿ ಎಂದು ಆಶಿಸಿದರು.

**ಪರಮಪೂಜ್ಯ ಶ್ರೀಗಳವರು**

12 ನೆಯ ಶತಮಾನದಲ್ಲಿ ಕರ್ನಾಟಕವು ಕಂಡ ಶರಣ ಚಳವಳಿಯು ಮಹಿಳಾ ಸಮಾನತೆಗೆ ಸಮರ್ಥವಾದ ವೇದಿಕೆಯನ್ನು ಪ್ರಾಯಶಃ ಮೊದಲ ಬಾರಿಗೆ ಒದಗಿಸಿತು. ಮಹಿಳೆ ಪುರುಷನಿಗೆ ಸಮಾನವಷ್ಟೇ ಅಲ್ಲ, ಅವಳು ಭಗವಂತನಿಗೆ ಸಮಾನ ಎಂಬ ಉದಾತ್ತ ನಿಲುವನ್ನು ಶಿವಶರಣರು ತಳೆದಿದ್ದರು.

ಅಮೆರಿಕದಂಥ ಮುಂದುವರಿದ ದೇಶ ಕೂಡ ಇದುವರೆಗೂ ಒಬ್ಬ ಮಹಿಳಾ ಅಧ್ಯಕ್ಷರನ್ನು ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ಆದರೆ ಭಾರತ ದೇಶ ಮಹಿಳೆಯೊಬ್ಬರನ್ನು ರಾಷ್ಟ್ರಪತಿಯಾಗಿ ಚುನಾಯಿಸಿದೆ. ಇದು ಸಾಮಾನ್ಯವಾದ ಸಾಧನೆಯಲ್ಲ. ಭಾರತದ ಇತಿಹಾಸದಲ್ಲಿ ಎಂದೂ ಮಹಿಳಾ ನಾಯಕತ್ವಕ್ಕೆ ಕೊರತೆ ಇಲ್ಲ. 12ನೆಯ ಶತಮಾನದ ಶರಣ ಚಳುವಳಿಯಲ್ಲಿ 35 ಜನ ಶರಣೆಯರು ಪಾಲ್ಗೊಂಡಿದ್ದರು ಎಂದು ನುಡಿದರು.

"ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಸುತ್ತೂರು ಮಠದ ಉಚಿತ ಶಾಲೆಯು ಬಡ ಮಕ್ಕಳ ಬದುಕನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಈ ಸಾಲಿನಲ್ಲಿ 463 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಂಡಿದ್ದರು. ಇವರಲ್ಲಿ 429 ಪಾಸಾಗಿದ್ದು, ಶೇಕಡ 50.ರಷ್ಟು ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ" ಎಂದು ತಿಳಿಸಿದರು.

**ಶ್ರೀ ಸಿದ್ಧಗಂಗಾ ಶ್ರೀಗಳವರು ಎಲ್ಲರನ್ನೂ ಆಶೀರ್ವದಿಸಿದರು**

ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವೆ ಕುಮಾರಿ ಶೋಭಾ ಕರಂದ್ಲಾಜೆ ಮತ್ತು ಮಾಜಿ ಉಪ ಮುಖ್ಯಮಂತ್ರಿ ಮತ್ತು ಹಾಲಿ ಶಾಸಕರಾದ ಶ್ರೀ ಸಿದ್ಧರಾಮಯ್ಯನವರು ಮತ್ತು ಜೆಎಸ್ಎಸ್ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಬಿ. ಸುರೇಶ್ ಅವರು ಉಪಸ್ಥಿತರಿದ್ದರು. ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರು ಸ್ವಾಗತ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ಹರಗುರು ಚರಮೂರ್ತಿಗಳು, ಜೆಎಸ್ಎಸ್ ಮಹಾವಿದ್ಯಾಪೀಠದ ಅಧಿಕಾರಿವರ್ಗ, ಸುತ್ತೂರು ಶಾಲೆಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿವೃಂದ, ಸುತ್ತಮುತ್ತಲಿನ ಗ್ರಾಮಸ್ಥರು ಬಹು ಸಂಖ್ಯೆಯಲ್ಲಿ ನೆರೆದು ಕಾರ್ಯಕ್ರಮ ತುಂಬ ಯಶಸ್ವಿಯಾಗಿ, ಅದ್ದೂರಿಯಾಗಿ ನಡೆಯಿತು.

ಮುಖ್ಯ ಕಾರ್ಯಕ್ರಮಗಳು ನಡೆದ ಬಳಿಕ ಪ್ರೊ. ಎಂ. ಕೃಷ್ಣೇಗೌಡ ಮತ್ತು ತಂಡದವರಿಂದ 'ನಗೆ ಉತ್ಸವ' ನಡೆಯಿತು. ಸಭೆಗೆ ಆಗಮಿಸಿದ್ದ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

**ರೈತರು ಕೃಷಿ ಚಟುವಟಿಕೆಗಳಿಂದ ವಿಮುಖರಾಗಬಾರದು**

ಜೆಎಸ್ಎಸ್ ಎಸ್‌ಜಿಎಸ್‌ವೈ ವಿಶೇಷ ಯೋಜನೆಯಡಿ ರಾಜ್ಯದಾದ್ಯಂತ ನಿರ್ಮಿಸಿರುವ 20 ಚಾಕಿ ಹುಳು ಸಾಕಾಣಿಕಾ ಕೇಂದ್ರಗಳನ್ನು ಸುತ್ತೂರಿನ ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ದಿನಾಂಕ 11.5.2009 ರಂದು ಸಾಂಕೇತಿಕವಾಗಿ ಉದ್ಘಾಟಿಸಲಾಯಿತು.

"ಆಧುನಿಕ ಜಗತ್ತಿನಲ್ಲಿ ಕೃಷಿ ವಲಯಕ್ಕೆ ಅನೇಕ ಹೊಸ ಹೊಸ ಸವಾಲುಗಳು ಎದುರಾಗುತ್ತಿದ್ದು ಅವುಗಳನ್ನು ರೈತರು ಧೈರ್ಯದಿಂದ ಎದುರಿಸಬೇಕು" ಎಂದು ತಾಷ್ಕೆಂಟ್‌ನ ಸಿಜಿಐಎಆರ್‌ನ ಜಾಗತಿಕ ಸಂಯೋಜಕರು ಹಾಗೂ ನವದೆಹಲಿಯ ಐಸಿಎಆರ್‌ನ ನಿವೃತ್ತ ಡೈರೆಕ್ಟರ್ ಜನರಲ್ ಪದ್ಮಭೂಷಣ ಡಾ. ರಾಜೇಂದ್ರಸಿಂಗ್ ಪರೋಡರವರು ರೈತರಿಗೆ ಕರೆ ನೀಡಿದರು.

ಪಶುಪಾಲನೆ, ಜೇನುಸಾಕಾಣಿಕೆ, ಮೀನುಗಾರಿಕೆ ಮೊದಲಾದ ಉಪಕಸುಬುಗಳನ್ನು ರೂಢಿಸಿಕೊಳ್ಳುವ ಮೂಲಕ ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದೆಂದರು. ರೈತರಿಗೆ ಈ ನಿಟ್ಟಿನಲ್ಲಿ ಒಳ್ಳೆಯ ಅವಕಾಶ ಮತ್ತು ವಾತಾವರಣವನ್ನು ಕಲ್ಪಿಸಿಕೊಡುತ್ತಿರುವ ಜೆಎಸ್ಎಸ್ ಸಂಸ್ಥೆಯ ಸೇವೆಯನ್ನು ಪ್ರಶಂಸಿಸಿದ ಅವರು, ಕೃಷಿ ಸಂಶೋಧನೆಯ ಫಲಗಳನ್ನು ರೈತರಿಗೆ ತಲುಪಿಸುವಲ್ಲಿ ಸಂಸ್ಥೆಯು ನಿಜಕ್ಕೂ ಮಾದರಿಯಾಗಿದೆ ಎಂದು ನುಡಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡುತ್ತ, ರೈತರು ಕೃಷಿ ಚಟುವಟಿಕೆಗಳಿಂದ ವಿಮುಖರಾಗದೆ, ಬದುಕನ್ನು ಪ್ರೀತಿಸುವ ಮೂಲಕ ದೇಶಕ್ಕೆ ತಮ್ಮ ಕೊಡುಗೆಯನ್ನು ನೀಡಬೇಕೆಂದು ನುಡಿದರು. ಸೂರ್ಯನ ಪ್ರಕಾಶದಂತೆ ರೈತರೂ ಕೂಡ ಸ್ವಯಂಪ್ರಕಾಶಿಗಳು



ಎಂದು ತಮ್ಮನ್ನು ಭಾವಿಸಿಕೊಂಡು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಇತ್ತೀಚೆಗೆ ನಗರದ ಜನರು ಕೂಡ ಗ್ರಾಮೀಣ ರೈತರಂತೆ ಸ್ವಾವಲಂಬಿಗಳಾಗಲು ಯತ್ನಿಸುತ್ತಿದ್ದಾರೆ ಎಂದು ತಿಳಿಸಿದರು.

ಆಹಾರ ಸಂಸ್ಕರಣ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಪಿ.ಜಿ. ಚೆಂಗಪ್ಪರವರು, "ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಲು ಉತ್ಪಾದನೆಯನ್ನು ಹೆಚ್ಚಿಸಬೇಕಿದೆ. ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಅಂತಹ ತಂತ್ರಜ್ಞಾನ ರೈತರಿಗೆ ತಲುಪಬೇಕಾಗಿದೆ. ಆ ಮೂಲಕ ಸಣ್ಣ ಮತ್ತು ಅತಿ ಸಣ್ಣ ರೈತರ ಸ್ಥಿತಿಗತಿಗಳನ್ನು ಉತ್ತಮಪಡಿಸಬಹುದಾಗಿದೆ" ಎಂದರು. ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸುವ ಮೂಲಕ ರೈತರು ತಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳಬಹುದೆಂದ ಅವರು, ತಾವು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆಯನ್ನು ಪಡೆದುಕೊಳ್ಳಲು ಮಹಾರಾಷ್ಟ್ರದಲ್ಲಿ ರೈತರೇ ಸಂಘಟಿತರಾಗಿ ಮಾರಾಟ ವ್ಯವಸ್ಥೆಯನ್ನು ಮಾಡಿಕೊಂಡು ಯಶಸ್ಸು ಕಂಡುಕೊಂಡಿದ್ದಾರೆ ಎಂದರು. ಕೃಷಿಕರು ಕಡಿಮೆ ಖರ್ಚು ಮಾಡಿ ಹೆಚ್ಚು ಆದಾಯ ತಂದುಕೊಡುವಂಥ ಬೆಳೆಗಳನ್ನು ಬೆಳೆಯ ಬೇಕೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದ ನಿರ್ದೇಶಕರಾದ ಡಾ. ವಿ. ಪ್ರಕಾಶ್‌ರವರು, ಪೌಷ್ಟಿಕಾಂಶದ ಬಗ್ಗೆ ಹದಿಹರೆಯದ ಹುಡುಗಿಗೆ ತಿಳಿವಳಿಕೆ ನೀಡಿದರೆ ಅದರಿಂದ ಅವಳ ಬದುಕಿನ ಎಲ್ಲಾ ಹಂತಗಳಲ್ಲೂ ಇಡೀ ಕುಟುಂಬವು ಆರೋಗ್ಯದಿಂದಿರಲು ಸಾಧ್ಯವೆಂದರು. ಹಿತ್ತಲ ಗಿಡ ಮದ್ದಲ್ಲವೆಂಬ ಭಾವನೆ ದೂರವಾಗ ಬೇಕು. ಸುತ್ತೂರು ಶ್ರೀಕ್ಷೇತ್ರದ ಸುಮಧುರ ಪರಿಸರದಲ್ಲಿ ಯುವ ಜನತೆ ಮತ್ತು ಅನುಭವಿ ತಜ್ಞರ ಸಮ್ಮಿಲನದಿಂದಾಗಿ ಇಲ್ಲಿನ ಕೃಷಿ ವಿಜ್ಞಾನ ಕೇಂದ್ರ ರೈತರಿಗಾಗಿ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಿರು ಸಭಾಭವನದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಜೆ.ಎಚ್. ಕುಲಕರ್ಣಿಯವರು, "ಯುಗಯುಗಾಂತರಗಳಿಂದ ಬಂದ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುವ ಮೂಲಕ ನಾವು ಕೃಷಿ ಕ್ಷೇತ್ರದಲ್ಲಿ ನಮ್ಮತನವನ್ನು ಕಂಡುಕೊಳ್ಳಬೇಕು. ನೀರಿನ ಕೊರತೆಯನ್ನು ನೀಗಿಸುವ ಸಲುವಾಗಿ, ಕಡಿಮೆ ನೀರಿನಲ್ಲಿಯೇ ಕೃಷಿ ಮಾಡುವ ವಿಧಾನಗಳನ್ನು ರೂಢಿಸಿಕೊಳ್ಳಬೇಕು. ಸುಧಾರಿತ ಬೀಜಗಳನ್ನು ಬಳಸಿಕೊಂಡು ವೈವಿಧ್ಯ ಸ್ವರೂಪದ ಬೆಳೆಗಳನ್ನು ಬೆಳೆಯಬೇಕು" ಎಂದು ನುಡಿದರು.

ಐಸಿಎಆರ್‌ನ ವಲಯ ನಿರ್ದೇಶಕರಾದ ಶ್ರೀ ಎಸ್. ಪ್ರಭುಕುಮಾರ್‌ರವರು, ಪದ್ಮಶ್ರೀ ಡಾ. ಎಂ. ಮಹದೇವಪ್ಪನವರು ರಚಿಸಿದ 'ರೈತಗೀತೆ' ಕವನಸಂಕಲನವನ್ನು ಬಿಡುಗಡೆ ಮಾಡಿ ಮಾತನಾಡಿದರು. ಜೆಎಸ್ಎಸ್ ಮಹಾವಿದ್ಯಾಪೀಠದ ಗೌರವ ಕಾರ್ಯದರ್ಶಿಗಳಾದ ಶ್ರೀ ಎನ್.ಎಸ್. ಮಹದೇವಯ್ಯನವರು ಮತ್ತಿತರ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಿಎಫ್‌ಟಿಆರ್‌ಐ ನ ಡಾ. ಎನ್.ಜಿ. ಮಲ್ಲೇಶ್, ಡಾ. ಕೆ.ಎಸ್. ವೆಂಕಟೇಶಮೂರ್ತಿ, ಶ್ರೀ ಮಹೇಶ್ ಮತ್ತು ಶ್ರೀ ಬೊಮ್ಮಿಗಟ್ಟಿ ಹಾಗೂ ಸಂವಹನ ಪ್ರಕಾಶನದ ಶ್ರೀ ಡಿ.ಎನ್. ಲೋಕಪ್ಪನವರನ್ನು ಸುತ್ತೂರು ಶ್ರೀಗಳವರು ಸನ್ಮಾನಿಸಿ ಆಶೀರ್ವದಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಗೀತ ಶಿಕ್ಷಕರಾದ ಶ್ರೀ ವಿ.ಪಿ. ಹೆಗ್ಡೆಯವರು ಪ್ರಾರ್ಥನೆ ಮಾಡಿದರು. ಡಾ. ಎಂ. ಮಹದೇವಪ್ಪನವರು ಸ್ವಾಗತಿಸಿದರು. ಪ್ರೊ. ಎಂ. ರುದ್ರಾರಾಧ್ಯರು ವಂದನಾರ್ಪಣೆ ಮಾಡಿದರೆ, ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರಾದ ಶ್ರೀ ಬಿ.ಎಸ್. ಹರೀಶ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

**ಜೈನಧರ್ಮದ ಕೊಡುಗೆ ಅಪಾರ**

ಜೈನಧರ್ಮ ಜಗತ್ತಿಗೆ ಅಹಿಂಸೆ ಎಂಬ ಅದ್ಭುತ ಕೊಡುಗೆ ನೀಡಿದೆ. ಈ ಜೈನ ತತ್ವದ ಬಗ್ಗೆ ಸರಿಯಾಗಿ ಕಣ್ತೆರೆದು ನೋಡಿದ್ದರೆ ಯಾವುದೇ ಯುದ್ಧಗಳಾಗಲಿ, ಸಂಘರ್ಷಗಳಾಗಿ ನಡೆಯುತ್ತಿರಲಿಲ್ಲ ಎಂದು ಪರಮಪೂಜ್ಯ ಶ್ರೀ ದೇಶಿಕೇಂದ್ರ ಮಹಾಸ್ವಾಮೀಜಿಗಳು ಅಭಿಪ್ರಾಯಪಟ್ಟರು.

ನಗರದಲ್ಲಿ ನಡೆಯುತ್ತಿರುವ ಶ್ರೀ ಪಾರ್ಶ್ವನಾಥ ಬಸದಿಯ ಪಂಚಕಲ್ಯಾಣ ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ 27.5.2009ರಂದು ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಅಹಿಂಸಾ ತತ್ವದ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಂಡರೆ ಯಾವುದೇ ಸಮಸ್ಯೆ ಸಂಘರ್ಷಗಳಿಗೂ ಅವಕಾಶವಿಲ್ಲ ಎಂದರು.

ಮನುಷ್ಯ ವೈರಾಗ್ಯ ಬೆಳೆಸಿಕೊಳ್ಳಬೇಕು. ವೈರಾಗ್ಯದಿಂದ ಮಾತ್ರ ನಿತ್ಯ ಸುಖ ಸಾಧ್ಯ. ಇದನ್ನು ಜೈನಧರ್ಮ ಇಡೀ ಜಗತ್ತಿಗೆ ತೋರಿಸಿಕೊಟ್ಟಿದೆ. ಮನಸ್ಸಿನಲ್ಲಿ ಸ್ಥಿರವಾದ ಪ್ರಜ್ಞೆ ಮೂಡಿಸಿಕೊಂಡರೆ ವೈರಾಗ್ಯ ಕಷ್ಟವಲ್ಲ ಎಂದು ಅವರು ಹೇಳಿದರು.

ಬಿಜಾಪುರ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ಮಾತನಾಡಿ ಜೀವನದಲ್ಲಿ ಎಲ್ಲವನ್ನು ಪರಿತ್ಯಾಗ ಮಾಡಿ ನಿರ್ಲಿಪ್ತ ಭಾವನೆ ತಾಳುವುದು ಸುಲಭವಲ್ಲ, ಆದರೆ ಜೈನಧರ್ಮದ ಸಂತರು ಅದನ್ನು ಸಾಧಿಸಿ ವೈರಾಗ್ಯದಿಂದ ಮಾತ್ರ ಮೋಕ್ಷ ಸಾಧ್ಯ ಎಂದು ಸಾಬೀತುಪಡಿಸಿದ್ದಾರೆ. ಯಾವುದು ನನ್ನದಲ್ಲ ಎಂಬ ಮನೋಭಾವನೆ ಬೆಳೆಸಿಕೊಂಡರೆ ಜೀವನದಲ್ಲಿ ನೆಮ್ಮದಿ ಕಾಣಲು ಸಾಧ್ಯ ಎಂದು ಹೇಳಿದರು.

ಸಮಾರಂಭದಲ್ಲಿ ಪ್ರಸನ್ನಸಾಗರ ಮಹಾ ಮುನಿಗಳು, ಕನಕಗಿರಿ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಹರಹಂತಗಿರಿ ಧವಳ ಕೀರ್ತಿ ಭಟ್ಟಾರಕ ಸ್ವಾಮೀಜಿ, ಕಂಬದಹಳ್ಳಿ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ ಉಪಸ್ಥಿತರಿದ್ದರು.

**ಕ್ರಿಯೆಗೆ ಮನಸ್ಸು ಮುಖ್ಯ**

ಪರಿಶುದ್ಧ ಮನಸ್ಸು ಇದ್ದಾಗ ಹೊರಗಿನ ಮತ್ತು ಒಳಗಿನ ಸಂಗತಿಗಳನ್ನು ಬದಲಾವಣೆ



ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅಂತಹ ಚಿಂತನೆಗೆ ಈ ರೀತಿಯ ಶಿಬಿರಗಳು ಸಹಾಯಕವಾಗುತ್ತವೆ ಎಂದು ಪರಮಪೂಜ್ಯರು ತಿಳಿಸಿದರು.

ದಿನಾಂಕ 2.6.2009 ರಂದು ಊಟಿಯಲ್ಲಿ ನಡೆದ ವ್ಯಕ್ತಿತ್ವ ವಿಕಸನ ಶಿಬಿರದ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಅವರು ವಹಿಸಿದ್ದರು. ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಧಾನಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವ್ಯಕ್ತಿತ್ವವನ್ನು ಗಳಿಸಿಕೊಂಡಾಗ ಮಾತ್ರ ಸಾಮಾಜಿಕ ಸ್ವಾಸ್ಥ್ಯ ಸಾಧ್ಯ ಎಂದು ತಿಳಿಸಿದರು.

ಬಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಉಪನ್ಯಾಸ ನೀಡಿದರು.

ಸಮಾರಂಭದಲ್ಲಿ ಮೈಸೂರಿನ ಭ್ರಮರ ಟ್ರಸ್ಟ್‌ನ ಅಧ್ಯಕ್ಷೆ ಮಾಧುರಿ ತಾತಾಚಾರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಬಿ.ಎ ವಿವೇಕ್ ರೈ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮುಖ್ಯಮಂತ್ರಿ ಚಂದ್ರು, ಜೆಎಸ್‌ಎಸ್ ವಿ.ವಿ. ಕುಲಪತಿ ಡಾ. ಬಿ. ಸುರೇಶ್‌ಭಾಗವಹಿಸಿದ್ದರು.

**ಬಾಲಗಂಗಾಧರನಾಥ ಸ್ವಾಮೀಜಿಯವರ ಸೇವೆ ಸ್ಮರಣೀಯ**

ಆದಿ ಚುಂಚನಗಿರಿ ಮಠ, ಜಾಗತಿಕ ಭೂಪಟದಲ್ಲಿ ಶಾಶ್ವತವಾಗಿ ನಿಲ್ಲುವಂತೆ ಮಾಡಿದ ಕೀರ್ತಿ, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಿಗೆ ಸಲ್ಲುತ್ತದೆ. ಶಿಕ್ಷಣ, ಆರೋಗ್ಯ, ಸಂಸ್ಕೃತಿ, ಸಂಸ್ಕಾರಗಳ ಸೇವೆ ಸ್ಮರಣೀಯವಾದುದು. ಅವರು ಲಕ್ಷಾಂತರ ಸಸಿಗಳನ್ನು ನೆಡುವುದರ ಮೂಲಕ ಈ ಭೂಮಿಯನ್ನು ಹಸಿರೀಕರಣಗೊಳಿಸಿದ್ದಾರೆ. ಆ ಮೂಲಕ ಪರಿಸರಕ್ಕೆ ಅವರು ಕೊಟ್ಟ ಕೊಡುಗೆ ಅಪಾರವಾದುದು ಎಂದು ಪರಮಪೂಜ್ಯರು ತಿಳಿಸಿದರು.

ದಿನಾಂಕ 4.6.2009 ರಂದು ಮೈಸೂರಿನಲ್ಲಿ ನಡೆದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಅಭಿನಂದನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪೂಜ್ಯರು ಮಾತನಾಡುತ್ತಿದ್ದರು.

ಆದಿ ಚುಂಚನಗಿರಿ ಶ್ರೀಗಳವರಿಗೆ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ, ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ನೀಡಿದ್ದರ ಹಿನ್ನೆಲೆಯಲ್ಲಿ ಮೈಸೂರಿನ ಕಲಾ ಮಂದಿರದಲ್ಲಿ ಸಮಾರಂಭ ಏರ್ಪಾಡಾಗಿತ್ತು. ಸಮಾರಂಭದಲ್ಲಿ ಬಿಜಾಪುರ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಚುಂಚನಗಿರಿ ಶ್ರೀಗಳವರ ಸಮಾಜ ಸೇವೆಯನ್ನು ಶ್ಲಾಘಿಸಿದರು. ಸಮಾರಂಭದಲ್ಲಿ ಮೈಸೂರು ವಿ.ವಿ. ಕುಲಪತಿ ಪ್ರೊ. ವಿ.ಜಿ. ತಳವಾರ್, ಕುವೆಂಪು ವಿ.ವಿ. ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದಗೌಡ, ಕರ್ನಾಟಕ ಗೃಹಮಂಡಳಿ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ಮೇಯರ್ ಪುರುಷೋತ್ತಮ್ ಮಾಜಿ ಶಾಸಕ ಡಿ. ಮಾದೇಗೌಡ, ಭಾರತೀ ಸ್ವಾಮೀಜಿ, ಪುರುಷೋತ್ತಮಾನಂದ ಸ್ವಾಮೀಜಿ,

ಶಾಸಕರಾದ ಸಾ.ರಾ. ಮಹೇಶ್, ಪುಟ್ಟರಾಜು ಮುಂತಾದವರು ಭಾಗವಹಿಸಿದ್ದರು.

**ದಾದಿಯರಿಗಾಗಿ ಪುನಶ್ಚೇತನ ಶಿಬಿರ**

ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸುತ್ತೂರು ಶ್ರೀಕ್ಷೇತ್ರದಲ್ಲಿ 5.6.2009 ರಂದು ಏರ್ಪಡಿಸಿದ್ದ ಮೂರು ದಿನಗಳ ಪುನಶ್ಚೇತನ ಶಿಬಿರವನ್ನು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕರಾದ ಡಾ. ಸಿ.ಎಂ. ಮಂಜುನಾಥ್‌ರವರು ಉದ್ಘಾಟಿಸಿದರು. ಸಮಾರಂಭದಲ್ಲಿ ಮಾತನಾಡಿದ ಅವರು ದಾದಿಯರೇ ವೈದ್ಯಕೀಯ ಸೇವೆಯ ಬೆನ್ನೆಲುಬು, ಅವರು ಮಾನಸಿಕವಾಗಿ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬುವ ಮಹತ್ತರ ಜವಾಬ್ದಾರಿ ಹೊಂದಿದ್ದಾರೆ. ಯಾಂತ್ರಿಕ ಉಪಕರಣಗಳಿಂದ ಮಾಡುವ ಚಿಕಿತ್ಸೆಗಿಂತ ಹೃದಯಪೂರ್ವಕವಾಗಿ ಮಾಡುವ ಸೇವೆ ಅನುಪಮವಾದುದು ಎಂದು ತಿಳಿಸಿದರು.

ಬಿಜಾಪುರದ ಜ್ಞಾನಯೋಗಾಶ್ರಮದ ಪೂಜ್ಯಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಆಶೀರ್ವಚನ ನೀಡಿ, ದಾದಿಯರ ಉಪಚಾರದಿಂದಲೇ ರೋಗಿಯ ರೋಗ ಅರ್ಧ ಕಡಿಮೆಯಾಗುತ್ತದೆ. ರೋಗಿಯನ್ನು ಉಪಚರಿಸುವಾಗ ದಾದಿಯರು ತಾಯಿಯಂತಾಗಬೇಕು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಮನುಬಳಿಗಾರ್‌ರವರು ವಹಿಸಿದ್ದರು.

**ಕಾನೂನಿಗಿಂತ ಮಾನವೀಯತೆ ಮುಖ್ಯ**

ದಿನಾಂಕ 6.6.2009 ರಂದು ಕರ್ನಾಟಕ ಕಾನೂನು ಸಂಸದೀಯ ಸುಧಾರಣಾ ಸಂಸ್ಥೆ ಹಾಗೂ ವಿದ್ಯಾವರ್ಧಕ ಕಾನೂನು ಕಾಲೇಜು ಏರ್ಪಡಿಸಿದ್ದ ಎರಡು ದಿನಗಳ ವಿಪತ್ತು-ಕಾನೂನು ವೈದ್ಯ ಸವಾಲು ಕುರಿತ ದುಂಡುಮೇಜಿನ ಸಂವಾದ ಕಮ್ಮಟದ ಸಾನ್ನಿಧ್ಯವನ್ನು ವಹಿಸಿ ಮಾತನಾಡುತ್ತಿದ್ದ ಪರಮಪೂಜ್ಯರು ವಿಪತ್ತು ಸಂಭವಿಸಿದ ಸಂದರ್ಭದಲ್ಲಿ ಕಾನೂನಿಗಿಂತ ಮಾನವೀಯತೆ ಮುಖ್ಯ, ನೊಂದವರಿಗೆ ಸ್ಪಂದಿಸುವುದೇ ನಿಜವಾದ ಮಾನವ ಧರ್ಮ. ಪುರಾತನ ಕಾಲದಲ್ಲಿ ನಮ್ಮ ಸಮಾಜದಲ್ಲಿ ಯಾವುದೇ ಲಿಖಿತ ಕಾನೂನುಗಳಿರಲಿಲ್ಲ. ಆದರೆ ಜನರು ಸ್ವತಃ ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡಿದ್ದ ಧರ್ಮವೇ ಅವರ ಕಾನೂನಾಗಿತ್ತು. ಇದು ಹೊರಗಿನಿಂದ ಹೇರಲ್ಪಟ್ಟದ್ದಾಗಿರಲಿಲ್ಲ. ಅವರ ಒಳಗೇ ಸಹಜವಾಗಿ ಮೂಡಿಬಂದಂತದ್ದಾಗಿತ್ತು. ಅಂತಹ ಸಮಾಜ ಇಂದು ಅನಿವಾರ್ಯವಾಗಿದೆ ಎಂದು ಪರಮಪೂಜ್ಯರು ತಿಳಿಸಿದರು.

ಸಮಾರಂಭದಲ್ಲಿ ಕಮ್ಮಟಕ್ಕೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಚಾಲನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವರಾದ ಕು. ಶೋಭಾ ಕರಂದ್ಲಾಜೆ, ನಿ. ನ್ಯಾ. ಮೂ. ಎಂ. ಚಂದ್ರಶೇಖರಯ್ಯ ಕಾನೂನು ವಿ.ವಿ. ಕುಲಪತಿ ಡಾ. ಜೆ.ಎಸ್. ಪಾಟೀಲ್, ಗೃಹಮಂಡಲಿ ಅಧ್ಯಕ್ಷ ಟಿ.ಡಿ. ದೇವೇಗೌಡ, ಶಾಸಕರಾದ ಎಂ. ಸತ್ಯನಾರಾಯಣ,



ತೋಂಟದಾರ್ಯ, ಸಿದ್ಧರಾಜು, ಜಿಲ್ಲಾಧಿಕಾರಿ ಪಿ. ಮಣಿವಣ್ಣನ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ. ವಿಶ್ವನಾಥ್, ಪ್ರಾಂಶುಪಾಲರಾದ ಶ್ರೀ ಕೆ.ಬಿ. ವಾಸುದೇವ ಮುಂತಾದವರು ಉಪಸ್ಥಿತರಿದ್ದರು.

**ವ್ಯಾಮೋಹವೇ ಮೋಸಕ್ಕೆ ಕಾರಣ**

ಮನುಷ್ಯನ ವ್ಯಾಮೋಹವೇ ಮೋಸ ಹೋಗಲು ಕಾರಣ. ದೇಶದಲ್ಲಿ ಯಾರಿಗೂ ಸಿಗಲಾರದಷ್ಟು ಬಡ್ಡಿ ನನಗೆ ಸಿಗಬೇಕೆಂದು ಹಣ ತೊಡಗಿಸಿದವರು ಮಾತ್ರವೇ ಮೋಸ ಹೋಗಿದ್ದು, ನಿಯಮಾನುಸಾರದಡಿ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿರುವ ಬ್ಯಾಂಕುಗಳಲ್ಲಿ ಠೇವಣಿ ಇಟ್ಟವರು ಮೋಸ ಹೋಗಿಲ್ಲ. ವ್ಯಾಮೋಹವೇ ಇಂಥ ಮೋಸ ಹೋಗಲು ಕಾರಣವಾಗಿದ್ದು, ಮೋಸ ಹೋಗುವವರು ಇರುವವರಿಗೆ ಮಾಸ ಮಾಡುವವರು ಇರುತ್ತಾರೆ. ಎಂಬುದನ್ನು ಅರಿಯಬೇಕು. ಮನುಷ್ಯ ಸಂಬಂಧ ಹಾಗೂ ಸ್ನೇಹದ ಅವನತಿಗೆ ಹಣಕಾಸಿನ ವ್ಯವಹಾರ ಪ್ರಮುಖ ಪಾತ್ರ ವಹಿಸುತ್ತದೆ.

ಪೂಜ್ಯರು ನಗರದ ಆಲನಹಳ್ಳಿ ಮುಖ್ಯರಸ್ತೆಯಲ್ಲಿ ಕರ್ನಾಟಕ ಬ್ಯಾಂಕ್‌ನ ಸಿದ್ಧಾರ್ಥ ನಗರ ಶಾಖೆಯ ನೂತನ ವಿಸ್ತೃತ ಕಟ್ಟಡ ಉದ್ಘಾಟನೆ ಹಾಗೂ ಎಟಿಎಂ ಕೇಂದ್ರದ ಉದ್ಘಾಟನೆ ಸಮಾರಂಭದಲ್ಲಿ ದಿನಾಂಕ 11.6.2009 ರಂದು ಮಾತನಾಡುತ್ತಿದ್ದರು. ಸಮಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಅನಂತ ಕೃಷ್ಣ, ಪತ್ರಕರ್ತ ರಾಜಶೇಖರ ಕೋಟಿ, ಮಹಾಪ್ರಬಂಧಕ ಸುಭಾಶ್‌ಚಂದ್ರ ಪುರಾಣಿಕ್, ಪ್ರಧಾನ ವ್ಯವಸ್ಥಾಪಕರಾದ ಸುಬ್ರಹ್ಮಣ್ಯ ಭಟ್, ಶಾಖಾ ಪ್ರಬಂಧಕ ಪಿ.ಆರ್. ಮಂಜುನಾಥ್ ಭಾಗವಹಿಸಿದ್ದರು.

**ಪ್ರೌಢಶಾಲಾ ಹಾಗೂ ಪ್ರಾಥಮಿಕ ಮುಖ್ಯಸ್ಥರಿಗಾಗಿ ಪುನಶ್ಚೇತನ ಶಿಬಿರ**

ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರೌಢಶಾಲಾ ಹಾಗೂ ಪ್ರಾಥಮಿಕ ಮುಖ್ಯಸ್ಥರಿಗಾಗಿ 12.6.2009 ರಂದು ಏರ್ಪಡಿಸಿದ್ದ ಪುನಶ್ಚೇತನ ಶಿಬಿರವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನಡೆಯಿತು. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಶಿಬಿರಾರ್ಥಿಗಳಿಗೆ ಆಶೀರ್ವಚನ ನೀಡಿದರು. ಹಿರಿಯ ಸಾಹಿತಿಗಳಾದ ಶ್ರೀ ಗುರುಲಿಂಗ ಕಾಪಸೆಯವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಜೀವಚೇತನಗಳೊಡನೆ ಸಂಬಂಧವುಳ್ಳ ಶಿಕ್ಷಕ ವೃತ್ತಿ ಶ್ರೇಷ್ಠವಾದುದು. ಪ್ರಾಥಮಿಕ ಮಾಧ್ಯಮಿಕ ತರಗತಿಗಳಲ್ಲಿ ಬೋಧಿಸುವ ಶಿಕ್ಷಕ ತಾಯ್ತನವನ್ನು ರೂಢಿಸಿಕೊಳ್ಳಬೇಕು. ಮಗುವಿನ ಜ್ಞಾನ ವಿಸ್ತಾರಕ್ಕೆ ಕಾರಣವಾಗಬೇಕು ಎಂದು ತಿಳಿಸಿದರು.

ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯನವರು ಮಾತನಾಡಿ ವಿದ್ಯಾರ್ಥಿಗಳಲ್ಲಿ ಓದುವ ಪರಿಪಾಠ ಬೆಳೆಯಬೇಕಾದರೆ ಶಿಕ್ಷಕರು ಮಾದರಿಯಾಗಬೇಕೆಂದು ತಿಳಿಸಿದರು. ಸಮಾರಂಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರ್ ಉಪಸ್ಥಿತರಿದ್ದರು.

### ಪೂಜ್ಯಶ್ರೀಗಳವರಿಂದ ಛಾಯಾಗ್ರಾಹಕ ಎಸ್.ಎಂ. ಜಂಬುಕೇಶ್ವರ್‌ಗೆ ಅಭಿನಂದನೆ

ದಿನಾಂಕ 13.6.2009 ರಂದು ಮೈಸೂರಿನ ಹಿರಿಯ ಛಾಯಾಗ್ರಾಹಕ ಶ್ರೀ ಎಸ್.ಎಂ. ಜಂಬುಕೇಶ್ವರ್ ಅವರಿಗೆ 60 ವರ್ಷಗಳು ತುಂಬಿದ ಅಂಗವಾಗಿ ರಾಜೇಂದ್ರ ಭವನದಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಶ್ರೀ ಜಂಬುಕೇಶ್ವರ್‌ರವರನ್ನು ಕುರಿತು ಪ್ರಕಟವಾಗಿರುವ ಅಭಿನಂದನಾ ಗ್ರಂಥ ಬಹುಮುಖಿಯನ್ನು ಬಿಡುಗಡೆ ಮಾಡಲಾಯಿತು. ಪರಮಪೂಜ್ಯ ಜಗದ್ಗುರುಗಳವರು ಸಾನ್ನಿಧ್ಯ ವಹಿಸಿ ಶ್ರೀಯುತರನ್ನು ಆಶೀರ್ವದಿಸಿದರು.

ಸಮಾರಂಭದಲ್ಲಿ ಪೂಜ್ಯಶ್ರೀ ಸಿದ್ಧೇಶ್ವರ ಸ್ವಾಮಿಗಳು, ನಾಡೋಜ ದೇಜಗೌ, ಪತ್ರಕರ್ತ ಬಿ.ಎಂ. ಹನೀಫ್, ಮಲೆಯೂರು ಗುರುಸ್ವಾಮಿ, ಮಡ್ಡಿಕೆರೆ ಗೋಪಾಲ್, ಕೆ.ಬಿ. ಗಣಪತಿ, ಸಿ.ಪಿ.ಕೆ. ಕೃಷ್ಣವಟ್ಟಂ, ಜಿ.ಎಸ್. ಭಟ್ಟ ಮುಂತಾದವರು ಭಾಗವಹಿಸಿದ್ದರು.

### ದೇವನೂರಿನಲ್ಲಿ ಶ್ರೀ ಗುರುಮಲ್ಲೇಶ್ವರರ ಆರಾಧನಾ ಮಹೋತ್ಸವ

ದಿನಾಂಕ 14.6.2009 ರಂದು ದೇವನೂರಿನಲ್ಲಿ ನಡೆದ ಶ್ರೀ ಗುರುಮಲ್ಲೇಶ್ವರರ ಆರಾಧನಾ ಮಹೋತ್ಸವ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಶ್ರೀ ಜಗದ್ಗುರುಗಳವರು ಈ ಭಾಗದ ಜನಸಮೂಹದಲ್ಲಿ ಭಕ್ತಿಯನ್ನು ಬಿತ್ತಿಬೆಳೆದ ಮಹನೀಯರೆಂದರೆ ಶ್ರೀ ಗುರುಮಲ್ಲೇಶ್ವರರು. ಯಾವುದೇ ಸಾರಿಗೆ ವ್ಯವಸ್ಥೆಯಿಲ್ಲದ ಕಾಲಮಾನದಲ್ಲಿಯೇ ಅವರು ಈ ಪ್ರಾಂತ್ಯವನ್ನೆಲ್ಲ ಸಂಚರಿಸಿ ದಾಸೋಹ ಮಠಗಳನ್ನು ಸ್ಥಾಪಿಸಿ ಸಹಸ್ರಾರು ಭಕ್ತರನ್ನು ಹೊಂದಿದ್ದುದು ನಿಜಕ್ಕೂ ಪವಾಡ ಸದೃಶವಾದ ಕೆಲಸವೇ ಸರಿ ಎಂದು ತಿಳಿಸಿದರು.

ಸಮಾರಂಭದಲ್ಲಿ ಹೊಸಮಠದ ಶ್ರೀ ಸಚ್ಚಿದಾನಂದ ಸ್ವಾಮಿಗಳು, ಕನಕಪುರ ದೇಗುಲ ಮಠದ ಅಧ್ಯಕ್ಷರಾದ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಸೋಮಹಳ್ಳಿ ವೀರಸಿಂಹಾಸನ ಶಿಲಾ ಮಠಾಧ್ಯಕ್ಷರಾದ ಶ್ರೀ ಸಿದ್ಧಮಲ್ಲಸ್ವಾಮಿಗಳು ಉಪಸ್ಥಿತರಿದ್ದರು.

### ಸಮಾಜದ ಸಂಸ್ಕಾರಕ್ಕಾಗಿ ಮಠಗಳು

ದಿನಾಂಕ 14.6.2009 ರಂದು ಶಿವಗಂಗೆ ಹೊನ್ನಗವಿ ಮಠದಲ್ಲಿ ನಡೆದ ಸಿದ್ಧಗಂಗೆಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ ಗುರುವಂದನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ಪೂಜ್ಯರು ಮಾತನಾಡುತ್ತಿದ್ದರು. ಮಠಮಾನ್ಯಗಳು ಸಂಸ್ಕಾರಕ್ಕೆ ಬೇಕಾದ ಅನೇಕ ಸನ್ಮಾರ್ಗಗಳನ್ನು ನೀಡಿ, ಜ್ಞಾನದಾಸೋಹವನ್ನು ನೀಡುತ್ತಾ ಬಂದಿವೆ. ಗುರುಹಿರಿಯರ ಬಗ್ಗೆ ಸಮಾಜದ ಬಗ್ಗೆ ಗೌರವವಿರಿಸಿಕೊಳ್ಳಬೇಕು. ಇಂತಹ ಸದ್ಭಾವನೆಯೂ ಆ ವ್ಯಕ್ತಿಯ ವಿಕಸನಕ್ಕೆ ನಾಂದಿಯಾಗುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಶ್ರೀ ಸಿದ್ಧಗಂಗಾ ಶ್ರೀಗಳು ಆಶೀರ್ವಚನ ನೀಡಿದರು. ವಲಯ ಶಾಂತಮನಿ ದೇಶಿಕೇಂದ್ರ ಸ್ವಾಮೀಜಿ ಕನಕಪುರದ ನಿರ್ವಾಣ ಮಹಾಸ್ವಾಮೀಜಿ ಆಶೀರ್ವಚನ



ನೀಡಿದರು. ಶಾಸಕ ರೇಣುಕಾಚಾರ್ಯ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಶಾಸಕ ಎಂ.ಎ. ನಾಗರಾಜು ಅಧ್ಯಕ್ಷತೆ ವಹಿಸಿದ್ದರು. ಮಠದ ಅಧ್ಯಕ್ಷರಾದ ಶ್ರೀ ರುದ್ರಮುನಿ ಸ್ವಾಮಿಜಿಯವರ ನೇತೃತ್ವದಲ್ಲಿ ಸಮಾರಂಭವು ನಡೆಯಿತು.

### ಮಾಡುವ ಕೆಲಸವೇ ನಾವಾಗಬೇಕು

ದಿನಾಂಕ 17.6.2009 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಧಾರ್ಮಿಕ ದತ್ತಿಯ ವತಿಯಿಂದ ಬೋಧಕೇತರರಿಗಾಗಿ ಏರ್ಪಡಿಸಿದ್ದ ಪುನಶ್ಚೇತನ ಶಿಬಿರದ ಪ್ರಶಂಸಾ ಪತ್ರ ವಿತರಣಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ, ಪರಮಪೂಜ್ಯರು ಮಾತನಾಡುತ್ತ ಮಾಡುವ ಕೆಲಸವೇ ನಾವಾದಾಗ ಎಂತಹ ಭಾರವಾದ ಕೆಲಸವೂ ಹಗುರವಾಗುತ್ತದೆ. ಸಂಸ್ಥೆ ಅಥವಾ ವ್ಯವಸ್ಥೆಯಲ್ಲಿ ಕೆಳಗಿನ ವ್ಯಕ್ತಿಯಿಂದ ಮೇಲಿನ ಅಧಿಕಾರಿಯವರೆವಿಗೂ ಪ್ರತಿಯೊಬ್ಬರೂ ನಿರ್ವಹಿಸುವ ಕೆಲಸ ಮುಖ್ಯವಾಗುತ್ತದೆ. ಎಲ್ಲರೂ ಒಮ್ಮುಖವಾಗಿ ಕೆಲಸ ನಿರ್ವಹಿಸಿದಾಗ ಒಟ್ಟಾರೆ ಯಶಸ್ಸು ಕಾಣಬಹುದೆಂಬುದನ್ನು ಸಂಶೋಧನೆಗಳೇ ತಿಳಿಸುತ್ತವೆ. ಹೃದಯವಂತಿಕೆಯಿಂದ ಸ್ಪಂದಿಸುವ ಭಾವನೆಗಳನ್ನು ಮೂಡಿಸುವ ಉದ್ದೇಶದಿಂದ ಇಂತಹ ಶಿಬಿರಗಳನ್ನು ಆಯೋಜಿಸಲಾಗುತ್ತದೆ ಎಂದು ತಿಳಿಸಿದರು.

ಪೂಜ್ಯಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಆಶೀರ್ವಚನ ನೀಡಿ, ಶಿಬಿರಾರ್ಥಿಗಳನ್ನು ಹಾರೈಸಿದರು. ಬೆಟ್ಟದಪುರದ ಶ್ರೀ ಚನ್ನಬಸವ ದೇಶಿಕೇಂದ್ರ ಮಹಾಸ್ವಾಮಿಗಳವರು ಅಧ್ಯಕ್ಷತೆ ವಹಿಸಿದ್ದರು. ಸಾರಿಗೆ ಇಲಾಖೆ ಕಾರ್ಯದರ್ಶಿ ಶ್ರೀ ಎಂ.ಕೆ. ಶಂಕರಲಿಂಗೇಗೌಡ ಹಿರಿಯ ರಂಗಕಲಾವಿದೆ ಶ್ರೀಮತಿ ಅರುಂಧತಿ ನಾಗ್, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀ ಕೆ. ಶ್ರೀಹರಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

### 'ಕ್ಷಣಹೊತ್ತು ಅಣಿಮುತ್ತು' ವಿಜಯ ಕರ್ನಾಟಕದ ಮೌಲ್ಯವನ್ನು ಹೆಚ್ಚಿಸಿದೆ

20.6.2009 ರಂದು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಶ್ರೀ ಎಸ್.ಪಿ. ಷಡಕ್ಷರಿಯವರ ಕ್ಷಹೊತ್ತು ಅಣಿಮುತ್ತು ಅಂಕಣ ಬರಹಗಳ ಮೂರನೆ ಭಾಗದ ಬಿಡುಗಡೆ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ, ಜಗದ್ಗುರುಗಳವರು ಮಾತನಾಡುತ್ತ, ಷಡಕ್ಷರಿಯವರ ಅಂಕಣಗಳು ವಿಜಯ ಕರ್ನಾಟಕ ದಿನಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿವೆ. ಇವುಗಳನ್ನು ಸಾಮಾನ್ಯ ಓದುಗರಿಂದ ಹಿಡಿದು, ಗಂಭೀರ ಓದುಗರೂ ಸಹ ಇಷ್ಟಪಡುತ್ತಾರೆ. ಕಾರಣ ಷಡಕ್ಷರಿಯವರು ಲೌಕಿಕ ಬದುಕಿನ ಸಾಮಾನ್ಯ ಸಂಗತಿಗಳನ್ನೂ ತೆಗೆದುಕೊಂಡು ಅದನ್ನು ವಿವರಿಸುವ ಮೂಲಕ ಬದುಕಿನ ಬಗ್ಗೆ ಗಂಭೀರ ಚಿಂತನೆಗೆ ಹಚ್ಚುತ್ತಾರೆ ಎಂದು ತಿಳಿಸಿದರು.

ಶ್ರೀ ಸಿದ್ಧೇಶ್ವರ ಸ್ವಾಮಿಗಳು ಕೃತಿಯನ್ನು ಬಿಡುಗಡೆ ಮಾಡಿ ಮೌಲಿಕವಾದ ಮಾತುಗಳನ್ನಾಡಿದರು.

ಕೃತಿಯನ್ನು ಕುರಿತು ಸಾಹಿತಿ ಜಯಂತ್ ಕಾಯ್ಕಿಣಿಯವರು ಮಾತನಾಡಿದರು. ಸಮಾರಂಭದಲ್ಲಿ ಪತ್ರಕರ್ತರಾದ ಶ್ರೀ ವಿಶ್ವೇಶ್ವರ ಭಟ್‌ರವರು ಶ್ರೀ ಷಡಕ್ಷರಿಯವರು

ಅಂಕಣಗಳನ್ನು ಬರೆಯುವವರೆಗೂ ನಾನು ಅದನ್ನು ಪ್ರಕಟಿಸುತ್ತೇನೆ ಎಂದರು. ಶ್ರೀ ಷಡಕ್ಷರಿ ದಂಪತಿಗಳು ಸಹ ಹಾಜರಿದ್ದರು.

**ಘನಲಿಂಗ ಶಿವಯೋಗಿ ವಿಚಾರ ಸಂಕಿರಣ**

ಬೆಂಗಳೂರಿನ ಬಸವ ಸಮಿತಿ ಮತ್ತು ಮೈಸೂರಿನ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಸಂಯುಕ್ತ ಆಶ್ರಯದಲ್ಲಿ ದಿನಾಂಕ 23.6.2009 ರಂದು, ಸರಸ್ವತಿಪುರಂ ಜೆಎಸ್ಎಸ್ ಪ್ರಾಥಮಿಕ ಶಾಲೆಯಲ್ಲಿ, ಘನಲಿಂಗ ಶಿವಯೋಗಿಗಳವರ ಕುರಿತು ಒಂದು ದಿನದ ವಿಚಾರಸಂಕಿರಣ ನಡೆಯಿತು.

ವಿಚಾರಸಂಕಿರಣವನ್ನು ಉದ್ಘಾಟಿಸಿದ ಖ್ಯಾತ ಸಾಹಿತಿ ಪ್ರೊ. ದೇಜಗೌರವರು "ಅಪಾರವಾದ ಅಧ್ಯಯನದ ಮೂಲಕ ಆಳವಾದ ಪಾಂಡಿತ್ಯವನ್ನು ಗಳಿಸಿದ್ದ ಶ್ರೀ ಘನಲಿಂಗ ಶಿವಯೋಗಿಗಳು ತಾವು ಓದಿ ಕಲಿತದ್ದನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಒಬ್ಬ ಮಹಾನ್ ಸಂತರಾಗಿದ್ದರು. ಲೌಕಿಕ ಸುಖಭೋಗಗಳಿಂದ ಮನುಷ್ಯನ ಉದ್ಧಾರ ಸಾಧ್ಯವಿಲ್ಲವೆಂದು ನಂಬಿದ್ದ ಅವರು ನಿರ್ವಾಣದಿಂದ ಮಾತ್ರ ಜೀವಿಯ ಉದ್ಧಾರ ಎಂದು ಸಾರಿದರು. ಶರಣಸತಿ-ಲಿಂಗಪತಿ ಭಾವದ ವಚನಗಳ ಮೂಲಕ ತಾವು ಕಂಡ ಸತ್ಯವನ್ನು ಜಗತ್ತಿಗೆ ಸಾರಿದರು. ನುಡಿದಂತೆ ನಡೆದ ಮಹಂತರು ಅವರು" ಎಂದು ನುಡಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬಸವ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಚ್.ಎಸ್. ರೇಣುಕಾಪ್ರಸಾದ್‌ರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ, ಶರಣ ಸಾಹಿತ್ಯದ ಪ್ರಚಾರಕ್ಕಾಗಿ ಬಸವ ಸಮಿತಿಯು ಕೈಗೊಂಡಿರುವ ಕಾರ್ಯಕ್ರಮಗಳನ್ನು ಸಭೆಗೆ ಪರಿಚಯಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀ ಎನ್. ಬಸವಾರಾಧ್ಯರ ಅಧ್ಯಕ್ಷತೆಯಲ್ಲಿ ನಡೆದ ಮೊದಲನೆಯ ಗೋಷ್ಠಿಯಲ್ಲಿ ಪ್ರೊ. ಚಂದ್ರಶೇಖರಯ್ಯ ಮತ್ತು ಡಾ. ಬಿ.ಎನ್. ಸುಮಿತ್ರಾಬಾಯಿ ಯವರು ಪ್ರಬಂಧಗಳನ್ನು ಮಂಡಿಸಿದರು. ಡಾ. ಎಂ.ಜಿ. ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯಲ್ಲಿ ಗೋಷ್ಠಿಯ ಶ್ರೀ ಜಯದೇವಪ್ಪ ಜೈನಕೇರಿ ಹಾಗೂ ಡಾ. ಬಿ. ನಂಜುಂಡಸ್ವಾಮಿಯವರು ಪ್ರಬಂಧ ಮಂಡನೆ ಮಾಡಿದರು.

**ಹಿರಿಯ ಗುರುಗಳ ದಿವ್ಯ ಸಂಕಲ್ಪದಂತೆ ಅಮೇರಿಕದಲ್ಲಿ ಈ ಆಧ್ಯಾತ್ಮಿಕ ಕೇಂದ್ರ**

ದಿನಾಂಕ 10.7.2009 ರಂದು ಅಮೆರಿಕದ ಮೇರಿಲ್ಯಾಂಡ್‌ನ ಜೆಎಸ್ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ವಿಗ್ರಹಗಳ ಪ್ರತಿಷ್ಠಾಪನೆ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠದ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ದಿವ್ಯ ಸಾನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡಿದರು.

ಪೂಜ್ಯರು ಮಾತನಾಡುತ್ತಾ "ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ದಿವ್ಯಸಂಕಲ್ಪದಂತೆ ಇಲ್ಲಿ ಈ ಆಧ್ಯಾತ್ಮಿಕ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರು ಅಹರ್ನಿಶಿ ಶ್ರಮಿಸುತ್ತಿರುವುದರಿಂದ ಕೇಂದ್ರದ ಬೆಳವಣಿಗೆ ಸಾಧ್ಯವಾಗುತ್ತದೆ. ಅನೇಕ ಸಾಧುಸಂತರು



ಹಾಗೂ ಪೂಜ್ಯರುಗಳ ಆಗಮನದಿಂದ ಕೇಂದ್ರ ಹೆಚ್ಚು ಹೆಚ್ಚು ಬೆಳೆಯುತ್ತಿದೆ" ಎಂದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಮೆರಿಕದ ಮಾಂಟ್ಗೊಮರಿ ಕೌಂಟಿ ಎಗ್ಸಿಕ್ಯುಟಿವ್ ಮಿ. ಐಸ್ ಲೆಗೆಟ್ ಅವರು "ನಾವು ಯಾವುದೇ ಪ್ರದೇಶ, ಧರ್ಮಕ್ಕೆ ಸೇರಿರಲಿ, ಬಡವ- ಶ್ರೀಮಂತರಿರಲಿ, ನಾವೆಲ್ಲಾ ಒಟ್ಟಾಗಿ ಜೀವನ ನಡೆಸುವ ಅಗತ್ಯವಿದೆ" ಎಂದು ತಿಳಿಸಿದರು.

ಇಂಥ ಅನ್ಯೋನ್ಯ ಸಂಬಂಧಗಳು ಬೆಳೆಯುವುದು ಆಧ್ಯಾತ್ಮಿಕತೆ ಯಿಂದ ಮಾತ್ರ ಸಾಧ್ಯ. ಜೆಎಸ್ಎಸ್ ಸ್ಪಿರಿಚ್ಯುಯಲ್ ಮಿಷನ್ ಇಲ್ಲಿ ಆ ಕಾರ್ಯವನ್ನು ಸಮರ್ಥವಾಗಿ ಮಾಡುತ್ತಿದೆ. ನಾನು ಅದನ್ನು ಹತ್ತಿರದಿಂದ ಗಮನಿಸುತ್ತಿದ್ದೇನೆ ಎಂದರಲ್ಲದೆ, ಕೇಂದ್ರದ ಎಲ್ಲ ಚಟುವಟಿಕೆಗಳಿಗೂ ತಮ್ಮ ಸಂಪೂರ್ಣ ಸಹಕಾರ ಇದೆ ಎಂದು ತಿಳಿಸಿದರು.

**ವಿಗ್ರಹಗಳ ಉದ್ಘಾಟನೆ**

ಜೆಎಸ್ಎಸ್ ಮಹಾವಿದ್ಯಾಪೀಠದ ಅಮೆರಿಕದ ಶಾಖೆಯನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಬಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಮಾತನಾಡಿ, "ಮನಸ್ಸಿನಿಂದ ರಾಗ-ದ್ವೇಷ ಭಾವನೆಗಳು ಹೋದಾಗ ಮನುಷ್ಯ ಸಹಜವಾಗಿ ಸಂತೋಷದಿಂದಿರಲು ಸಾಧ್ಯ" ಎಂದು ನುಡಿದರು.

ಮೂಡಬಿದರೆ ಜೈನಮಠದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಮಾತನಾಡಿ, "ಭೌತಿಕ ಸಂಪತ್ತುಳ್ಳ ಈ ಭಾಗದ ಜನಗಳಿಗೆ ತಮ್ಮ ಮಾನಸಿಕ ಒತ್ತಡಗಳಿಂದ ಬಿಡುಗಡೆಗೊಳ್ಳಲು ಜೆಎಸ್ಎಸ್ ಸ್ಪಿರಿಚ್ಯುಯಲ್ ಕೇಂದ್ರ ಸಹಕಾರಿಯಾಗಲಿ. ಇಲ್ಲಿ ದೇವಾಲಯವನ್ನು ಸ್ಥಾಪಿಸುವುದರ ಮೂಲಕ ಸುತ್ತೂರು ಮಠ ಧಾರ್ಮಿಕ ಪ್ರಸಾರಕ್ಕೆ ಅವಕಾಶ ಕಲ್ಪಿಸಿದೆ. ದೇವಾಲಯದಲ್ಲಿ ದೇವತೆಗಳಿಗೆ ಪೂರ್ಣಕುಂಭ ಅಭಿಷೇಕ ಮಾಡುವ ರೀತಿ ಯಲ್ಲಿಯೇ ನಮ್ಮ ಮನಸ್ಸನ್ನು ತುಂಬಿಕೊಳ್ಳುವ ಅಗತ್ಯವಿದೆ" ಎಂದು ತಿಳಿಸಿದರು.

ಅಮೆರಿಕದ ಭಾರತ ರಾಯಭಾರಿ ಕಛೇರಿಯ ಶ್ರೀ ಸಂಜಯ್ ಸಿನ್ಹಾರವರು ಮಾತನಾಡಿ ಜೆಎಸ್ಎಸ್ ಮಹಾವಿದ್ಯಾಪೀಠವು ದೇಶವಿದೇಶದಲ್ಲಿ ಹಲವಾರು ದಶಕಗಳಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುತ್ತಿದೆ. ಅದನ್ನು ಈಗ ಅಮೆರಿಕ ದೇಶಕ್ಕೂ ವಿಸ್ತರಿಸಿರುವುದು ಭಾರತೀಯ ಸಂಸ್ಕೃತಿ, ಕಲೆಗಳ ಪ್ರಸಾರಕ್ಕೆ ಹೆಚ್ಚು ಸಹಕಾರಿಯಾಗಲಿದೆ. ಮಹಾವಿದ್ಯಾಪೀಠ ಈಗಾಗಲೇ ಭಾರತದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ಮಹಾನ್ ಕೊಡುಗೆ ನೀಡಿದ್ದು, ಅದು ಇಲ್ಲಿಗೂ ವಿಸ್ತರಿಸುವುದರಲ್ಲಿ ಯಾವುದೇ ಸಂಶಯವಿಲ್ಲವೆಂದು ಅಭಿಪ್ರಾಯಪಟ್ಟರು.

ಮೇಲುಕೋಟೆ ಶಾಸಕ ಶ್ರೀ ಸಿ.ಎಸ್. ಪುಟ್ಟರಾಜು, 'ಅಕ್ಕ'ದ ಅಧ್ಯಕ್ಷ ಶ್ರೀ ಅಮರನಾಥಗೌಡ, ಉತ್ತರ ಅಮೆರಿಕದ ಜೈನ ಸಮಾಜದ ಉಪಾಧ್ಯಕ್ಷ ಶ್ರೀ ಸುಶೀಲ್ ಜೈನ್, 'ಅಕ್ಕ'ದ ಕಾರ್ಯಾಧ್ಯಕ್ಷ ಶ್ರೀ ರವಿ ಡೆಂಕಣಿಕೋಟೆ, ಅಮೆರಿಕ ಒಕ್ಕಲಿಗರ ಸಂಘದ ಅಧ್ಯಕ್ಷ ಶ್ರೀ ವಿಶ್ವಾಮಿತ್ರ,

ವಾಷಿಂಗ್‌ಟನ್ ಡಿ.ಸಿ. ಕಾವೇರಿ ಕನ್ನಡ ಕೂಟದ ಅಧ್ಯಕ್ಷೆ ಶ್ರೀಮತಿ ಮೀನಾ ರಾವ್, ವಿಎಸ್‌ಎನ್‌ಎ ಅಧ್ಯಕ್ಷರಾದ ಶ್ರೀ ಸುಂದರೇಶ್ ಸಿದ್ದಯ್ಯ, ಬೆಂಗಳೂರಿನ ವಿವೇಕಾನಂದ ಅನುಸಂಧಾನ ಸಂಸ್ಥೆಯ ಶ್ರೀ ಅಶೋಕ್ ಕುಮಾರ್, ಕಾವೇರಿ ಕನ್ನಡ ಕೂಟದ ಸದಸ್ಯ ಹಾಗೂ ಅಂಕಣಕಾರ ಶ್ರೀ ಶ್ರೀವತ್ಸ ಜ್ಯೋಶಿ, ಮಾಜಿ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಮೆರಿಕ ಶಾಖೆಯ ಅಧ್ಯಕ್ಷ ಡಾ. ಮೃತ್ಯುಂಜಯ ಗೊಂಚಿಗಾರ್, ಮಾಂಟ್ಗೊಮರಿ ಕೌಂಟಿಯ ಏಷ್ಯಾ ಕಮ್ಯುನಿಟಿ ಅಧ್ಯಕ್ಷರಾದ ಲಿಲ್ಲಿ ಚಿ ಹಾಗೂ ಅಟಾರ್ನಿ ಮಿ. ಸ್ಟೀವ್ ರಾಬಿನ್ಸ್ ಅವರುಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

ಜುಲೈ 10 ರಂದು ಬೆಳಗ್ಗೆ ತಾತ್ಕಾಲಿಕವಾಗಿ ನಿರ್ಮಿಸಿರುವ ದೇವಾಲಯವನ್ನು ಉದ್ಘಾಟಿಸಲಾಯಿತು. ಬಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು. ಜುಲೈ 12 ರಂದು ವಿಧ್ಯುಕ್ತವಾಗಿ ಮೂರ್ತಿಗಳ ಪ್ರತಿಷ್ಠಾಪನೆಯನ್ನು ನೆರವೇರಿಸಲಾಯಿತು. ವಿದ್ವಾನ್ ಶ್ರೀ ಮಲ್ಲಣ್ಣ ಹಾಗೂ ಶ್ರೀ ಮಂಜುನಾಥ್‌ರವರು ಮೂರ್ತಿಗಳ ಪ್ರತಿಷ್ಠಾಪನೆಯನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಏರ್ಪಾಟಾಗಿದ್ದ ಖ್ಯಾತ ಪಿಟೀಲು ವಿದ್ವಾಂಸರಾದ ಮೈಸೂರು ಡಾ. ಎಂ. ಮಂಜುನಾಥ್‌ರವರ ಸಂಗೀತ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತು. ಪ್ರಾರಂಭದಲ್ಲಿ ಅವರು ಭಾರತದ ಶಾಸ್ತ್ರೀಯ ಸಂಗೀತದ ಮಹತ್ವ ಹಾಗೂ ವಿಶೇಷತೆಗಳ ಬಗೆಗೆ ಸಂಕ್ಷಿಪ್ತ ವಿವರಣೆ ನೀಡಿದರು. ನ್ಯೂಜೆರ್ಸಿಯ ಶ್ರೀ ಅರುಣ್ ರಾಮಮೂರ್ತಿ ಹಾಗೂ ಪೂವಲೂರು ಶ್ರೀ ಶ್ರೀನಿವಾಸ್‌ರವರು ಪಕ್ಕವಾದ್ಯ ಸಹಕಾರ ನೀಡಿದರು. ಖ್ಯಾತ ಭರತನಾಟ್ಯ ಕಲಾವಿದೆ ಶ್ರೀಮತಿ ವಸುಂಧರಾ ದೊರೆಸ್ವಾಮಿಯವರು ಆಕರ್ಷಕವಾಗಿ ಭರತನಾಟ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀಮತಿ ಶುಭಾ ಮರವಾಡ, ಶ್ರೀಮತಿ ಶೀಲಾ ಕುಮಾರ್ ಹಾಗೂ ಶ್ರೀಮತಿ ಉಮಾ ಇಟಗಿಯವರುಗಳು ಸಹ ಭರತನಾಟ್ಯ ಪ್ರದರ್ಶನ ನೀಡಿದರು. ಸ್ಥಳೀಯ ಕಲಾವಿದರು ಮೂರು ದಿನಗಳೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ನಿನ ಪರಿಚಯವನ್ನು ಶ್ರೀ ಕುಮಾರ್ ರಾಜಶೇಖರ್ ಹಾಗೂ ಶ್ರೀ ಮಹೇಶ್ ನಾಗರಾಜಯ್ಯರವರು ಮಾಡಿದರು. ಶ್ರೀ ಉಮೇಶ್ ಮೂರ್ತಿ, ಶ್ರೀಮತಿ ಕುಮಾರಿ ರಾವ್, ಅಧ್ಯಕ್ಷರಾದ ಶ್ರೀ ಸುಭಾಷ್ ಮಲಘನ್, ಶ್ರೀ ಸಂಪತ್ ಸೂಲಕುಂಟೆ, ಶ್ರೀ ಹೇಮಂತರಾಜು, ಶ್ರೀ ಸುಬ್ಬಣ್ಣ ಇವರುಗಳು ಉಪಸ್ಥಿತರಿದ್ದರು. ಕಾರ್ಯಕ್ರಮಗಳನ್ನು ಶ್ರೀ ರಾಜೇಂದ್ರ ಜೀಮಾರಹಳ್ಳಿ, ಶ್ರೀಮತಿ ವೀಣಾ ತೋಟಕುರ, ಶ್ರೀಮತಿ ಜಯಶ್ರೀ ಜಗದೀಶ್, ಶ್ರೀಮತಿ ಸೋನಲ್ ಸೂಲಕುಂಟೆ, ಶ್ರೀ ಮೃತ್ಯುಂಜಯ ಮಹಾಶೆಟ್ಟಿ, ಶ್ರೀಮತಿ ಪ್ರಭಾ ಮರವಾಡ, ಶ್ರೀ ನಾಗಶಂಕರ್, ಶ್ರೀ ಪುಟ್ಟರಾಜು, ಶ್ರೀ ಮಾದಯ್ಯ, ಶ್ರೀಮತಿ ಶಾಂತಲಾ ಬಸಪ್ಪ ಹಾಗೂ ಶ್ರೀಮತಿ ರೇಶ್ಮಾ ಕೋಟಿ ನಿರೂಪಿಸಿದರು. ಅಮೆರಿಕಾದ ವಿವಿಧ ಪ್ರಾಂತ್ಯಗಳು, ಕೆನಡಾ ಹಾಗೂ ಭಾರತದಿಂದ ಆಗಮಿಸಿದ್ದ ಪ್ರತಿನಿಧಿಗಳು ಮೂರು ದಿನಗಳ ಕಾರ್ಯಕ್ರಮದುದ್ದಕ್ಕೂ ಉತ್ಸಾಹದಿಂದ ಭಾಗವಹಿಸಿದ್ದರು.



**ಡಾ. ರಾಜ್‌ಕುಮಾರ್ ಸಂಸ್ಕೃತಿಯ ಹರಿಕಾರರು**

ಕನ್ನಡ ಮೇರುನಟ ಡಾ. ರಾಜ್‌ಕುಮಾರ್‌ರವರು ಕೇವಲ ಒಬ್ಬ ನಟರಾಗಿರಲಿಲ್ಲ. ಇಡೀ ಭಾರತೀಯ ಸಂಸ್ಕೃತಿಯೇ ಅವರಲ್ಲಿ ಮೇಳೈಸಿದಂತೆ ಅವರ ಜೀವನಕ್ರಮವೂ ಇತ್ತು. ಅಂತಹ ಮತ್ತೊಬ್ಬ ನಟರು ಹುಟ್ಟಿಬರಬೇಕಾದರೆ ಮತ್ತೊಂದು ಶತಮಾನವೇ ಬೇಕಾದೀತು. ಅವರು ವರ್ಣರಂಜಿತ ಪರಿಸರದ ನಡುವೆ ಬದುಕುತ್ತಿದ್ದರು, ಸಂತರಂತೆ ಚಿಂತಿಸುತ್ತಿದ್ದರು, ಅವರಂತೆ ಅಭಿನಯ ಮತ್ತು ಗಾಯನ ಎರಡೂ ಕ್ಷೇತ್ರದಲ್ಲಿ ಎತ್ತರಕ್ಕೆ ಏರಿದ ಮತ್ತೊಬ್ಬ ಕಲಾವಿದರೂ ಭರತಖಂಡದಲ್ಲಿಯೇ ಅಪರೂಪ ಎಂದು ತಿಳಿಸಿದರು.

ಪರಮಪೂಜ್ಯರು ದಿನಾಂಕ 5.8.2009 ರಂದು ಮೈಸೂರು ನಗರ ವಸ್ತುಪ್ರದರ್ಶನದ ಆವರಣದಲ್ಲಿ ವರನಟ ಡಾ. ರಾಜ್‌ಕುಮಾರ್ ಅವರ ಪುತ್ಥಳಿಯ ಅನಾವರಣದ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡುತ್ತಿದ್ದರು.

ಪುತ್ಥಳಿಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಅನಾವರಣ ಮಾಡಿದರು. ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವೆಯಾದ ಕು. ಶೋಭಾ ಕರಂದ್ಲಾಜೆ ಶಾಸಕ ಶ್ರೀ ಶಂಕರಲಿಂಗೇಗೌಡ, ಜಿಲ್ಲಾಧಿಕಾರಿ ಪಿ. ಮಣಿವಣ್ಣನ್, ಪ್ರಾಧಿಕಾರದ ಅಧ್ಯಕ್ಷ ಬಿ.ಪಿ. ಮಂಜುನಾಥ್, ಮಹಾಪೌರ ಪುರುಷೋತ್ತಮ್ ಮುಂತಾದವರು ಹಾಜರಿದ್ದರು. ಸಮಾರಂಭದಲ್ಲಿ ಪುತ್ಥಳಿ ತಯಾರಕರಾದ ಶಿಲ್ಪಿ ಶ್ರೀದೇಶಪಾಂಡೆ ಮತ್ತು ಅವರ ಶ್ರೀಮತಿಯವರನ್ನು ಸನ್ಮಾನಿಸಲಾಯಿತು.

**ಮೈಸೂರು-ಧರ್ಮಸ್ಥಳಗಳ ಬೆಸುಗೆಯ ಸಂಕೇತ 'ವೃಷಭೇಂದ್ರ ವಿಳಾಸ'**

"ನಂಜುಂಡ ಭಾಗವತನು ರಚಿಸಿರುವ ವೃಷಭೇಂದ್ರ ವಿಳಾಸ ಯಕ್ಷಗಾನ ಮಹಾನಾಟಕವು ಮೈಸೂರು ಹಾಗೂ ಧರ್ಮಸ್ಥಳ ಕ್ಷೇತ್ರಗಳ ನಡುವೆ ಶತಮಾನಗಳಿಂದ ಇರುವ ಬೆಸುಗೆಯನ್ನು ಸಾರುತ್ತಿದೆ. ಈಗ ಅದನ್ನು ಇನ್ನಷ್ಟು ಗಟ್ಟಿ ಮಾಡಲಾಗಿದೆ" — ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಲಿಗಳ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ 5.8.2009 ರಂದು ನಡೆದ 'ವೃಷಭೇಂದ್ರ ವಿಳಾಸ' ಯಕ್ಷಗಾನ ಮಹಾನಾಟಕದ ಪ್ರಥಮ ಪ್ರದರ್ಶನವನ್ನು ವೀಕ್ಷಿಸಿದ ಬಹುತೇಕ ಗಣ್ಯರು ಹೀಗೆ ಅಭಿಪ್ರಾಯಪಟ್ಟರು.

"ಮೈಸೂರು ಅರಸರ ಕಾಲದಲ್ಲಿ 18ನೇ ಶತಮಾನದಲ್ಲಿ ಧರ್ಮಸ್ಥಳ ಮೇಳ ಮೈಸೂರಿಗೆ ಆಗಮಿಸಿತ್ತು. ಆ ಯಕ್ಷಗಾನವನ್ನು ಮೆಚ್ಚಿದ ಮೈಸೂರಿನ ಅರಸರು ಮೇಳವನ್ನು ಇಲ್ಲಿಯೇ ಉಳಿಸಿಕೊಂಡರು. ಆ ಕಾಲದಲ್ಲಿ ಭಾಗವತನಾಗಿದ್ದ ನಂಜುಂಡ ಭಾಗವತನು ರಚಿಸಿದ 'ವೃಷಭೇಂದ್ರ ವಿಳಾಸ'ವನ್ನು ಸಂಪಾದಿಸಿ ಪ್ರಕಟಿಸುವ ಮೂಲಕ ಸುತ್ತೂರು ಸ್ವಾಮೀಜಿಯವರು

ಧರ್ಮಸ್ಥಳ ಮತ್ತು ಮೈಸೂರಿನ ನಡುವೆ ಇರುವ ಸಂಬಂಧವನ್ನು ಗಾಢಗೊಳಿಸಿದ್ದಾರೆ" ಎಂದು ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಶ್ರೀ ಹರ್ಷೇಂದ್ರ ಕುಮಾರ್‌ರವರು ಅಭಿಪ್ರಾಯಪಟ್ಟರು.

ಇದೇ ಅಭಿಪ್ರಾಯವನ್ನು ಪೂಜ್ಯ ಶ್ರೀಗಳವರು ಮತ್ತು ಯಕ್ಷಗಾನ ವಿದ್ವಾಂಸ ಪ್ರೊ. ಪ್ರಭಾಕರ ಜೋಷಿ ಅವರೂ ಅನುಮೋದಿಸಿದರು. "ನಂಜುಂಡ ಭಾಗವತ ಮೈಸೂರಿನವನೆ ಅಥವಾ ಕರಾವಳಿ ಭಾಗದವನೆ ಎನ್ನುವ ಬಗ್ಗೆ ಏನೇ ಗೊಂದಲಗಳು ಇದ್ದರೂ ಆತ ಧರ್ಮಸ್ಥಳ ಮಂಜುನಾಥೇಶ್ವರನ ಭಕ್ತ ಎನ್ನುವುದರಲ್ಲಿ ಅನುಮಾನವಿಲ್ಲ. ಆ ಕೃತಿ ಈಗ ಯಕ್ಷಗಾನ ರಂಗದಲ್ಲಿ ಅಭಿನಯಿಸಲ್ಪಡುತ್ತಿರುವುದು ಐತಿಹಾಸಿಕ ಕ್ಷಣ" ಎಂದು ಶ್ರೀ ಪ್ರಭಾಕರ ಜೋಷಿ ಹೇಳಿದರು.

ಬಿಜಾಪುರ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿ ಗಳಾದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಮಾತನಾಡಿ "ಹೊರಗಣ್ಣಿಗೆ ಕಾಣುವಂತೆ ಬಸವಣ್ಣನವರ ಜೀವನಚರಿತ್ರೆಯನ್ನು ಅಭಿನಯಿಸಬಹುದು. ಆದರೆ ಬಸವಣ್ಣನವರ ಒಳಗಣ್ಣನ್ನು ಅಭಿನಯಿಸಿ ತೋರಿಸುವುದು ಕಷ್ಟ. ಅಂತಹ ಪ್ರಯತ್ನಕ್ಕೆ ಕಲಾವಿದರು ಮುಂದಾಗಿರುವುದು ಶ್ಲಾಘನೀಯ" ಎಂದರು. ಇಡೀ ಸಭೆ ಕರತಾಡನದಿಂದ ಈ ಮಾತಿಗೆ ದನಿಗೂಡಿಸಿತು.

ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕಾರ್ಯಕ್ರಮವನ್ನು ಉದ್ಘಾಟಿಸಿ ವೃಷಭೇಂದ್ರ ವಿಳಾಸ ಮಹಾನ್ ಕಾವ್ಯವನ್ನು ಯಕ್ಷಗಾನಕ್ಕೆ ಅಳವಡಿಸಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವೆ ಕುಮಾರಿ ಶೋಭಾ ಕರಂದ್ಲಾಜೆ, ದಾವಣಗೆರೆ ಶಾಸಕ ಶ್ರೀ ಶ್ಯಾಮನೂರು ಶಿವಶಂಕರಪ್ಪ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರ್ ಮೊದಲಾದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಶ್ರೀ ಪುತ್ತಿಗೆ ರಘುರಾಮ ಹೊಳ್ಳ ಅವರ ನೇತೃತ್ವದಲ್ಲಿ ಧರ್ಮಸ್ಥಳ ಮೇಳದವರು ಯಕ್ಷಗಾನ ಪ್ರಯೋಗವನ್ನು ನಡೆಸಿಕೊಟ್ಟರು.

**ಸುತ್ತೂರಿನಲ್ಲಿ 'ವೃಷಭೇಂದ್ರ ವಿಳಾಸ' ಯಕ್ಷಗಾನ ಪ್ರದರ್ಶನ**

"ಪ್ರತ್ಯಕ್ಷ ನೋಡಿಯೇ ಮನಗಾಣಬೇಕು (Seeing is Believing) ಎಂಬ ಉಕ್ತಿಯಂತೆ ಸುತ್ತೂರು ಶ್ರೀಮಠದ ಸಾಧನೆಗಳ ಹಿರಿಮೆ-ಗರಿಮೆಗಳು ಈ ದಿನ ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಇಲ್ಲಿನ ಮಕ್ಕಳ ಉಚಿತ ಶಿಕ್ಷಣ ವ್ಯವಸ್ಥೆ, ರೈತರ ಶಿಕ್ಷಣಕ್ಕಾಗಿ ಇರುವ ಕೃಷಿ ವಿಜ್ಞಾನ ಕೇಂದ್ರದ ಚಟುವಟಿಕೆಗಳು, ವೃದ್ಧಾಶ್ರಮ ಮುಂತಾದ ಚಟುವಟಿಕೆಗಳನ್ನು ಗಮನಿಸಿದಾಗ, ನನಗೆ ಮನದಟ್ಟಾಗಿದೆ" ಎಂದು ಧರ್ಮಸ್ಥಳ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಶ್ರೀ ಡಿ. ಹರ್ಷೇಂದ್ರ ಕುಮಾರ್‌ರವರು ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 6.8.2009 ರಂದು ನಡೆದ 'ವೃಷಭೇಂದ್ರ ವಿಳಾಸ'



ಯಕ್ಷಗಾನ ಮಹಾನಾಟಕದ ಪ್ರದರ್ಶನದಲ್ಲಿ ನಡೆದ ಕಲಾವಿದರ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. "ತಮ್ಮ ಇಷ್ಟೊಂದು ಕಾರ್ಯಚಟುವಟಿಕೆಗಳ ನಡುವೆಯೂ ಪೂಜ್ಯ ಶ್ರೀಗಳವರು ಸದಾಕಾಲ ಹಸನ್ಮುಖಿಗಳಾಗಿದ್ದು, ಎಲ್ಲರನ್ನೂ ಅತ್ಯಂತ ಆತ್ಮೀಯವಾಗಿ ಆದರಿಸುವುದನ್ನು ಕಂಡಾಗ ಅವರ ಅಗಾಧ ಸಹನೆ ಮತ್ತು ಪ್ರಶಾಂತ ವ್ಯಕ್ತಿತ್ವದ ಪರಿಚಯವಾಗುತ್ತದೆ. ಇಲ್ಲಿನ ಶಾಲೆಯಲ್ಲಿ ಈಶಾನ್ಯ ಭಾರತದ ಹಲವು ರಾಜ್ಯಗಳ ವಿದ್ಯಾರ್ಥಿ ಗಳೂ ಸೇರಿದಂತೆ ವಿವಿಧ ಪ್ರದೇಶಗಳಿಂದ ಹಲವು ಸಂಸ್ಕಾರಗಳ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳ ನಡುವೆ ಸಾಮರಸ್ಯದ ಭಾವನೆ ಮೂಡಿಸಿ, ಅವರುಗಳ ವಿದ್ಯಾಭಿವೃದ್ಧಿಗೆ ಶ್ರಮಿಸುತ್ತಿರುವುದು ಅತ್ಯುತ್ತಮವಾದ ಕಾರ್ಯವಾಗಿದೆ' ಎಂದು ಅವರು ನುಡಿದರು. ಮುಂದುವರಿದು ಶ್ರೀ ಹರ್ಷೇಂದ್ರ ಕುಮಾರ್‌ರವರು "ಶ್ರೀ ಧರ್ಮಸ್ಥಳ ಕ್ಷೇತ್ರದ ಶ್ರೀ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಲಿಯು ಪ್ರತಿ ವರ್ಷ 180 ಕ್ಕೂ ಹೆಚ್ಚಿನ ಕಾರ್ಯಕ್ರಮಗಳನ್ನು ನಡೆಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಭಕ್ತಾದಿಗಳು ತಮ್ಮ ಸಂಕಷ್ಟಗಳು ಪರಿಹಾರವಾದರೆ ಯಕ್ಷಗಾನ ಮೇಳಗಳನ್ನು ಆಡಿಸುವುದಾಗಿ ಶ್ರೀ ಮಂಜುನಾಥಸ್ವಾಮಿಯಲ್ಲಿ ಹರಕೆ ಹೊರುವ ಸಂಪ್ರದಾಯದ ಮೂಲಕ ಈ ಮಾಧ್ಯಮಕ್ಕೆ ಒಳ್ಳೆಯ ಉತ್ತೇಜನ, ಜನಪ್ರಿಯತೆ ದೊರೆಯುವಂತಾಗಿದೆ" ಎಂದು ನುಡಿದರು.

ಆಶೀರ್ವಚನ ನೀಡಿದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಶ್ರೀ ಹರ್ಷೇಂದ್ರ ಕುಮಾರ್‌ರವರು ಸುತ್ತೂರು ಶ್ರೀಕ್ಷೇತ್ರಕ್ಕೆ ಬಂದಿರುವುದು, ಧರ್ಮಸ್ಥಳವೇ ಸುತ್ತೂರಿಗೆ ಬಂದು ದರ್ಶನ ನೀಡಿದಂತೆ ಭಾಸವಾಗುತ್ತಿದೆ. 'ವೃಷಭೇಂದ್ರ ವಿಳಾಸ' ಕೃತಿಯು ನೂರಾರು ವರ್ಷಗಳ ಹಿಂದೆಯೇ ರಚಿತವಾಗಿದ್ದು, ಕಳೆದ ವರ್ಷ ಅದರ ಬಿಡುಗಡೆ ಸಂದರ್ಭದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದ ಪ್ರಕಾರವಾಗಿ ತಮ್ಮ ಯಕ್ಷಗಾನ ಮಂಡಲಿಯ ಮೂಲಕ ಈ ಕಥಾಪ್ರಸಂಗವನ್ನು ಯಕ್ಷಗಾನಕ್ಕೆ ಅಳವಡಿಸಿ ಪ್ರದರ್ಶನದ ವ್ಯವಸ್ಥೆ ಮಾಡಿರುತ್ತಾರೆ. ಹಾಗೆ ನೋಡಿದರೆ, ಈ ಸಂದರ್ಭದಲ್ಲಿ ಧರ್ಮಾಧಿಕಾರಿಗಳು ಸ್ವತಃ ಸುತ್ತೂರಿಗೆ ಬರಬೇಕಿತ್ತು. ಆದರೆ ಅವರು ಪ್ರವಾಸದಲ್ಲಿರುವ ಕಾರಣ ಅವರ ಪ್ರತಿನಿಧಿಯಾಗಿ ಶ್ರೀ ಡಿ. ಹರ್ಷೇಂದ್ರ ಕುಮಾರ್ ರವರನ್ನು ಕಳುಹಿಸಿಕೊಟ್ಟು ನಮಗೆಲ್ಲಾ ಸಂತೋಷಪಡಿಸಿದ್ದಾರೆ. "ಯಕ್ಷಗಾನದಲ್ಲಿ ಮಾತುಗಾರಿಕೆಯ ವಿನ್ಯಾಸವೇ ಪ್ರಧಾನವಾಗಿದ್ದು, ಈ ಕಲಾವಿದರು ತಮ್ಮ ಪ್ರಬುದ್ಧ ಅಭಿನಯದ ಮೂಲಕ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ" ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಯಕ್ಷಗಾನ ಮಂಡಲಿಯ ಕಲಾವಿದರು ಗಳಿಗೆ ಫಲ-ಪುಷ್ಪ ಹಾಗೂ ಸ್ಮರಣಿಕೆಗಳನ್ನು ನೀಡಿ ಸನ್ಮಾನಿ ಸಲಾಯಿತು. ವೇದಿಕೆಯ ಮೇಲೆ ಶ್ರೀ ಮಹದೇಶ್ವರ ಬೆಟ್ಟದ ಸಾಲೂರು ಮಠಾಧ್ಯಕ್ಷರಾದ ಶ್ರೀ ಮಹದೇವಸ್ವಾಮಿಗಳು ಉಪಸ್ಥಿತರಿದ್ದರು. ಶ್ರೀಮತಿ ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರೀ ಎಚ್.ವಿ. ಧರಣೇಂದ್ರಯ್ಯ, ಶ್ರೀ ಎಸ್.ಪಿ.

ಚಂದ್ರಕಾಂತ್, ಶ್ರೀಮತಿ ಆಶಾ ರಾಜನ್, ವಿಶ್ವ ಬ್ಯಾಂಕಿನ ಅಧಿಕಾರಿಗಳಾದ ಶ್ರೀ ಚಾರ್ಲ್ಸ್ ಫ್ರಾನ್ಸಿಸ್ (ಅಮೆರಿಕ) ಮತ್ತು ಶ್ರೀ ಅಮರನ್‌ರವರು ಉಪಸ್ಥಿತರಿದ್ದರು.

ಸನ್ಮಾನ ಸಮಾರಂಭದ ನಂತರ ಪ್ರದರ್ಶಿತವಾದ 'ವೃಷಭೇಂದ್ರ ವಿಳಾಸ' ಯಕ್ಷಗಾನ ಮಹಾನಾಟಕವನ್ನು ಸುತ್ತೂರಿನ ಜನತೆ, ಅದರಲ್ಲೂ ವಿಶೇಷವಾಗಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ವೀಕ್ಷಿಸಿ ಸಂತೋಷಪಟ್ಟರು.

**ಶ್ರೀಮತಿ ಚಿಂದೋಡಿ ಲೀಲಾ ಅವರದು ಬಹು ದೊಡ್ಡ ಸಾಧನೆ**

ಒಂದು ಕಾಲದಲ್ಲಿ ಅಭಿನಯಕ್ಷೇತ್ರ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. ಅಂತಹ ದಿನಮಾನಗಳಲ್ಲಿ ಶ್ರೀಮತಿ ಚಿಂದೋಡಿ ಲೀಲಾ ಅವರು ಶ್ರೇಷ್ಠ ನಟಿಯಾಗಿ ಖ್ಯಾತಿ ಹೊಂದಿದ್ದಲ್ಲದೆ ನಾಟಕ ಕಂಪನಿಯ ಮಾಲೀಕರಾಗಿಯೂ ಒಂದು ದೊಡ್ಡ ಚರಿತ್ರೆಯನ್ನು ನಿರ್ಮಿಸಿದ್ದಾರೆ. ಅದರಲ್ಲೂ ಬೆಳಗಾಂನಂತಹ ಗಡಿ ನಗರದಲ್ಲಿ ಅವರು ರಂಗಭೂಮಿಯ ಮುಖಾಂತರ ಮಾಡಿದ ಕನ್ನಡದ ಸೇವೆ ಬಹುದೊಡ್ಡದು. ಅನೇಕ ಸಂದರ್ಭಗಳಲ್ಲಿ ಅಲ್ಲಿ ತಮ್ಮ ಜೀವವನ್ನೇ ಪಣವಾಗಿಟ್ಟು ಅವರು ಕನ್ನಡ ರಂಗಭೂಮಿ ಸೇವೆಯನ್ನು ಮಾಡಿದ್ದಾರೆ ಎಂದು ಪರಮಪೂಜ್ಯರು ತಿಳಿಸಿದರು.

ಪೂಜ್ಯರು ಕೆ.ಬಿ.ಆರ್. ಡ್ರಾಮಾ ಕಂಪನಿ ಅಮೃತ ಮಹೋತ್ಸವ ಸಮಾರಂಭದ (28.8.2009) ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದರು. ಬೆಂಗಳೂರಿನ ಜಯನಗರದಲ್ಲಿರುವ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ನಡೆದ ಈ ಸಮಾರಂಭದ ಉದ್ಘಾಟಕರಾಗಿ ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರವರು ಭಾಗವಹಿಸಿದ್ದರು. ಉದ್ಘಾಟನಾ ಭಾಷಣದ ಒಂದು ಹಂತದಲ್ಲಿ ಅವರು ಶ್ರೀಮತಿ ಚಿಂದೋಡಿಲಾಲಾರವರ ಹಳ್ಳಿ ಹುಡುಗಿ ನಾಟಕವನ್ನು ಒಮ್ಮೆ ನೋಡಬೇಕು ಎಂದು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಯು.ಆರ್. ಅನಂತಮೂರ್ತಿಯವರು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಹಿರಿಯ ಅಭಿನೇತ್ರಿ ಡಾ. ಬಿ. ಸರೋಜಾದೇವಿ, ಹಿರಿಯ ರಂಗತಜ್ಞ ಏಣಗಿ ಬಾಳಪ್ಪ, ಅಮೃತ ಮಹೋತ್ಸವದ ಗೌರವಾಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಪಂಚಮಸಾಲಿ ಮಹಾಪೀಠ ಕೂಡಲಸಂಗಮ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳವರು ಅಧ್ಯಕ್ಷತೆ ವಹಿಸಿದ್ದರು.

**ಯಾವುದೇ ಮನುಷ್ಯನು ನೋವನ್ನು ಬಯಸುವುದಿಲ್ಲ**

ಯಾವುದೇ ಮನುಷ್ಯನು ನೋವನ್ನು ಬಯಸುವುದಿಲ್ಲ, ನೋವು ಬಂದಾಗ ನಿವಾರಣೆ ಮಾಡಿಕೊಳ್ಳಲು ಯತ್ನಿಸುತ್ತಾನೆ. ಕಡಿಮೆ ಯಾತನೆಯಲ್ಲಿ ರೋಗ ನಿವಾರಣೆ ಮಾಡುವ ಸೈಬರ್ ನೈಫ್ ಯಂತ್ರವನ್ನು ಎಚ್‌ಸಿಜಿ ಕರ್ನಾಟಕದ ರೋಗಿಗಳಿಗೆ ಒದಗಿಸುವುದು ಶ್ಲಾಘನೀಯ ಎಂದು ಪರಮಪೂಜ್ಯರು ತಿಳಿಸಿದರು.



ದಿನಾಂಕ 28.8.2009 ರಂದು ಬೆಂಗಳೂರಿನ ಹೆಚ್.ಸಿ.ಜಿ. ಆಸ್ಪತ್ರೆ ಆರಂಭಿಸಿರುವ ರೋಬೋಟ್ ಯಂತ್ರ 'ಸೈಬರ್ ನೈಫ್' ಚಿಕಿತ್ಸೆ ಹಾಗೂ ಸರ್ವರೋಗ ಕ್ಯಾನ್ಸರ್ ಅಭಿಯಾನಕ್ಕೆ ಚಾಲನೆ ನೀಡುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಜಗದ್ಗುರುಗಳು ಮಾತನಾಡುತ್ತಿದ್ದರು.

ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ಹೆಚ್.ಸಿ.ಜಿ. ಸಂಸ್ಥೆಯ ಸೈಬರ್ ನೈಫ್‌ಗೆ ಚಾಲನೆ ನೀಡಿದರು.

ನೈಫ್ ಎಂಬ ಪದ ಕೇಳಿದರೆ ಜನ ಭಯ ಬೀಳುತ್ತಾರೆ. ಸೈಬರ್‌ನೈಫ್ ತಾಂತ್ರಿಕವಾಗಿ ಸರಿಯಾದರೂ ರೋಗಿಗೆ ಅಪ್ಯಾಯಮಾನವಾಗುವಂತೆ ಇದನ್ನು 'ರೋಬೋಟಿಕ್ ರೇಡಿಯೋ ಥೆರಫಿ ಸಿಸ್ಟಂ' ಎಂದೇ ಕರೆಯಬೇಕು. ನೈಫ್ ಪದ ಬಳಸಕೂಡದು.

ವೈದ್ಯರು, ದಾದಿಯರು, ವೈದ್ಯಕೀಯ ಸಿಬ್ಬಂದಿಗಳು ರೋಗಿಗಳ ಪಾಲಿಗೆ 'ನಗುಮೊಗದ ವೈದ್ಯ'ರಾಗಿ. ಕತ್ತಲೆಯಲ್ಲಿರುವ ರೋಗಿಗಳ ಪಾಲಿಗೆ ನಿಮ್ಮ ನಗು ಬೆಳಕಿನ ಕಿರಣಗಳನ್ನು ಹರಿಸಬಲ್ಲುದು (ರೋಗಿಯೊಬ್ಬಳ ಅನುಭವದ ಉದ್ಧೃತ).

ಜೀವ ಉಳಿಸುವುದು ವೈದ್ಯರ ಮಹಾನ್ ಧ್ಯೇಯ. ಇಂತಹ ಮಹೋನ್ನತ ಧ್ಯೇಯವನ್ನು ಹೊಂದಿದ ವೈದ್ಯವೃತ್ತಿಯನ್ನು ಪ್ರೀತಿಸಿ, ಕ್ಯಾನ್ಸರ್ ರೋಗಿಗಳ ನೋವನ್ನು ನಿವಾರಿಸಿ.

ಕ್ಯಾನ್ಸರ್ ಬಗ್ಗೆ ಅರಿವನ್ನು ಹೆಚ್ಚಿಸಿ, ರೋಗವನ್ನು ನೋಡುವ ಮನೋಧರ್ಮವನ್ನು ಬದಲಿಸಬೇಕಿದೆ. ತಂಬಾಕು, ಮದ್ಯಪಾನದಿಂದ ಇಂತಹ ಸಂಕಷ್ಟಕ್ಕೆ ತುತ್ತಾಗಬೇಕಾಗುತ್ತದೆ ಎಂದು ಸಾಮಾನ್ಯರನ್ನು ಎಚ್ಚರಿಸಬೇಕು ಎಂದು ಡಾ. ಕಲಾರವರು ಉಪದೇಶ ನೀಡಿದರು.

ಸಮಾರಂಭದಲ್ಲಿ ಲೋಗೋ ಹಾಗೂ ಹಾಗೂ ಸಿ.ಡಿ. ಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಬಿಡುಗಡೆ ಮಾಡಿದರು.

**ಮೈಸೂರಿನಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 94ನೇ ಜಯಂತಿ ಮಹೋತ್ಸವ – 29.8.2009**

**ಪ್ರಜ್ಞಾವಂತರಾಗಿ ನವ ಸಮಾಜ ನಿರ್ಮಿಸಿ - ಶ್ರೀ ಸಿದ್ಧಗಂಗಾ ಶ್ರೀಗಳು**

ಪ್ರತಿಯೊಬ್ಬರೂ ಶಿಕ್ಷಣ ಪಡೆದು ಪ್ರಜ್ಞಾವಂತ ನಾಗರಿಕರಾಗುವ ಮೂಲಕ ನವಸಮಾಜ ನಿರ್ಮಾಣಕ್ಕೆ ನಾಂದಿಯಾಗಬೇಕೆಂದು ಶ್ರೀ ಸಿದ್ಧಗಂಗಾ ಮಠದ ಕರ್ನಾಟಕ ರತ್ನ, ಶತಾಯುಷಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು ಕರೆ ನೀಡಿದರು.

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠ (ಮೈಸೂರು ಶಾಖೆ)ದ ಆವರಣದಲ್ಲಿ ಏರ್ಪಡಿಸಿದ್ದ ಪರಮಪೂಜ್ಯ ರಾಜಗುರುತಿಲಕ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 94ನೇ ಜಯಂತಿ ಮಹೋತ್ಸವದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

**ಸರ್ಕಾರದ ಕೆಲಸ ಮಠಗಳು ಮಾಡುತ್ತಿವೆ - ಶ್ರೀ ಭಾರದ್ವಾಜ್**

ಸರಕಾರ ಮಾಡಬೇಕಾದ ಹಲವು ಕಾರ್ಯಕ್ರಮಗಳನ್ನು ಮಠಗಳು ಮಾಡುತ್ತಿವೆ. ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಬೇಕು ಎಂಬ ಆಸೆ ಇದೆ. ಸುತ್ತೂರು ಶ್ರೀ ಮಠದ ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನದಾಸೋಹ, ಜ್ಞಾನ ದಾಸೋಹ ನೀಡುತ್ತಿದೆ. ಇದು ನಿಜಕ್ಕೂ ಎಂತಹವರೂ ಹೆಮ್ಮೆ ಪಡುವ ಸಂಗತಿಯಾಗಿದೆ. ಒಂದು ಮಠ ಇಷ್ಟೆಲ್ಲಾ ಕ್ಷೇತ್ರಗಳಲ್ಲಿ ಕೆಲಸ ಮಾಡುವುದು ಸಾಧ್ಯವೇ ಎಂದು ಅಚ್ಚರಿಯೂ ಆಗುತ್ತದೆ ಎಂದು ನುಡಿದರು.

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 94ನೆ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು ಅವರು, ಹಿಂದುಳಿದವರು ಮತ್ತು ದೀನ ದಲಿತರಿಗೆ ಉತ್ತಮ ಶಿಕ್ಷಣದ ಅಗತ್ಯವಿದೆ. ಪ್ರಸ್ತುತ ಸಂದರ್ಭದಲ್ಲಿ ದೇಶದ ಅಭಿವೃದ್ಧಿಗೆ ಗುಣಮಟ್ಟದ ಶಿಕ್ಷಣದ ಅಗತ್ಯವಿದೆ. ಅಂಥ ಶಿಕ್ಷಣವನ್ನು ನಮ್ಮ ಶಾಲಾ-ಕಾಲೇಜುಗಳು ಕೊಡಬೇಕು ಎಂದರು.

ಇದಕ್ಕೂ ಮುನ್ನ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆ ಅವರು, ಸರಕಾರ ಮಾಡಬೇಕಾದ ಕೆಲಸಗಳನ್ನು ಮಠಗಳು ಮಾಡುತ್ತಿವೆ. ಈ ಕಾರಣಕ್ಕೆ ರಾಜ್ಯ ಸರಕಾರ ಮಠಗಳಿಗೆ ಸ್ವಲ್ಪಮಟ್ಟಿನ ಅನುದಾನ ನೀಡಿದೆ. ಕೆಟ್ಟುಹೋಗಿರುವ ರಾಜಕೀಯ ವಾತಾವರಣವನ್ನು ಪರಿಶುದ್ಧಗೊಳಿಸುವ ಕೆಲಸ ಮಠಾಧಿಪತಿಗಳಿಂದ ಆಗಬೇಕು ಎಂದರು.

ಸಮಾರಂಭದಲ್ಲಿ ಸಂಸದ ಹೆಚ್. ವಿಶ್ವನಾಥ್, ಕೇಂದ್ರದ ಮಾಜಿ ಸಚಿವ ಎಂ.ವಿ. ರಾಜಶೇಖರನ್, ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಡಾ. ಶಿವರಾಜ್ ವಿ. ಪಾಟೀಲ್, ವಿಧಾನ ಪರಿಷತ್ ಸಭಾಪತಿ ವೀರಣ್ಣ ಮತ್ತಿಕಟ್ಟೆ, ಮೇಯರ್ ಪುರುಷೋತ್ತಮ್, ಜಿಲ್ಲಾ ಪಂಚಾಯತ್ ಅಧ್ಯಕ್ಷ ಧರ್ಮೇಂದ್ರ, ಉಪಾಧ್ಯಕ್ಷೆ ನಂದಿನಿ ಚಂದ್ರಶೇಖರ್ ಇತರರು ಭಾಗವಹಿಸಿದ್ದರು.

**ಜ್ಞಾನನಗರ ಕನಸು**

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಕಾರ್ಯವ್ಯಾಪ್ತಿ ವಿಸ್ತರಣೆ ಮತ್ತು ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಜೊತೆಗೆ ಜ್ಞಾನ ನಗರ ಎಂಬ ನೂತನ ಯೋಜನೆಯನ್ನು ಸಾಕಾರಗೊಳಿಸಲಾಗುವುದು ಎಂದು ಪರಮಪೂಜ್ಯರು ತಿಳಿಸಿದರು.

ಪರಮಪೂಜ್ಯರು ದಿನಾಂಕ 30.8.2009 ರಂದು ಬೆಂಗಳೂರಿನ ಶಿವರಾತ್ರೀಶ್ವರ ಕೇಂದ್ರದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಹಮ್ಮಿಕೊಂಡಿದ್ದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದರು. ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ರಾಷ್ಟ್ರೀಯ ಜ್ಞಾನ ಆಯೋಗದ ಅಧ್ಯಕ್ಷ ಸ್ಯಾಂ ಪಿತ್ರೋಡ ಅವರು ಮಾತನಾಡುತ್ತ ಇ-ಆಡಳಿತದಿಂದ ಕೋಟ್ಯಂತರ ರೂ. ನಷ್ಟವಾಗಿದೆಯೇ ಹೊರತು ಜನಸಾಮಾನ್ಯರಿಗೆ ಕಿಂಚಿತ್ತೂ



ಲಾಭವಾಗಿಲ್ಲ ಎಂದು ತಿಳಿಸಿದರು. ಮುಂದುವರಿದು ಮಾತನಾಡುತ್ತ, ಜ್ಞಾನ ಯಾರೊಬ್ಬರ ಸ್ವತ್ತೂ ಅಲ್ಲ. ಜ್ಞಾನ ಎಲ್ಲೆಡೆ ನಾನಾ ರೂಪದಲ್ಲಿ ಲಭ್ಯವಿದ್ದು, ಸಾಮಾನ್ಯರು ಪಡೆದುಕೊಳ್ಳದ ಹೊರತು ಸಮೃದ್ಧಿ ಮತ್ತು ಅಭಿವೃದ್ಧಿ ಕನಸಿನ ಮಾತು. ವಿದ್ಯಾರ್ಥಿಗಳು ಶಿಸ್ತು, ಗ್ರಹಿಸುವ ಶಕ್ತಿ ಮತ್ತು ಕ್ರಿಯಾಶೀಲತೆ ರೂಢಿಸಿಕೊಳ್ಳಬೇಕು. ಇದಕ್ಕಾಗಿ ಶಿಕ್ಷಣದ ಗುಣಮಟ್ಟ ಹೆಚ್ಚಬೇಕು ಎಂದು ಸಲಹೆ ನೀಡಿದರು.

ದೇಶದಲ್ಲಿ 54 ಸಾವಿರ ಗ್ರಂಥಾಲಯಗಳಿದ್ದು, ಇವು ದಯನೀಯ ಸ್ಥಿತಿಯಲ್ಲಿವೆ. ಇವುಗಳ ಸುಧಾರಣೆಗೆ ರಾಷ್ಟ್ರೀಯ ಗ್ರಂಥಾಲಯ ಆಯೋಗ ಸ್ಥಾಪನೆ ಸೇರಿದಂತೆ 10 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸುವಂತೆ ಕೇಂದ್ರಕ್ಕೆ ರಾಷ್ಟ್ರೀಯ ಜ್ಞಾನ ಆಯೋಗ ಶಿಫಾರಸು ಮಾಡಿದೆ ಪ್ರಾದೇಶಿಕ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದ ಮಾಡುವ ಕೆಲಸ ಆಗಬೇಕು. ಇದಕ್ಕೆ ಕೇಂದ್ರ 500 ಕೋಟಿ ರೂ. ಮೀಸಲಿಡಬೇಕು ಎಂದು ಆಯೋಗ ಸಲಹೆ ನೀಡಿದೆ ಎಂದು ಹೇಳಿದರು.

ಭಾರತದ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ನಾವು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳಿಗೆ ಸರಳ ಉಪಾಯವಿದೆ. ಆದರೆ, ನಾವು ಪರಂಪರೆಯ ಬೇರುಗಳನ್ನು ಮರೆತು ಪಾಶ್ಚಿಮಾತ್ಯ ಸಂಸ್ಕೃತಿಗೆ ಒಗ್ಗಿಕೊಂಡಿದ್ದೇವೆ. ಇದರಿಂದ ಹೊರಬಂದು, ಪಾರಂಪರಿಕ ಜ್ಞಾನವನ್ನು ರಕ್ಷಿಸಬೇಕು ಮತ್ತು ದಾಖಲಿಸಬೇಕು ಎಂದು ಪಿತ್ರೋಡ ಸಲಹೆ ನೀಡಿದರು.

ರಾಷ್ಟ್ರೀಯ ಜ್ಞಾನ ಆಯೋಗದ ಸಲಹೆಗಾರ ಆರ್. ರಘುನಾಥನ್, ಬೆಂಗಳೂರು ವಿ.ವಿ. ಮಾಜಿ ಕುಲಪತಿ ಕೆ. ಸಿದ್ದಪ್ಪ ಮತ್ತಿತರರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಸಾಮೂಹಿಕ ವಿವಾಹ**

ಸುತ್ತೂರು ಶ್ರೀಮಠದ ವತಿಯಿಂದ ಆಯೋಜಿಸಿದ್ದ ನಾಲ್ಕನೆಯ ತಿಂಗಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮೂರು ಜೋಡಿಗಳು ಹೊಸ ಬಾಳಿಗೆ ನಾಂದಿ ಹಾಡಿದರು.

ಜಗದ್ಗುರು ಶ್ರೀ ಮಂತ್ರಮಹರ್ಷಿ ಶಿವರಾತ್ರಿ ಮಹಾಸ್ವಾಮಿಗಳವರ 124 ನೆಯ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ನಡೆದ ಈ ಸಾಮೂಹಿಕ ವಿವಾಹ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡುತ್ತಾ "ವಿವಾಹವೆನ್ನುವುದು ಪವಿತ್ರವಾದುದು. ವೈವಾಹಿಕ ಬದುಕೆಂದರೆ ಹೆಣ್ಣು ಗಂಡುಗಳ ಬಾಂಧವ್ಯವಷ್ಟೇ ಅಲ್ಲ, ವಿವಾಹಿತನು ತನ್ನನ್ನು ಅವಲಂಬಿಸಿರು ವವರನ್ನೆಲ್ಲಾ ಸಾಕುವ ಕೈಂಕರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಜೀವನದಲ್ಲಿ ಬರುವ ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸಿ, ಅನ್ಯೋನ್ಯವಾಗಿ ಬದುಕು ನಡೆಸುವುದೇ ಮುಖ್ಯ" ಎಂದರು. ಶ್ರೀಮಂತರಂತೆ ಸಾಲ ಸೋಲ ಮಾಡಿ ವಿವಾಹವಾಗುವ ಬದಲು ಎಲ್ಲಿ ಅನುಕೂಲತೆ ಇರುತ್ತದೆಯೋ ಅಲ್ಲಿ ಸರಳವಾಗಿ ವಿವಾಹವಾಗುವ ಮೂಲಕ ಸುಂದರ ಬದುಕನ್ನು ಕಟ್ಟಿಕೊಳ್ಳಬೇಕೆಂದು ಕರೆ ನೀಡಿದರು.

ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹಮಠದ ಅಧ್ಯಕ್ಷರಾದ ಶ್ರೀ ಮಹಾಂತಸ್ವಾಮಿಗಳು ಮಾತನಾಡಿ, ದುಂದು ವೆಚ್ಚದ ಮದುವೆ ಮಾಡಿಕೊಂಡು ಸಂಕಷ್ಟದ ಬದುಕು ನಡೆಸುವ ಬದಲು ಇಂತಹ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಕಡಿಮೆ ಖರ್ಚಿನಲ್ಲಿ ವಿವಾಹವಾಗುವ ಮೂಲಕ ಉತ್ತಮ ಬದುಕನ್ನು ರೂಪಿಸಿಕೊಳ್ಳುವಂತೆ ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕಲ್ಮಠದ ಶ್ರೀ ಚಂದ್ರಶೇಖರ ಸ್ವಾಮಿಗಳವರು ಮಾತನಾಡಿ, ನಿಷ್ಠೆ, ಕಾಯಕತತ್ವ ಮೊದಲಾದ ಮೌಲ್ಯಗಳು ಮಾನವನನ್ನು ಸನ್ಮಾರ್ಗದಲ್ಲಿ ನಡೆಸುವ ಮೂಲಕ ಜನಸಾಮಾನ್ಯರ ಬದುಕನ್ನು ಹಸನುಗೊಳಿಸುತ್ತವೆ ಎಂದರು. ಮಕ್ಕಳ ಮದುವೆಗಳಿಗೆ ಹೆತ್ತವರು ಅದ್ದೂರಿ ವೆಚ್ಚ ಮಾಡಿ, ಮನೆ-ಮಠ ಹಾಳುಮಾಡಿಕೊಳ್ಳುವುದನ್ನು ಬಿಟ್ಟು ಇಂತಹ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಮದುವೆ ಮಾಡಿಕೊಂಡು ಶ್ರೀಗಳ ಆಶೀರ್ವಾದ ಪಡೆಯುವುದು ಒಂದು ಭಾಗ್ಯವೆಂದು ಬಣ್ಣಿಸಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ದುಗ್ಗಹಟ್ಟಿಯ ಶ್ರೀ ಪಿ. ವೀರಭದ್ರಪ್ಪನವರು ಆಗಮಿಸಿದ್ದರು. ಉಡಿಗಾಲದ ಶ್ರೀ ಕುಮಾರಸ್ವಾಮಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು

ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಉಪ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿ, ಪಡುವಲ ಮಠದ ಶ್ರೀ ಮಹಾದೇವಸ್ವಾಮಿ, ಮಾಜಿ ಮೇಯರ್ ಶ್ರೀ ದಕ್ಷಿಣಾಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಕೆ.ಎನ್. ಪುಟ್ಟಬುದ್ಧಿ, ಮಾಜಿ ಸದಸ್ಯರಾದ ಕಲ್ಮಳ್ಳಿ ಶ್ರೀ ಶಿವಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ಪ್ರತಿ ತಿಂಗಳೂ ನಡೆಯಲಿರುವ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದ ಬಗೆಗೆ ಸಂಯೋಜನಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸ ಬಹುದು ಅಥವಾ **08221-232217, 232033, 232044** ದೂರವಾಣಿಗಳಲ್ಲಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದು.

□